ಸಾಹಿತ್ಯ ದಾಸೋಹ – ೨೨೧

ಸಂಚಿಕೆ 45 – ಫೆಬ್ರವರಿ 2024

13.01.2024ರ ದಾಸೋಹದ ಬರಹಗಳ ಸಂಕಲನ





ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

13ನೆಯ ಜನವರಿ 2024ರಂದು ನಡೆದ 2024ನೆಯ ಇಸವಿಯ ಮೊದಲ ದಾಸೋಹದ ಸಂಚಿಕೆ ಇಲ್ಲಿದೆ.

'ತಿಂಗಳ ಬೆಳಕು' – ಇದು ಹೊಸ ವರ್ಷ 2024ಕ್ಕೆ ನಮ್ಮ ಪ್ರತಿಷ್ಠಾನದ ಕೊಡುಗೆ. ಇನ್ನು ಮುಂದೆ ಪ್ರತಿ ತಿಂಗಳ ನಾಲ್ಕನೆಯ ಶನಿವಾರ ಅಥವಾ ಭಾನುವಾರ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಅಂತರ್ಜಾಲ ಮುಖೇನ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಮೊದಲನೆಯ 'ತಿಂಗಳ ಬೆಳಕು' ಕಾರ್ಯಕ್ರಮ 24, ಜನವರಿ 2024ರಂದು ನಡೆದು, ಶ್ರೀಮತಿ ಬಿ.ಎಸ್.ಶೈಲಜಾ ಅವರು 'ಖಗೋಲ ವಿಜ್ಞಾನ ಮತ್ತು ನಮ್ಮ ಸಂಸ್ಕೃತಿ' ಕುರಿತು ಮಾತನಾಡಿದರು. 'ತಿಂಗಳ ಬೆಳಕು' ಕಾರ್ಯಕ್ರಮದ ರೂಪರೇಷೆ ಮತ್ತು ಕಾರ್ಯಕ್ರಮದ ವರದಿಯನ್ನು ಒಳಪುಟಗಳಲ್ಲಿ ನೀಡಲಾಗಿದೆ.

ನಮ್ಮ ವೇದಿಕೆಯಲ್ಲಿ ಕಳೆದ ಸುಮಾರು ಎಂಟು ವರ್ಷಗಳಿಂದ ಪ್ರತಿ ವಾರ 'ಕವಿ ಮನ' ಎಂಬ ಅಂಕಣವನ್ನು ನಿರ್ವಹಿಸಲಾಗುತ್ತಿದೆ. ಈ ಅಂಕಣದಲ್ಲಿ ಪ್ರಕಟವಾಗುವ ಕವನಗಳನ್ನು ಪ್ರಕಟಿಸಲು ನಿಧರಿಸಲಾಗಿದ್ದು, ಜನವರಿ 2024ರಲ್ಲಿ ಮೂಡಿ ಬಂದ ಐದು ಕವನಗಳು ಹಾಗೂ 'ಕವಿ ಮನ' ಅಂಕಣದ ಕುರಿತ ಮಾಹಿತಿಯೂ ಈ ಸಂಚಿಕೆಯಲ್ಲಿದೆ.

221ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿ, ವಿವಿಧ ದಾಸೋಹಿಗಳು ಪ್ರಸ್ತುತಪಡಿಸಿದ ಎಲ್ಲಾ ಬರಹಗಳನ್ನೂ ವಿಶ್ಲೇಷಿಸಿದ ಶ್ರೀಮತಿ ಶೀಲಾ ಅರಕಲಗೂಡು ಅವರಿಗೂ, ತಮ್ಮ ಬರಹಗಳನ್ನು ಪ್ರಸ್ತುತಪಡಿಸಿದ ವೇದಿಕೆಯ ಎಲ್ಲ ಸದಸ್ಯರಿಗೂ, ನಮ್ಮ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಹಾಗೂ ಈ ಸಂಚಿಕೆಯನ್ನು ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು

10.02.2024

ದಾಸೋಹದ ಪುಟಗಳಲ್ಲಿ

ಮುಖಚಿತ್ರ: 'ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ' (ಚಿತ್ರ ಕೃಪೆ: ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 221

ಕಾರ್ಯಕ್ರಮ ವರದಿ – ರಾಧಿಕಾ ವಿ. ಗುಜ್ಜರ್



13.01.2024ರ ಶನಿವಾರದಂದು 2024ನೆಯ ಸಾಲಿನ ಮೊದಲ ಸಾಹಿತ್ಯ ದಾಸೋಹವು ಜರುಗಿತು. ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ತಮ್ಮ ಸಾಹಿತ್ಯ ಪ್ರಸ್ತುತಿಗಳನ್ನು ಓದಿ ಭಾಗವಹಿಸಲು, ಅಧ್ಯಕ್ಷರಾದ ಶ್ರೀಮತಿ ಶೀಲಾ ಅರಕಲಗೂಡು ಅವರದ್ದೂ ಸೇರಿ ಒಟ್ಟು 30 ಹೆಸರುಗಳ ನೋಂದಣಿಯಾಗಿದ್ದವು. ಇಳಿ ಮಧ್ಯಾಹ್ನ ಅಥವಾ ಕಿಶೋರ ಸಂಜೆಯ 3.30ಕ್ಕೆ ಆರಂಭವಾದ ಸಾಹಿತ್ಯ ದಾಸೋಹದ ಸೂತ್ರಧಾರರು ಶ್ರೀ ಕೆ.ಎನ್. ಮಹಾಬಲ ಅವರಾಗಿದ್ದರು.

ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಲು ಬಹಳ ಕಾಲದಿಂದಲೂ ಶ್ರೀಮತಿ ಶೀಲಾ ಅರಕಲಗೂಡು ಅವರಿಗೆ ಸಂಚಾಲಕ ಸಮಿತಿಯು ಕೋರಿದ್ದರೂ, ಅದು ಈ ಬಾರಿ ಸಾಕರಗೊಂಡಿತು. ಇದು ವೇದಿಕೆಯ ಎಲ್ಲ ಸದಸ್ಯರಿಗೂ ಸಂತಸ ನೀಡಿದ ವಿಷಯ.

ಶ್ರೀಮತಿ ಸುವರ್ಣಲಕ್ಷ್ಮಿ ಅವರು 221 ನೆಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಶೀಲಾ ಅರಕಲಗೂಡು ಹಾಗೂ ಎಲ್ಲಾ ಪ್ರಸ್ತುತಿಕಾರರು ಮತ್ತು ವೀಕ್ಷಕರನ್ನು ಸ್ವಾಗತಿಸಿ, ಅಧ್ಯಕ್ಷರನ್ನು ಪರಿಚಯಿಸಿದರು. ಶೀಲಾ ಅರಕಲಗೂಡು ಅವರು ಮೈಸೂರಿನಲ್ಲಿ ಜನಿಸಿ, ದಾವಣಗೆರೆಯಲ್ಲಿ ಶಿಕ್ಷಣ ಪಡೆದರು. ಬಿ.ಎಸ್‌ಸಿ, ಎಂಎಡ್, ಡಿಸಿಎಸ್, ಎಂಎಸ್‌ಸಿಪಿ (ಮಾಸ್ಟರ್ ಆಫ್ ಸೈನ್ಸ್ ಇನ್ ಕೌನ್ಸೆಲ್ಲಿಂಗ್ ಅಂಡ್ ಸೈಕೋಥೆರಪಿ) ಪದವಿಗಳನ್ನು ಪಡೆದ ಅವರು, ತಾವು ಓದಿದ ಸೇಂಟ್ ಪಾಲ್ಸ್ ಕಾನ್ವೆಂಟ್ ಬಾಲಕಿಯರ ಪ್ರೌಢಶಾಲೆಯಲ್ಲಿಯೇ 25 ವರ್ಷಗಳ ಕಾಲ ಶಿಕ್ಷಕಿಯಾಗಿ ಹಾಗೂ 5 ವರ್ಷ ಎನ್.ಸಿ.ಸಿ. ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ನಂತರ 2002ರಿಂದ 2019ರವರೆಗೆ ಬೆಂಗಳೂರಿನ ಪ್ರಾರ್ಥನಾ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಈ ಮಧ್ಯೆ ಕನ್ನಡ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆಸಕ್ತಿ ತಳೆದ ಅವರ ಅನೇಕ ಲೇಖನಗಳು, ಕವನಗಳು ಪ್ರಕಟವಾಗಿವೆ. 2021ರ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಅಂತರ್ಜಾಲ ವೇದಿಕೆಯೊಂದಕ್ಕೆ ಶೀಲಾ ಅವರು ರಚಿಸಿದ ಕನ್ನಡ ಭಾಷಾ ಶ್ರೀಮಂತಿಕೆಯನ್ನು ಕುರಿತ 'ಕ' ಕಾರ ಕವನ ಎಲ್ಲೆಡೆ ವೈರಲ್ ಆಗಿ, ಕೆಲವೇ ದಿನಗಳಲ್ಲಿ ದೇಶ-ವಿದೇಶಗಳ ಕನ್ನಡಿಗರನ್ನು ತಲುಪಿ, ಪ್ರಶಂಸೆಗೆ ಪಾತ್ರವಾಗಿದೆ. ನಮ್ಮ

ವೇದಿಕೆಯಲ್ಲಿಯೂ ಸಹಾ ಶೀಲಾ ಅರಕಲಗೂಡು ಅವರು ನಿರಂತರವಾಗಿ ತಮ್ಮ ಬರಹಗಳ ಕೊಡುಗೆ ನೀಡುತ್ತಿರುವುದು ಸಂತಸದ ಸಂಗತಿ.

ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನು ಸವಿವರವಾಗಿ ದಾಖಲಿಸಿದರು. ವೇದಿಕೆಯ ಸ್ಥೂಲ ನೋಟವನ್ನು ನೀಡುವ ಈ ಮಾತುಗಳಿಗೆ ಸದಸ್ಯರಾದ ನಾವೆಲ್ಲ ಸದಾ ದಶ ಕರ್ಣರಾಗಿ ಕಾಯುತ್ತೇವೆ.

ಸಭಾಧ್ಯಕ್ಷರ ಪ್ರಸ್ತುತಿಯನ್ನೂ ಸೇರಿಸಿ ಒಟ್ಟು 24 ದಾಸೋಹಿಗಳು ತಮ್ಮ ಬರಹಗಳನ್ನು ದಾಸೋಹದಲ್ಲಿ ಓದಿದರು. ಕೊನೆಯಲ್ಲಿ ಅಧ್ಯಕ್ಷರು, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಬಗ್ಗೆಯೇ ಬರೆದ ತಮ್ಮ ಅರ್ಥಪೂರ್ಣ ಕವನವನ್ನು ವಾಚಿಸಿ, ತಮ್ಮ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದರು. ಅಷ್ಟೂ ದಾಸೋಹಿಗಳ ಪ್ರಸ್ತುತಿಗಳ ಸವಿವರ ಅವಲೋಕನ, ಅನಿಸಿಕೆ ಮತ್ತು ಒಳನೋಟವನ್ನು ಅತ್ಯಂತ ತಾಳ್ಮೆಯಿಂದ ದಾಖಲಿಸಿ ಅಧ್ಯಕ್ಷ ಸ್ಥಾನದ ಹಿರಿಮೆಯನ್ನು ಮತ್ತೊಮ್ಮೆ ಮೇಲಕ್ಕೇರಿಸಿದರು. ಅವರ ವ್ಯಕ್ತಿತ್ವಕ್ಕೆ ಹೊಂದುವ ರೀತಿಯಲ್ಲಿ ಹೇಳುವುದಾದರೆ, "ಸುವರ್ಣ ಗೆರೆ" ಮೂಡಿಸಿದರು. ಯಾವುದೇ ಪ್ರಸ್ತುತಿ ಅಥವಾ ಓದು, ಶ್ರೀಮತಿ ಶೀಲಾ ಅವರ ಓದಿನಲ್ಲಿ ಕೇಳುವ ಸೊಗಸು ಬಲ್ಲವರೇ ಬಲ್ಲರು. ಅದನ್ನು ಮತ್ತೊಮ್ಮೆ ಸವಿಯುವ ಅವಕಾಶ ನಮ್ಮೆಲ್ಲರದಾಯಿತು.

ಎಳ್ಳು ಬೆಲ್ಲದ ಸಿಹಿಯಂತೆ ಲವಲವಿಕೆಯಿಂದ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದ ಅಧ್ಯಕ್ಷರಿಗೆ ಮೊದಲು ವಂದಿಸುತ್ತಾ ಮತ್ತು ಅವರ ಅಂದಿನ ಕಾರ್ಯನಿರ್ವಹಣೆಯನ್ನು ಮನಸಾರೆ ಹೊಗಳುತ್ತಾ ಶ್ರೀಮತಿ ರೇಣುಕಾ ದೇಸಾಯಿ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ 221ನೆಯ ಸಾಹಿತ್ಯ ದಾಸೋಹಕ್ಕೆ ತೆರೆಯನ್ನೆಳೆದರು.

ಸುಮಾರು 3 ಗಂಟೆ 17 ನಿಮಿಷಗಳ ಕಾಲ ನಡೆದ ಈ ಕಾರ್ಯಕ್ರಮವು ಎಂದಿನಂತೆ ವೇದಿಕೆಯ ಮತ್ತೊಂದು ಯಶಸ್ವೀ ಕಾರ್ಯಕ್ರಮಗಳ ಪಟ್ಟಿಗೆ ಸೇರಿತು.

(ದಾಸೋಹದ ಗೂಗಲ್ ಮೀಟ್ ಆತಿಥ್ಯ: ಶ್ರೀಮತಿ ರಾಧಿಕಾ ವಿ ಗುಜ್ಜರ್, ವಿಡಿಯೋ ರೆಕಾರ್ಡಿಂಗ್: ಶ್ರೀಮತಿ ರೇಣುಕಾ ದೇಸಾಯಿ, ವಿಡಿಯೋ ಮರುಸಂಸ್ಕರಣ: ಶ್ರೀ ಗುರುಪ್ರಸಾದ್ ಹಾಲ್ಕುರಿಕೆ, ಪ್ರಸ್ತುತಿಗಳ ಪಿಡಿಎಫ್ ಸಂಸ್ಕರಣ: ಶ್ರೀ ಎಸ್.ಶೃಂಗೇಶ್ವರ ಶರ್ಮ)

ದಾಸೋಹದ ಸಂಪೂರ್ಣ ಕಾರ್ಯಕ್ರಮವನ್ನು ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***

ತಿಂಗಳ ಬೆಳಕು

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಖಗೋಲ ವಿಜ್ಞಾನ ಮತ್ತು ನಮ್ಮ ಸಂಸ್ಕೃತಿ

ಉಪನ್ಯಾಸಕರು: ಶ್ರೀಮತಿ ಬಿ ಎಸ್ ಶೈಲಜಾ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ತಿಂಗಳ ಬೆಳಕು

'ತಿಂಗಳ ಬೆಳಕು' – ಇದು ಈ ಹೊಸ ವರ್ಷದಲ್ಲಿ (2024) ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ರೂಪಿಸಿರುವ ಹೊಸ ಕಾರ್ಯಕ್ರಮ. ಪ್ರತಿ ತಿಂಗಳೂ ನಾಲ್ಕನೆಯ ಶನಿವಾರ/ಭಾನುವಾರದಂದು ಗೂಗಲ್ ಮೀಟ್ ಅಂತರ್ಜಾಲ ತಾಣ, 'ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ'ಯಲ್ಲಿ 'ತಿಂಗಳ ಬೆಳಕು' ಮೂಡಿ ಬರಲಿದೆ. ಅಂದು ಕನ್ನಡ ಸಾಹಿತ್ಯ, ವಿಜ್ಞಾನ, ಬ್ಯಾಂಕಿಂಗ್ ಅಥವಾ ಇನ್ನಿತರ ಕ್ಷೇತ್ರದಲ್ಲಿ ಪರಿಣತಿ ಪಡೆದ ವೇದಿಕೆಯ ಸದಸ್ಯರು ಅಥವಾ ಇತರ ತಜ್ಞರೊಬ್ಬರು, ಒಂದು ನಿರ್ದಿಷ್ಟ ವಿಷಯದ ಬಗ್ಗೆ 45 ನಿಮಿಷಗಳ ಉಪನ್ಯಾಸ ನೀಡಲಿದ್ದಾರೆ, ಆನಂತರ ವೀಕ್ಷಕರಿಂದ ಸಂವಾದಕ್ಕೂ ಅವಕಾಶವಿದ್ದು. ಇದು ಒಟ್ಟಾರೆ 75 ನಿಮಿಷಗಳ ಕಾರ್ಯಕ್ರಮವಾಗಿರುತ್ತದೆ.

'ತಿಂಗಳ ಬೆಳಕು' ಸುಸೂತ್ರವಾಗಿ ನಡೆಯಲು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವು ಶ್ರೀ ರವಿ ಕುಸುಬಿ (ಸಂಚಾಲಕ) ಶ್ರೀ ಶ್ರೀರಂಗರಾಜನ್ ಹಾಗೂ ಶ್ರೀಮತಿ ರೇಣುಕಾ ದೇಸಾಯಿ (ಸದಸ್ಯರು) ಅವರನ್ನೊಳಗೊಂಡ ಉಪಸಮಿತಿಯನ್ನು ರಚಿಸಿದೆ.

'ತಿಂಗಳ ಬೆಳಕು' ಕಾರ್ಯಕ್ರಮದ ವರದಿಯನ್ನು ಮುಂದಿನ ತಿಂಗಳ 'ಸಾಹಿತ್ಯ ದಾಸೋಹ' ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಮೊದಲ 'ತಿಂಗಳ ಬೆಳಕು" ಕಾರ್ಯಕ್ರಮ ಜನವರಿ 24ರಂದು ಬುಧವಾರ ಸಂಜೆ 5.45ಕ್ಕೆ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿತು. ಶ್ರೀಮತಿ ಬಿ.ಎಸ್. ಶೈಲಜಾ ಅವರು 'ಖಗೋಲ ವಿಜ್ಞಾನ ಮತ್ತು ನಮ್ಮ ಸಂಸ್ಕೃತಿ' ಎಂಬ ವಿಷಯವನ್ನು ಕುರಿತು ತಮ್ಮ ಉಪನ್ಯಾಸ ನೀಡಿದರು.

ಆರಂಭದಲ್ಲಿ ಶ್ರೀ ರವಿ ಕುಸುಬಿಯವರು ಎಲ್ಲರನ್ನೂ ಸ್ವಾಗತಿಸಿ, 'ತಿಂಗಳ ಬೆಳಕು' ಕಾರ್ಯಕ್ರಮದ ರೂಪರೇಷೆಗಳನ್ನು ವಿವರಿಸಿ, ವೇದಿಕೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸಬೇಕೆಂದು ಕೋರಿ, ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಬೆಂ.ಶ್ರೀ. ರವೀಂದ್ರರವರು ತಮ್ಮ ಪ್ರಾಸ್ತಾವಿಕ ನುಡಿಗಳನ್ನು ಆರಂಭಿಸುತ್ತಾ, ವೇದಿಕೆಯ ಸಕ್ರಿಯ ಸದಸ್ಯರಾಗಿದ್ದ ಶ್ರೀ ನಾಗೇಶ್ ಜಿ. ವೈದ್ಯ ಅವರ ನಿಧನಕ್ಕೆ ಸಂತಾಪ ಸೂಚಿಸಿ. ಅವರಿಗೆ ನುಡಿನಮನ ಸಲ್ಲಿಸಿದರು. ಕೆನರಾ ಬ್ಯಾಂಕಿನಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ನಾಗೇಶ್ ವೈದ್ಯರವರು ಓರ್ವ ಚಿಂತನಶೀಲ ಬರಹಗಾರ, ಅಂಕಣಕಾರರಾಗಿದ್ದು, ಬ್ಯಾಂಕಿಂಗ್, ಹಣಕಾಸು, ಆರ್ಥಿಕತೆ ಮಾತ್ರವಲ್ಲದೆ ಇತರ ವಿಷಯಗಳ ಕುರಿತೂ ನಿರಂತರವಾಗಿ ಬರೆಯುತ್ತಿದ್ದರು. ನಮ್ಮ ವೇದಿಕೆಯು ಈ ಹಿಂದೆ ಪ್ರಾ.ಎಚ್ಚೆಸ್ಕೆಯವರ ಸ್ಮರಣಾರ್ಥ ಏರ್ಪಡಿಸಿದ್ದ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮದಲ್ಲಿ ಗ್ರಾಮೀಣ

ಬ್ಯಾಂಕಿಂಗ್ ಬಗ್ಗೆ ಉಪನ್ಯಾಸ ನೀಡಿದ್ದರು. ಇವರ ನಿಧನವು ಹಣಕಾಸು, ಬ್ಯಾಂಕಿಂಗ್ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾಗದ ನಷ್ಟ ಎಂದರು. ಮೃತರ ಆತ್ಮಕ್ಕೆ ಸದ್ಗತಿ ಕೋರಿ ಮೌನ ಆಚರಿಸಲಾಯ್ತು.



ಶ್ರೀ ರವೀಂದ್ರ ಅವರು ಮುಂದುವರಿದು, 2024ರಲ್ಲಿ 'ತಿಂಗಳ ಬೆಳಕು' ಎಂಬ ಹೊಸ ಕಾರ್ಯಕ್ರಮವನ್ನು ವೇದಿಕೆಯು ಆರಂಭಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಪರಿಣಿತರಿಂದ ಉಪನ್ಯಾಸ ಹಾಗೂ ಸಂವಾದ ಏರ್ಪಡಿಸಲಾಗುವುದು. ವೇದಿಕೆಯ ಸದಸ್ಯರು ಕೂಡಾ ಉಪನ್ಯಾಸ ನೀಡಬಹುದು. ಇನ್ನು ಮುಂದೆ ಪ್ರತಿ ತಿಂಗಳ ಎರಡನೇ ಶನಿವಾರ 'ಸಾಹಿತ್ಯ ದಾಸೋಹ' ಹಾಗೂ ನಾಲ್ಕನೇ ಶನಿವಾರ 'ತಿಂಗಳ ಬೆಳಕು' ಕಾರ್ಯಕ್ರಮ ನಡೆಯಲಿದೆ ಎಂದರು.

ನಮ್ಮ ವೇದಿಕೆಯ ಮೊದಲನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಶ್ರೀಮತಿ ಬಿ.ಎಸ್. ಶೈಲಜಾ ಅವರು ಉಪನ್ಯಾಸ ನೀಡುತ್ತಿರುವುದು ಸಂತೋಷದ ವಿಷಯ. ಇವರ ಹೆಸರು ಕನ್ನಡಿಗರಿಗೆ ಚಿರಪರಿಚಿತ. ಇಂದು ಎಲ್ಲರಿಗೂ ಆಸಕ್ತಿಕರವಾದ ಹಾಗೂ ಕುತೂಹಲಕರವಾದ ಖಗೋಲ ವಿಜ್ಞಾನದ ಕುರಿತು ಅವರು ಮಾತನಾಡುತ್ತಿರುವುದು ಸಂತೋಷದ ವಿಚಾರ ಎಂದೂ ಶ್ರೀ ರವೀಂದ್ರ ಅವರು ನುಡಿದರು.

ಶ್ರೀಮತಿ ನಿರ್ಮಲಾ ಅವರು ಉಪನ್ಯಾಸಕಿ ಶ್ರೀಮತಿ ಬಿ ಎಸ್ ಶೈಲಜಾರವರ ಪರಿಚಯ ಮಾಡಿದರು. ಶೈಲಜಾ ಓರ್ವ ಓರ್ವ ಖಗೋಲ ವಿಜ್ಞಾನಿ, ಸಂಶೋಧಕಿ, ಬರಹಗಾರ್ತಿ ಮತ್ತು ಹಲವು ಆಯಾಮಗಳುಳ್ಳ ವಿಶಿಷ್ಟ ಸುಸಂಸ್ಕೃತ ಮಹಿಳೆ. ಭೌತ ವಿಜ್ಞಾನದಲ್ಲಿ ಎಂಎಸ್ಸಿ ಪಡೆದಿರುವ ಇವರು ಭಾರತೀಯ ಖಭೌತ ವಿಜ್ಞಾನ ಸಂಸ್ಥೆಯಲ್ಲಿ ವೇಣು ಬಾಪುರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದರು. ಖಗೋಲ ವಿಜ್ಞಾನಿ ಜಗದೀಶ್‌ಚಂದ್ರ ಭಟ್ಟಾಚಾರ್ಯರೊಂದಿಗೆ ನಕ್ಷತ್ರಗಳು ಹಾಗೂ ಧೂಮಕೇತುಗಳ ಬಗೆಗಿನ ತಮ್ಮ ಅಧ್ಯಯನವನ್ನು ಮುಂದುವರಿಸಿದರು. ಜವಾಹರಲಾಲ್ ನೆಹರು ತಾರಾಲಯದಲ್ಲಿ ಶಿಕ್ಷಣತಜ್ಞರಾಗಿ ನೇಮಕಗೊಂಡ ಇವರು ನಿರ್ದೇಶಕಿಯಾಗಿ ನಿವೃತ್ತಿ ಹೊಂದಿದರಲ್ಲದೆ, ಜವಾಹರ್‌ಲಾಲ್ ನೆಹರು ತಾರಾಲಯದ ಪ್ರಥಮ ಮಹಿಳಾ ನಿರ್ದೇಶಕಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದ್ದಾರೆ. ಇವರು ತಮ್ಮ ಕಾರ್ಯಾವಧಿಯಲ್ಲಿ ತಾರಾಲಯದ ನವೀಕರಣದ ಜೊತೆಗೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನಗಳನ್ನೂ ನಡೆಸಿದ್ದಾರೆ. 300ಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವರಲ್ಲದೆ, ಅನೇಕ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಭೂಮಿಯ ಮೇಲಿರುವ ದೇವಾಲಯಗಳಿಗೂ ಆಕಾಶಕ್ಕೂ ಸಂಬಂಧಿಸಿದ ವಿಷಯಗಳ ಬಗ್ಗೆ ಕುತೂಹಲದಿಂದ ಅಧ್ಯಯನ ನಡೆಸಿದ್ದಾರೆ. ಶಾಸನಗಳಲ್ಲಿ ಖಗೋಲ ವಿಜ್ಞಾನದ ಸಂಗತಿಗಳಿರುವ ಬಗ್ಗೆ ಡಾ.ಚಿದಾನಂದಮೂರ್ತಿಯವರಿಂದ ಆಸಕ್ತಿ ಬೆಳೆಸಿಕೊಂಡು, 17ನೇ ಶತಮಾನದ ಹಸ್ತಪ್ರತಿಗಳ ವಿಶ್ಲೇಷಣೆಯಲ್ಲೂ ತೊಡಗಿದ್ದಾರೆ. ದೂರದರ್ಶನ, ಗೆಲಿಲಿಯೋ ಶುಕ್ರ ಗ್ರಹ ಸಂಕ್ರಮಣ, ಆಗಸದ ಅಲೆಮಾರಿಗಳು, ಧೂಮಕೇತು, ಆಕಾಶದಲ್ಲಿ ಏನಿದೆ ಹೇಗಿದೆ? ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದು, ಇವರು ಶ್ರೀ ಟಿ.ಆರ್. ಅನಂತರಾಮು

ಅವರೊಂದಿಗೆ ಸಂಪಾದಿಸಿದ 'ಸಚಿತ್ರ ಖಗೋಲ ದರ್ಶನ' ಒಂದು ಆಕರ ಗ್ರಂಥವಾಗಿ ಹೆಸರು ಮಾಡಿದೆ. ಶೈಲಜಾ ಅವರು ಆರ್ಯಭಟ ಪ್ರಶಸ್ತಿ, ಎಚ್ಚೆನ್ ದತ್ತಿನಿಧಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ ಎಂದು ಹೇಳಿದರು.

ಶ್ರೀಮತಿ ಬಿ.ಎಸ್,ಶೈಲಜಾರವರು, 'ಖಗೋಲ ಜ್ಞಾನ ಮತ್ತು ನಮ್ಮ ಸಂಸ್ಕೃತಿ' ವಿಷಯ ಕುರಿತ ತಮ್ಮ ಉಪನ್ಯಾಸದಲ್ಲಿ, ನಮ್ಮ ಸಾಹಿತ್ಯ, ಜನಪದ, ಶಿಲ್ಪಕಲೆ, ಚಿತ್ರಕಲೆ ಮತ್ತು ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿ, ಖಗೋಲ ಜ್ಞಾನ ಅಡಕವಾಗಿದೆ ಎಂದರು. ಪ್ರಾತ್ಯಕ್ಷಿಕೆಯೊಂದಿಗೆ ಹಲವಾರು ಉದಾಹರಣೆಗಳನ್ನು ನೀಡಿ ವಿವರಿಸಿದರು.

ಗ್ರಹಣಗಳು ಕುತೂಹಲ ಕೆರಳಿಸುವ ವಿದ್ಯಮಾನಗಳಾಗಿದ್ದು, ಪತ್ರಿಕೆಗಳಲ್ಲಿ ರಾಜಕೀಯವನ್ನು ಬಿಟ್ಟರೆ ಪ್ರಥಮ ಪುಟದಲ್ಲಿ ಸ್ಥಾನ ಪಡೆಯುವುದು ಗ್ರಹಣಗಳಿಗೆ ಸಂಬಂಧಿಸಿದ ವಿಷಯ. ಗ್ರಹಣಗಳ ಬಗ್ಗೆ ಅನೇಕ ರೀತಿಯ ಮೂಢ ನಂಬಿಕೆಗಳಿವೆ. ಇವುಗಳಿಗೆ ವೈಜ್ಞಾನಿಕವಾದ ಆಧಾರಗಳಿಲ್ಲ. ಗ್ರಹಣವನ್ನು ಬರಿಗಣ್ಣಿನಲ್ಲಿ ನೋಡುವ ಪ್ರಯತ್ನ ಮಾಡುವುದನ್ನು ತಡೆಯಲು ಹಿಂದಿನ ಕಾಲದಲ್ಲಿ ಹಿರಿಯರು ಕೆಲವು ನಿಯಮಗಳನ್ನು ಹೇರಿದ್ದರು. ತೀಕ್ಷ್ಣವಾದ ಸೂರ್ಯನನ್ನು ಬರಿಗಣ್ಣಿನಿಂದ ನೋಡಿದರೆ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇದೆ. ರಾಹು ಸೂರ್ಯನನ್ನು ನುಂಗುತ್ತಾನೆ ಎನ್ನುತ್ತಿದ್ದರು.

ಗ್ರಹಣ ಕಾಲದಲ್ಲಿ ಅವರವರ ನಂಬಿಕೆಗೆ ತಕ್ಕಂತೆ ಆಚರಣೆ ಮಾಡುತ್ತಾರೆ. ಗ್ರಹಣದ ಸಂಧರ್ಭ ವಿಷಾನಿಲ ಉಂಟಾಗುತ್ತದೆ ಎನ್ನುವುದಕ್ಕೆ ಅರ್ಥವಿಲ್ಲ. ಗರ್ಭ ಧರಿಸಿದ ಕುರಿ, ಕೋಳಿ, ಹಂದಿಗಳನ್ನು ಪರೀಕ್ಷೆಗೆ ಒಳಪಡಿಸಿ ನೋಡಿದಾಗ ಯಾವ ವ್ಯತ್ಯಾಸವೂ ಕಾಣಲಿಲ್ಲ. ಗ್ರಹಣದ ವಿಚಾರಗಳಲ್ಲಿ ಅನೇಕ ರೀತಿಯ ವದಂತಿಗಳು ಹಬ್ಬಿದ್ದು, ಅವುಗಳಿಗೆ ಸರಿಯಾದ ವೈಜ್ಞಾನಿಕ ಆಧಾರಗಳು ಇಲ್ಲ ಎಂದರು.

ಕನ್ನಡ ಕಾವ್ಯಗಳಲ್ಲಿ 10–11ನೇ ಶತಮಾನದಿಂದ ದಾಖಲೆಗಳು ಸಿಗುತ್ತವೆ ಎಂದು ಹೇಳಿದ ಅವರು, ನಮ್ಮ ಗಾದೆಗಳು. ಸಾಹಿತ್ಯ, ಶಿಲ್ಪಕಲೆ ಹಾಗೂ ಚಿತ್ರಕಲೆಗಳಲ್ಲಿ ಅಡಗಿರುವ ಖಗೋಲ ದರ್ಶನ ಜ್ಞಾನದ ಬಗ್ಗೆ ಮತ್ತು ಸಾಹಿತ್ಯದಲ್ಲಿ ದೊರೆತ ಆಕಾಶ/ಗ್ರಹಣಗಳ ವರ್ಣನೆಯಿಂದ ಹೇಗೆ ಮಾಸ ತಿಥಿಗಳನ್ನು ಲೆಕ್ಕ ಹಾಕಿ ಕಾಲಗಣನೆ ಮಾಡಲಾಗುತ್ತದೆ ಎಂಬುದನ್ನು ಪ್ರಾತ್ಯಕ್ಷಿಕೆಯೊಡನೆ ವಿವರಿಸಿದರು.

ನಮ್ಮಲ್ಲಿ ಹೆಚ್ಚಿನ ದೇವಾಲಯಗಳು ಪೂರ್ವಾಭಿಮುಖವಾಗಿ ಇರುವುದರಿಂದ ಒಂದಿಲ್ಲೊಂದು ದಿನ ಸೂರ್ಯನ ಕಿರಣಗಳು ದೇವತಾ ವಿಗ್ರಹಗಳ ಮೇಲೆ ಬೀಳುತ್ತವೆ. ಕೆಲವೆಡೆ ಸುತ್ತಲಿನ ಕಟ್ಟಡ, ಮರಗಳು ಅಡ್ಡಿಪಡಿಸುವುದರಿಂದ ಅದನ್ನು ಕಾಣಲು ಸಾಧ್ಯವಿಲ್ಲ ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯದಲ್ಲಿ ಮೂರು ದಿನ ಸೂರ್ಯ ರಶ್ಮಿ ದೇವರ ವಿಗ್ರಹದ ಮೇಲೆ ಬೀಳುತ್ತದೆ ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿರುವ ಭದ್ರಬಾಹು ಗುಹೆಯ ಒಳಗೆ ಸೂರ್ಯ ರಶ್ಮಿ ಬೀಳುತ್ತದೆ. ಪವಾಡವೆಂದು ತಿಳಿಯುವ ಇಂತಹ ಸಂಗತಿಗಳನ್ನು ವೈಜ್ಞಾನಿಕವಾಗಿ ಸರಳವಾಗಿಯೇ ಗಮನಿಸಬಹುದಾಗಿದೆ.

ಹಿಂದಿನ ಕೆಲವು ಸಾಹಿತ್ಯದಲ್ಲಿ ಕೆಲವೆಡೆ ಒಗಟಿನ ರೂಪದಲ್ಲಿ ಚಮತ್ಕಾರವಾಗಿ ಅಂಕಿ ಅಂಶಗಳನ್ನು ಬರೆಯುತ್ತಿದ್ದ ರೀತಿಯನ್ನು ವಿವರಿಸಿದರು. ಉದಾಹರಣೆಗೆ ನಾಗ ಋತು ಬಾಣ ವಸುಧಾ ಎಂದರೆ ಎಂಟು, ಆರು, ಐದು ಮತ್ತು ಒಂದು, ಅಂದರೆ 1568ನೇ ವರ್ಷ ಎನ್ನಬಹುದು. ಇಂತಹ ಹಲವು ಸಂಗತಿಗಳನ್ನು ತಮ್ಮ ಗಣಿತಗನ್ನಡಿ ಪುಸ್ತಕದಲ್ಲಿ ಬರೆದಿರುವುದಾಗಿ ತಿಳಿಸಿದರು.

ಅನೇಕ ಹಳೆಯ ಕಾವ್ಯಗಳಲ್ಲಿ ಆಕಾಶದ ವರ್ಣನೆ ಸಿಗುತ್ತದೆ ಎಂದ ಅವರು, ಲಕ್ಷ್ಮೀಶನ ಕಾವ್ಯದಲ್ಲಿ ಬಂದಿರುವ ನಕ್ಷತ್ರಗಳ ಬಗೆಗಿನ ಒಂದು ಪದ್ಯವನ್ನು ಬಿಡಿಸಿ ವಿವರಿಸಿದರು. ಆಕಾಶದಲ್ಲಿ ಸೂರ್ಯಾಸ್ತ ಮತ್ತು ಚಂದ್ರೋದಯ ಎರಡೂ ಕಾಣುವುದು ಹುಣ್ಣಿಮೆಯ ಹಿಂದಿನ ಚತುರ್ದಶಿಯಲ್ಲಿ. ಇಂಥವುಗಳ ವರ್ಣನೆಯನ್ನು ನಾವು ಕಾವ್ಯಗಳಲ್ಲಿ ಕಾಣಬಹುದು. ಕಾಳಿದಾಸ, ಕುವೆಂಪು, ಅಪ್ಪಯ್ಯ ದೀಕ್ಷಿತರು, ಶಿವರಾಮ ಕಾರಂತ, ಎಸ್.ವಿ.ರಂಗಣ್ಣ, ಎಸ್.ಎಲ್.ಭೈರಪ್ಪ, ಎಚ್.ಎಲ್.ನಾಗೇಗೌಡ ಮೊದಲಾದ ಹಲವಾರು ಲೇಖಕರ ಕೃತಿಗಳಲ್ಲಿ ಖಗೋಲವನ್ನು ಕುರಿತ ವಿಚಾರ ಬರುವುದನ್ನು ಪ್ರಸ್ತಾಪಿಸಿದರು .

ಶನಿಯಂತೆ ವಕ್ಕರಿಸಿದ ಎನ್ನುವ ಮಾತು ಗ್ರಹದ ವಕ್ರ ಚಲನೆಯನ್ನು ಆಧರಿಸಿದೆ. ಹಾಗೆಯೇ ಯಾರಾದರೂ ಖಿನ್ನತೆಗೆ ಒಳಪಟ್ಟರೆ, ರಾಹು ಬಡಿದಂತೆ ಇದ್ದಾನೆ ಎನ್ನುವರು. ಹೀಗೆ ಗಾದೆಗಳಲ್ಲೂ ಕೂಡ ಸೂರ್ಯ, ಚಂದ್ರ, ನಕ್ಷತ್ರಗಳಿಗೆ ಸಂಬಂಧಿಸಿದ ಖಗೋಲ ವಿಚಾರಗಳು ಬರುತ್ತವೆ. ಹಿಂದೆ ಮಳೆ ನಕ್ಷತ್ರಗಳ ಆಧಾರದಲ್ಲಿ ಕೃಷಿ ಕಾರ್ಯವನ್ನು ಮಾಡುತ್ತಿದ್ದರು. ಹೀಗಾಗಿ ನಕ್ಷತ್ರಗಳ ಬಗ್ಗೆ ಹಲವಾರು ಗಾದೆಗಳಿವೆ ಎಂದು ಕೆಲವು ಗಾದೆಗಳನ್ನು ವಿವರಿಸಿದರು.

ಶ್ರೀಮತಿ ಶೈಲಜಾ ಅವರ ಉಪನ್ಯಾಸವು ಸಾಹಿತ್ಯ, ಕಲೆ ಹಾಗೂ ವಿಜ್ಞಾನದ ಮಿಶ್ರಣವಾಗಿ ಸೊಗಸಾಗಿ ಮೂಡಿ ಬಂದು, ಪ್ರತಿಯೊಂದು ಅಂಶವೂ ವೀಕ್ಷಕರಲ್ಲಿ ಕುತೂಹಲವನ್ನು ಹೆಚ್ಚಿಸಿತು.

ಪ್ರೇಕ್ಷಕರು ಹಾಗೂ ಉಪನ್ಯಾಸಕರ ನಡುವಿನ ಸಂವಾದ ನಡೆಯಿತು. ನಂತರ ಶ್ರೀ ಶ್ರೀರಂಗರಾಜನ್ ವಂದನಾರ್ಪಣೆ ಮಾಡಿದರು.

ಇಡೀ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಬಹುದಾಗಿದೆ.

***

ಕವಿ ಮನ

ಕವಿ ಮನ

'ಕವಿಮನ' – ಇದು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಕಳೆದ ಎಂಟು ವರ್ಷಗಳಿಂದ ನಿರಂತರವಾಗಿ ಮೂಡಿಬರುತ್ತಿರುವ ಒಂದು ಜನಪ್ರಿಯ ಕಾವ್ಯಾಂಕಣ.

ಈ ಅಂಕಣದಲ್ಲಿ ವೇದಿಕೆಯ ಸದಸ್ಯರು ರಚಿಸಿದ ಕವನವೊಂದನ್ನು, ಕವಿಯ ಹೆಸರು ತಿಳಿಸದೇ, ಪ್ರತಿ ಬುಧವಾರ ವಾಟ್ಸಾಪ್ ಗುಂಪಿನಲ್ಲಿ ಪ್ರಸ್ತುತ ಪಡಿಸಲಾಗುವುದು. ವೇದಿಕೆಯ ಇತರ ಸದಸ್ಯರು ಮುಂದಿನ ಆರು ದಿನಗಳ ಒಳಗೇ (ಸೋಮವಾರ) ಕವನ ಓದಿ, ಕವನದ ಬಗ್ಗೆ ತಮಗೆ ಏನನ್ನಿಸಿತು, ಕವನದ ವಸ್ತು, ಭಾಷೆ, ಶೈಲಿ, ಪದ ಪ್ರಯೋಗ, ಒಟ್ಟು ಪರಿಣಾಮ ಮತ್ತು ತಾವು ಕವಿಯ ಮನವನ್ನು (ಈ ಕವನ ರಚನೆಯ ಹಿನ್ನೆಲೆಯಲ್ಲಿ) ಅರ್ಥ ಮಾಡಿಕೊಂಡಿರುವುದು ಹೇಗೆ, ಎಂಬುದನ್ನು ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತ ಪಡಿಸಬೇಕು. ಇದು ಕವನದ ಸಮಗ್ರ ವಿಮರ್ಶೆ ಆಗಿರಬೇಕಿಲ್ಲ. ಒಮ್ಮೊಮ್ಮೆ ಕವನದಲ್ಲಿ ನಿಗೂಢತೆ ಇದ್ದರೆ ಅದಕ್ಕೆ ಸ್ಪಂದಿಸುವುದು ಸಹ ಸವಾಲಿನ ಕೆಲಸವಾಗಿರುತ್ತದೆ.

ಅವಧಿ ಮುಗಿದ ಮೇಲೆ ಮಂಗಳವಾರದಂದು 'ಕವಿ ಮನ'ಕ್ಕೆ ಸ್ಪಂದಿಸಿದವರ ಹೆಸರು ಮತ್ತು ಕವಿಯ ಹೆಸರನ್ನು ವಾಟ್ಸಾಪ್ ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಆ ನಂತರ ಕವಿಯು ತಾನು ರಚಿಸಿದ ಕವನದ ಹಿನ್ನೆಲೆ ಮತ್ತು 'ಕವಿ ಮನ'ದಲ್ಲಿ ಬಂದ ವಿವಿಧ ಸ್ಪಂದನೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆ.

ಕವಿಯ ಹೆಸರನ್ನು ಮೊದಲೇ ಪ್ರಕಟಿಸಿದರೆ, ಕವನಕ್ಕೆ ಬರುವ ಸ್ಪಂದನೆಗಳು ಕೇವಲ ಕವಿಯ ಬಗ್ಗೆ ಹೊಗಳಿಕೆ ಅಥವಾ ಕಟು ವಿಮರ್ಶೆಯಿಂದ ಕೂಡಿರುತ್ತವೆ ಎಂಬ ಕಾರಣದಿಂದ ಕವಿಯ ಹೆಸರನ್ನು ಅವಧಿ ಮುಗಿಯುವವರೆಗೂ ಗೌಪ್ಯವಾಗಿ ಇಡಲಾಗುವುದು.

ಆರಂಭದಲ್ಲಿ ಈ ಅಂಕಣವನ್ನು ಶ್ರೀ ಬಿ.ಎಸ್. ಚಂದ್ರಶೇಖರ್, ಬಳಿಕ ಶ್ರೀ ಕೆ.ಎನ್.ಮಹಾಬಲರವರು ನಿರ್ವಹಿಸಿದರು. ಕಳೆದ ಐದು ವರ್ಷಗಳಿಂದ ಶ್ರೀ ಹು.ವಾ. ಶ್ರೀಪ್ರಕಾಶ್‌ರವರು ಒಂದು ವಾರವೂ ತಪ್ಪದೆ ನಿರಂತರವಾಗಿ ಅಂಕಣವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಇನ್ನು ಮುಂದೆ, 'ಕವಿ ಮನ' ಅಂಕಣದಲ್ಲಿ ಪ್ರಕಟವಾಗುವ ಕವನಗಳನ್ನು 'ಸಾಹಿತ್ಯ ದಾಸೋಹ' ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಜನವರಿ 2024ರ 'ಕವಿ ಮನ' ಅಂಕಣದ ಐದು ಕವನಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.

ಬಂತಿದೋ ಹೊಸದಿನ

ಬಂತಿದೋ ಹೊಸದಿನ, ರಸದಿನ
ಕೈ ತಟ್ಟಿ ಸ್ವಾಗತಿಸು ಸ್ಮಿತದಿನ
ಹೂದಾನಿಯ ಹಳೆಯ ಹೂ ತೆಗೆ!
ನಳನಳಸಲಿ ಸುಮಗಳು
ಬಾಳೂ ಅಂತೇ ಇರಲಿ,
ಬಾಡದಿರಲಿ ಬಗೆಯ ನಗೆ!

ಎದೆಕುದಿಗಳ ಶಾಂತಗೊಳಸು
ಮನದ ಹಗೆಯನತ್ತ ಒಗೆ!
ನಗುವಿಗೇಕೆ ಸಂಕಲೆ?
ಒಳತಿಗೇಕೆ ಶೃಂಖಲೆ?
ಮುಕ್ತವಾಗಿ ಹೊಮ್ಮಿ ಬರಲಿ
ಹೂಮನಗಳು ಬಾಡದಿರಲಿ

ನಿಸರ್ಗದ ಕಣಕಣವೂ ಮೈತ್ರಿ ಗೀತ ಹಾಡಿದೆ;
ಕೋಗಿಲೆಯ ಕುಕಿಲನಲ್ಲೂ ಅದೇನೊ ಹೊಸದಿದೆ!
'ಇಲ್ಲ' ವೆಂಬ ವಾದ ಬೇಡ,
'ಇದೆ' ಎಂಬ ಭಾವದಲ್ಲೇ ಹಿತವಿದೆ...

ಪ್ರತಿ ವರುಷವೂ ಅದೇ ಠರಾವು,
ಸಂಕಲ್ಪಗಳ ಹುಸಿ ಆಟ!
ಇಂದು ವಿಕಲ್ಪವಾಗಿ ಬೀಳದಿರಲಿ ಮೂಲೆಗೆ;
ಬೇಲಿಯಿರಲಿ ಮನಸಿಗೆ,
ಹೊಸತನ ಹೊಮ್ಮಲಿ ಸೊಲ್ಲು ಸೊಲ್ಲಿಗೆ

ವಿದಾಯ ಹೇಳು ಕಣಕಣದಲಿ
ವ್ರಣವಾಗಿ ಮೈಗೂಡಿದ ಜಾತಿ ಭ್ರಾಂತಿಗೆ
ಹಳೆ ಕೊಳೆಗಳು ತೊಳೆದು ಹೋಗಲಿ!
ಹೊಸತು ರಂಗು ಮೂಡಿಬರಲಿ ಮನುಜನ ಬಾಳಗೆ.
ಮಾನವ ಜಾತಿ ಒಂದೇ.. ಎಂದ
ಪಂಪನ ಪೆಂಪಿಗಿದೋ ನಮನ!
ಇದೋ ನಮನ ವಿಶ್ವಮಾನವ ಸಂದೇಶ
ಸಾರಿದ ಕುವೆಂಪು ನುಡಿ ಸಾರಕೆ!

- ಗಿರಿಜಾರಾಜ್
03.01.2024

ನಕ್ಕುಬಿಡು

ಉಂಡ ಕಹಿ ಗುಳಗೆಗಳ
ತಪಸೀಲು ಬೇಕಿಲ್ಲ
ಸವೆಸಿದ ಕೊರಕಲು ದಿಣ್ಣೆ ದಾರಿಗಳಗೆ
ಎಡವಿದ ಗಾಯ ನೆಟ್ಟ ಮುಳ್ಳುಗಳಗೆ
ಪುರಾವೆಯಿಲ್ಲ
ಹನಿಗೂಡಿದ ಕಣ್ಣುಗಳಲ್ಲಿ
ತಿರುಗಿ ನೋಡಿ ಒಮ್ಮೆ–
ನಕ್ಕುಬಿಡು!

ಕೂಡಿ ನಡೆದ ದಾರಿಗಳು
ಬೇರಾದ ಹೆಜ್ಜೆಗಳು
ಏರು ದಾರಿಯ ಕುಂಟು ನಡೆ
–ಗೆ ಒದಗದ ಊರುಗೋಲುಗಳು
ಬೆನ್ನಿಗೆರಗಿದ ಬಾರುಕೋಲುಗಳು
ಎಲ್ಲ ಅನುಭವ ಸಂತೆಯಲ್ಲೊಮ್ಮೆ
ನಿಂತು
ಗೆಳತೀ, ನಕ್ಕುಬಿಡು

ದಾರಿ ಹೂವಿನದಲ್ಲ ನೆರಳು
ನೀರು ಸಿಗುವ ಖಾತರಿಯಿಲ್ಲ
ಮುಗಿಯುವ ಮುನ್ನ ಹಗಲು
ಸೇರುವುದು ಯಾವ ಮಜಲು
ಕಾಲ ಕೆಳಗಿನ ಕಳ್ಳ ಹುದುಲಲ್ಲೂ
ನೇರ ನಡೆವ ಬಿಗಿ ನಿಲುವಿನ
ಅವಡುಗಚ್ಚಿದ ಮುಖದಲ್ಲೂ

ಒಮ್ಮೆ ಸಡಲಿಸಿ ಗಂಟು
ಕುಸಿದಾಗ ಮಡಲೀವ
ನೆಲದ ನಲುಮೆಗೆ ನಮಿಸಿ

ಒಮ್ಮೆ– ನಕ್ಕುಬಿಡು!

- ಡಾ. ಗೋವಿಂದ ಹೆಗಡೆ
10.01.2024

ಕವಿ ಮನ

ನಿಜ ಜೀವನದ ಪಯಣ

ಮನದ ಭಾವಕ್ಕೆ ಕಲ್ಪನೆಯ ರೆಕ್ಕೆ ಹಚ್ಚಿ
ಪಾತ್ರಗಳ ಸನ್ನಿವೇಶಗಳ ಸೃಷ್ಟಿಸಿ,
ಆಗುಹೋಗುಗಳ ಒಳಿತು ಕೆಡುಕುಗಳ
ಮನಕೆ ತೋಚಿದಂತೆ ವಿಶ್ಲೇಷಿಸಿ,
ಪಾತ್ರಗಳನ್ನು ನಿನ್ನ ಇಚ್ಛಾನುಸಾರ
ಎಳೆದಾಡಿ, ನೀ ಕಥೆ ಬರೆದಷ್ಟು
ಸುಲಭವಲ್ಲಈ ನಿಜ ಜೀವನದ
ಪಯಣ.

ನಾಟಕದ ಬಾಳು ನಿಜ ಜೀವನ,
ಪಾತ್ರಗಳ ಹಿಡಿದಿಹ ಸೂತ್ರಧಾರ
ಅಗೋಚರ ಅಡಗಿಹನು ನಿಗೂಢತೆಯಲಿ
ಕರ್ಮ ಸಂಘಟನೆಯೋ, ಹಣೆಬರಹ,
ಹಿಡಿತ ನಿಯಂತ್ರಣ ಅವನಲ್ಲಿ,
ಬರಿ ಕುಣಿತ ಪರದಾಟ ನಿನಗಿಲ್ಲಿ.

ಪ್ರತಿ ಕಂತಿಗೂ ಅವನದೇ ಆಯಾಮ
ಏಳುಬೀಳುಗಳ ನಿಯಮ, ಪ್ರತಿ
ಹಂತದಲಿ ಸಮಯದ ಪರಿಧಿಯುಂಟು,
ನಿನ್ನವಸರಕೆ ಕಥೆಯ ಓಡಿಸಲಾಗದು
ಬಾಳ ಪಯಣದಲಿ.

ಮುಂದಿನ ಹಾದಿಯಲಿ ಸಮತಟ್ಟು
ನೆಲವೋ ಹಳ್ಳಕೊಳ್ಳ ಕೊರಕಲುಗಳ
ಜಾಲವೋ, ಪ್ರತಿ ಹೆಜ್ಜೆಯ ತಿರುವಿನಲು
ಕುತೂಹಲ, ಹೆಜ್ಜೆ ಹಿಮ್ಮುಖವಾಗುವುದು
ಅಸಾಧ್ಯ, ಮುಂದೆ ಸಾಗುವಿಕೆ ಅನಿವಾರ್ಯ

ಸಂತಸದ ಭಾವವೋ ನಿರಾಸೆ ದುಃಖ
ಖಿನ್ನತೆಯ ಕಾರ್ಮೋಡವೋ, ಆಯ್ಕೆ
ನಿನ್ನದು, ನಿನ್ನ ಪಾಲಿನದು ನಿನಗೆ
ಹಂಚುವುದು ಅವನ ಮೋಜಿನಾಟ
ನೀ ಪಾತ್ರಧಾರಿ ಅವ ಸೂತ್ರಧಾರಿ
ನಿರ್ವಹಣೆ ಅನಿವಾರ್ಯ.

ನೀ ಕಥೆ ಬರೆದಷ್ಟು ಸುಲಭವಲ್ಲ
ಈ ನಿಜ ಜೀವನದ ಪಯಣ.

- ಮಾಲತಿ ಶ್ರೀನಿವಾಸನ್
17.01.2024

ನಕಾಬುಧಾರಿಗಳು

ಹುಸಿನಗೆಯ ಮುಸುಕನ್ನು ಮೇಲೆಳೆಯುತ್ತ
ಕಣ್ಣು, ಮುಖ ಭಾವಗಳನು ಅದುಮಿಡುವ
ಸುಳ್ಳುಗಳ ಸರಮಾಲೆಯಲಿ ನಿಜವ ಮುಚ್ಚಿಡುತ್ತ
ಜೀವನದ ಬೆಲೆ ತೆತ್ತು ಕೊಂಡು ಧರಿಸಿ ನಟಿಸುವ
ನಕಾಬುಧಾರಿಗಳು!

ನಿಜದ ಮರೆ ಮಾಡಿ ನಗಲು ಯತ್ನಿಸುತ್ತೇವೆ
ಛಿದ್ರ ಹೃದಯವನೂ ಚಿತ್ರಿಸುತ್ತ ನಡೆಯುತ್ತೇವೆ
ಪಟಪಟ ಮಾತನಾಡಿ ದುಗುಡವನ್ನು ಮುಚ್ಚುತ್ತೇವೆ
ಮನದ, ಜೀವನದ ನೋವಿಗೆ ಮುಸುಕುಹಾಕುತ್ತೇವೆ

ನಡೆವ ದಾರಿಯುದ್ದಕ್ಕೂ ಕೆಸರು ತುಂಬಿದ್ದರೂ
ಲೋಕ ಕಾಣಲು, ಬಾಯಿ ರಾಗವನು ಹಾಡುತ್ತದೆ
ದುರದೃಷ್ಟದ, ನಿರಾಸೆಯ ಕೈಹಿಡಿದು ನಡೆದಿದ್ದರೂ
ಕಂಡವರಿಗೆ ಅದರರಿವು ಬರದಂತೆ ನಡೆಯುತ್ತದೆ.

ಇತರರಿಗೆ ಯಾರು ಕೊಟ್ಟರು ಈ ಅಧಿಕಾರ?
ನಮ್ಮ ಕಣ್ಣೀರ ಹನಿಗಳ ಒಳಹೊಕ್ಕು ನೋಡಲು
ನಮ್ಮ ಮುಖವಾಡವಷ್ಟೆ ಅವರಿಗೆ ನಿಜದ ಸಾಕಾರ
ಅಂತರಾತ್ಮದ ಕೂಗು! ನಮಗೆ ಮಾತ್ರ ಮೀಸಲು

ಪ್ರಪಂಚವೆಣಿಸಿರಲಿ ನಾವು ಅತ್ಯಂತ ಸುಖಿಗಳೆಂದು!
ನಡೆಯೋಣ ನಾವು ನಕಾಬು ಧರಿಸುತ್ತಲೇ!
ನಿಜ ಮುಖವ ಕಾಣಿಸದೆಲೆ ಜೀವನದಲೆಂದು!
ಓ ಭಗವಂತ! ನಿನಗೆ ಮಾತ್ರ ಕೇಳಲಿ ನಮ್ಮಾತ್ಮದಕೂಗು

ನಿನ್ನಿಂದ ನಾವೇನೂ ಮುಚ್ಚಿಡಲಾರೆವು
ತೆರೆದಿಟ್ಟ ಪುಸ್ತಕವು ನಮ್ಮ ಜೀವನವು ನಿನಗೆ
ಹರಸು ನಮ್ಮನು ಜೀವನವ ಎದುರಿಸಲು
ನಿನ್ನ ರಕ್ಷಣೆಯಲಿ ಶಾಂತಿಯನ್ನರಸಲು !

- ಸತ್ಯವತಿ ಮೂರ್ತಿ
24.01.2024

ಕವಿ ಮನ

ಬಿಟ್ಟೂ ಬಿಡದ ಭಾವ

ಕಂಡೊಡನೆ ಸೆಳೆತದ ಬಿಗಿ ಬೆಸೆದು
ದ್ವೈತದಿಂದದ್ವೈತದತ್ತ ಸರಿಯಿತು ಮನಭಾವಗಳು
ನಾನು ನಾನಾಗಿ ಉಳಿದಿಲ್ಲ
ನೀನು ನೀನಾಗಿ ಉಳಿಯಲಿಲ್ಲ
ಕಾಲದೇಶಗಳು ಆಕರ್ಷದುಳಿಯಲ್ಲಿ
ಪಡೆಯಿತು ಏಕರೂಪ
ಗಾಳಿ ನೀರು ಸೂರ್ಯಪ್ರಕಾಶದ ಎರಕ
ತೂಯ್ದಾಡುವ ಪಕ್ವಫಲ ಪುಷ್ಪ ಸ್ವರೂಪ

ಪಿಸುಗುಡುವ ನುಡಿಯಲಿ
ಅಂದಾಗ ನಾವು ಸೀತಾ ರಾಮ
ಅನುಮಾನವಿರದಿದ್ದರೂ ಅಗ್ನಿಸ್ನಾನ ದೀಕ್ಷೆ ಬೇಡ
ಅದಕೆ ನಾನಲ್ಲ ಸೀತೆ
ಹಾಗಾದರೆ ನಾವು ಯಾರು ಬಿಡಿಸಲಾರದವರು
ಉತ್ತರವೇ ನಿನ್ನ ನಿಡು ಉಸಿರು

ಒನಪು ವಯ್ಯಾರ ಚೆಲುವು ಒಲವಿನ ಬೆಡಗು
ಸುರಲೋಕದ ಸಾಂದ್ರ ಬೆರಗಿನ ಮೆರಗು
ಭಾಮೆಯೆನ್ನಲೆ ಹುಡುಗಿ
ತಿರುಗಿ ಬಿದ್ದಳು ಬೆಡಗಿ
ಅವಳು ನಾನೇ ಎಂಬ ಬಿಸಿಬಾಣಲೆಯ ಚುರುಕು
ನನ್ನವನೆಂಬ ಹದಹೂರಣವೆನ್ನದು ಹುಡುಗ

ಪಿಡಿನಡೆಯ ಪಿಡಿನಡುವ ಪಡಿನುಡಿಯದೆ
ಭಕ್ತಿರಸದಿ ಮಿಂದು ತೇಲುವ
ಸಂತೃಪ್ತ ಸದ್ಗೃಹಿಣಿ ರುಕ್ಮಿಣಿಯೋ
ಭಕ್ತಿಭಾವಕ್ಕೆ ಮಿಗಿಲು ಅಕ್ಕರವ ದಾಟಿಹುದು
ರುಕ್ಕು ತುಳಸಿ ಜಾಂಬವತಿಯಲ್ಲ
ಅಲ್ಲದಿರೆ ನೀನೆಂತವಳು

ಅನತಿಕಾಲದಲ್ಲಿ ಬಳಿ ಬಂದು ಬೆಸೆದು
ಭಾವಸೆಲೆಯಾಗಿ ನನ್ನಲ್ಲಿ ನೆಲೆಯಾಗಿ
ಬಂಧ ಕಳಚಿ ಅತಿ ದೂರ ಸಾಗಿ
ಎದೆಯಲ್ಲಿ ಉಳಿದು ಬಿಟ್ಟವನೆ
ನೀನೆಲ್ಲೋ ಅಲ್ಲಿ
ಇರಬಹುದು ಕಣ್ಣಿಗೆ ಕಾಣದಲ್ಲಿ

ಸರಿದು ಹೋದೆ ಭವದಿ ಬಿಡಲಾರದೆ ಭಾವದಿ
ನೋವಿಹುದು ಒಡನೆ ಹಿತವಾದ ನೆನಪು
ಕಸರುಗಟ್ಟದ ಕೆಳೆಯು ಕಸವರದ ಬೆಳಕು
ಆದಕೆ
ಮೊದಲ ದಿನ ಕಂಡಾಗ ಬೆಸೆದ ಬೆಸುಗೆ
ಸವೆಯದೆ ಉಳಿದು ಚಿಮ್ಮಿಸುತಿದೆ
ಗೋಕುಲದಿಂದ ನಿರ್ಗಮಿಸಿದರೂ
ಬಿಟ್ಟೂ ಬಿಡದ ರಾಧೆಯೆಂಬ ಭಾವವೇ
ಈಗಲೂ ನಾವು ಅದ್ವೈತವೇ.

- ಬೆಂ ಶ್ರೀ ರವೀಂದ್ರ
31.01.2024

ಒತ್ತೆ ಪುರಾಣ

– ಕಮಲಾಕ್ಷಿ ಸಿ.ಆರ್.

ಬಡವ ಬಲ್ಲಿದ ಎಂಬ ವ್ಯತ್ಯಾಸಗಳು 'ಒತ್ತೆ' ಪದವನ್ನು ಹುಟ್ಟು ಹಾಕಿದವೇನೊ! ಅನಿವಾರ್ಯ ಸಂದರ್ಭಗಳಲ್ಲಿ ತಮ್ಮಲ್ಲಿದ್ದ ಮೌಲ್ಯಯುತ ವಸ್ತುವನ್ನು ಉಳ್ಳವರ ವಶಕ್ಕೆ ಆಧಾರವಾಗಿ ನೀಡಿ ಅವರಿಂದ ಬೇಕಾದ್ದನ್ನು ನೀಡುತ್ತಾರೆ. ಹೀಗೆ ಪರರ ವಶಕ್ಕೆ ನೀಡುವ ಆಧಾರವೇ ಒತ್ತೆ.

ಒತ್ತೆಯನ್ನು ಅಡಮಾನ ಎಂಬ ಪದದ ಸಮಾನ ಪದವಾಗಿ ಬಳಸಲಾಗುವುದು. ಈ ಪದ ಪ್ರಾಚೀನ ಕಾಲದಿಂದಲೂ ಬಳಸಲಾಗುತ್ತಿದೆ ಎಂಬುದಕ್ಕೆ ಉಲ್ಲೇಖಗಳಿವೆ. ನೇಮಿಚಂದ್ರನ 'ನೇಮಿನಾಥ ಪುರಾಣ'ದಲ್ಲಿ ''ಒತ್ತೆಯ ಗೂಟಂ ಸೊಡರಿಟ್ಟೀರುವಂತರವಿನ ಸಿರಿಯನಱಿದು'' ಎಂದೂ, ''ರಪಣಮಂ ತೋರಿಯುಮೊತ್ತೆಯನುಗ್ಗಡಿಸಿಯು ಮಾಡಿಮನೆ ಪೆಱತೇನುಪಾಯಮಿಲ್ಲದೆಮ್ಮಾಳ್ವ ನೆಲನೊತ್ತೆಯಂಗೊಡೆ'' ಎಂದು ಪಂಪ ಭಾರತದಲ್ಲಿದೆ.

''ಪೋಱಬೇಡಂಗಡಿ ಸಾಲ... ತೆರಬೇಡೊತ್ತೆಗೆ ಬಡ್ಡಿಯಂ'' ಎಂದು ಪುಲಿಗೆರೆ ಸೋಮನಾಥನು ಸೋಮೇಶ್ವರ ಶತಕದ 82ನೇ ಪದ್ಯದಲ್ಲಿ ಒತ್ತೆ ಮಾಡಬೇಡ ಎಂದು ಎಚ್ಚರಿಸಿದ್ದಾನೆ. ಮೌಲ್ಯಯುತ ವಸ್ತುಗಳನ್ನು ಒತ್ತೆ ಇರಿಸಿ ಸಾಲವನ್ನು ಪಡೆದರೂ ಬಡ್ಡಿ ತೆರುವುದು ತಪ್ಪದು. ಹಾಗಾಗಿ ಒತ್ತೆಯಿಡುವುದರಿಂದ ಒತ್ತೆ ಇಡುವ ವಸ್ತುಗಳಿಗೆ ಭದ್ರತೆ ಇರದು ಎಂದಿರಬೇಕು ಎನಿಸುತ್ತದೆ.

ರಾಜರ ಆಳ್ವಿಕೆಯಿದ್ದ ಸಮಯದಲ್ಲಿ ರಾಜ್ಯಗಳ ನಡುವೆ ಯುದ್ಧ ನಡೆದಾಗ ರಾಣಿಯರ, ರಾಜನ ಮಕ್ಕಳನ್ನು ಒತ್ತೆ ಇರಿಸಿಕೊಳ್ಳುವ ಮಾರ್ಗಗಳನ್ನು ಆರಿಸಿಕೊಂಡು ಯುದ್ಧಕ್ಕೆ ಬರುವಂತೆ ಇಲ್ಲವೆ ಯುದ್ಧವನ್ನು ಮಾಡದಂತೆ ತಡೆಯಲಾಗುತ್ತಿತ್ತು.

ಇಂದ್ರಪ್ರಸ್ಥದಲ್ಲಿ ಸಂತೋಷದಿಂದ ಇದ್ದ ಪಾಂಡವರನ್ನು ನೋಡಿ ಸಹಿಸದ ದುರ್ಯೋಧನನು ಧರ್ಮರಾಯನನ್ನು ಪಗಡೆಯಾಟಕ್ಕೆ ಆಹ್ವಾನಿಸುತ್ತಾನೆ. ಪಗಡೆಯಾಟ ಧರ್ಮರಾಯನ ಬಲಹೀನತೆ ಯಾಗಿದ್ದರಿಂದ ದುರ್ಯೋಧನನ ಕುತಂತ್ರ ತಿಳಿಯದೆ ಪಗಡೆಯಾಟಕ್ಕೆ ಇಳಿಯುತ್ತಾನೆ. ತನ್ನಲ್ಲಿದ್ದ ಅಮೂಲ್ಯ ವಸ್ತುಗಳನ್ನು ಪಂದ್ಯಕ್ಕೆ ಒತ್ತೆ ಇಟ್ಟು ಸೋಲುತ್ತಾನೆ. ತನ್ನ ರಾಜ್ಯವನ್ನು ಒತ್ತೆಯಿಟ್ಟು ಪಂದ್ಯದಲ್ಲಿ ಸೋತರೆ ಹನ್ನೆರಡು ವರ್ಷ ತನ್ನ ರಾಜ್ಯ ಪ್ರವೇಶ ಮಾಡುವುದಿಲ್ಲ ಹಾಗೂ ಒಂದು ವರ್ಷ ಅಜ್ಞಾತವಾಸ ಮಾಡುವುದಾಗಿ ಘೋಷಿಸುತ್ತಾನೆ. ಷಡ್ಯಂತರದಿಂದಾಗಿ ಒತ್ತೆಯಾಗಿಯಾಗಿಡುತ್ತ ಬಂದ ತನ್ನನ್ನು, ತನ್ನ ಸೋದರರನ್ನು ಕೊನೆಯಲ್ಲಿ ದ್ರೌಪದಿಯನ್ನೂ ಸೋಲುತ್ತಾನೆ. ದ್ರೌಪದಿ ವಸ್ತ್ರಾಪಹರಣ ಮಾಡಿ ಅಗೌರವ ತೋರುತ್ತಾರೆ ಕೌರವರು. ಪಾಂಡವರು ದ್ರೌಪದಿ, ಕುಂತಿ ಸಮೇತ ವನವಾಸ, ಬಳಿಕ ಅಜ್ಞಾತ ವಾಸ ಅನುಭವಿಸುತ್ತಾರೆ. ಅಂದು ದ್ರೌಪದಿ ಅನುಭವಿಸಿದ ಅವಮಾನ, ಅಪಮಾನಗಳು ಕುರುಕ್ಷೇತ್ರ ಯುದ್ಧಕ್ಕೆ ಕಾರಣವಾಗುತ್ತವೆ.

ಈಗಂತೂ ಬಂಗಾರ, ಆಸ್ತಿ, ವಾಹನ.. ಇತ್ಯಾದಿಗಳೆಲ್ಲವುಗಳನ್ನೂ ಒತ್ತೆ ಇಡುಬಹುದಾಗಿದೆ. ಮನೆಯ ಮಗಳಿಗೆ ಬಂಗಾರವನ್ನಿಡುವುದು ಕಷ್ಟ ಕಾಲದಲ್ಲಿ ಸಹಾಯಕ್ಕೆ ಒದಗುವುದೆಂದು. ಮಹಿಳೆ ಅಲಂಕಾರಕ್ಕೆಂದು ಮಾಡಿಸಿಕೊಂಡ ಒಡವೆಯನ್ನು ಅನಿವಾರ್ಯ ಸಂದರ್ಭಗಳಲ್ಲಿ ಒತ್ತೆ ಇಡಲು ಹೆಜ್ಜೆ ಹಿಂದೆ ಇಡುವುದಿಲ್ಲ.

ಉಳಿತಾಯದಿಂದಲೇ ಸ್ವಂತ ಮನೆ ನಿರ್ಮಾಣ ಮಾಡುವುದು ತುಸು ಕಷ್ಟವೇ. ಹಾಗಾಗಿ ಬ್ಯಾಂಕ್‌ಗಳ ಮೂಲಕ ಗೃಹಸಾಲ ಪಡೆದು ಸ್ವಗೃಹದ ಕನಸನ್ನು ನನಸಾಗಿಸಿಕೊಳ್ಳುವರು. ಹೀಗೆ ನಿರ್ಮಿಸಿದ ಮನೆಯಲ್ಲಿ ವಾಸ ಮಾಡಬಹುದು, ಆದರೆ ಮನೆಯ ಮೇಲೆ ಹಕ್ಕು ಸಿಗುವುದು ಗೃಹಸಾಲ ತೀರಿಸಿದ ಬಳಿಕವೇ. ಅಲ್ಲಿಯವರೆಗೆ ಮನೆಯನ್ನು ಬ್ಯಾಂಕಿನಲ್ಲಿ ಒತ್ತೆ ಇಡಬೇಕಾಗುತ್ತೆ. ಸಾಲವನ್ನು ಅಧಿಕ ಅವಧಿಯವರೆಗೆ ಪಾವತಿಸದಿದ್ದರೆ ಮನೆಯನ್ನು ಹರಾಜು ಮಾಡಿ ಸಾಲದ ಹಣವನ್ನು ಬಡ್ಡಿ ಸಮೇತ ವಸೂಲು ಮಾಡಿಕೊಳ್ಳುತ್ತಾರೆ.

ಇದೇ ರೀತಿ ಹೊಸ ವಾಹನವನ್ನು ಕೊಳ್ಳುವಾಗ ಒತ್ತೆಯಿಟ್ಟು ಸಾಲವನ್ನು ಕೊಳ್ಳಬಹುದು. ಒಮ್ಮೆ ಸಾಲಗಾರರೊಬ್ಬರ ಕಾರಿನ ಸಾಲ ಮೂರು ತಿಂಗಳ ಕಂತು ಬಾಕಿಯಿತ್ತು ಎಂದು ಅವರ ಮದುವೆ ದಿನವೇ ಕಲ್ಯಾಣ ಮಂಟಪಕ್ಕೇ ಸಾಲ ವಸೂಲಾತಿಯವರು ನುಗ್ಗಿ ಕಾರನ್ನು ತಮ್ಮ ವಶಕ್ಕೆ ಪಡೆದಿದ್ದರಂತೆ. ಜವರಾಯನಿಗೆ ಕಿಂಚಿತ್ತೂ ಕರುಣೆಯಿಲ್ಲ ಎನ್ನುವಂತೆ ಸಾಲ ವಸೂಲಾತಿಯವರು ನಡೆದುಕೊಳ್ಳುವುದುಂಟು. ಹಾಗಾಗಿ ಇಂತಹ ವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯ.

ಹಿಂದೆಲ್ಲ ಜಮೀನನ್ನು ಒತ್ತೆ ಇರಿಸಿಕೊಂಡು ಊರಿನ ಮುಖಂಡರು ಸಾಲ ಕೊಟ್ಟು, ಬಡ್ಡಿ ಕಟ್ಟುವುದು ತಡವಾದರೆ ಚಕ್ರಬಡ್ಡಿ ಏರಿಸಿ ಸ್ವತ್ತನ್ನು ತಮ್ಮದಾಗಿ ಮಾಡಿಕೊಳ್ಳುತ್ತಿದ್ದರಂತೆ.

ಇತ್ತೀಚೆಗೆ ಇಂದಿನ ಯುವಜನ ಮೋಜು ಮಸ್ತಿಗಾಗಿ ಹೆತ್ತವರು ಕೊಡಿಸಿದ ವಾಹನಗಳನ್ನು ಒತ್ತೆ ಇಟ್ಟು, ಬಿಡಿಸಲಾಗದಿದ್ದಾಗ ಮಾರುವರು. ಹೆತ್ತವರ ಬಳಿ ವಾಹನವನ್ನು ಯಾರೋ ಕದ್ದಿದ್ದಾರೆ ಎಂದು ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸಿ ನಂತರ ಸಿಕ್ಕಿ ಬೀಳುವುದುಂಟು.

ಸಮಾಜ ದ್ರೋಹದಲ್ಲಿ ಸಿಕ್ಕಿ ಬಿದ್ದು ಸೆರೆಯಲ್ಲಿದ್ದಾಗ ಅವರ ಬೆಂಬಲಿಗರು ಉನ್ನತ ಪದವಿಗಳಲ್ಲಿರುವ ಅಧಿಕಾರಿಗಳ, ರಾಜಕಾರಣಿಗಳನ್ನು ಒತ್ತೆ ಇರಿಸಿಕೊಂಡು ದ್ರೋಹಿಗಳನ್ನು ಬಿಡುಗಡೆಗಾಗಿ ಬೇಡಿಕೆ ಇಡುವರು. ಕರ್ನಾಟಕದ ವರನಟ ಡಾ. ರಾಜ್ ಅವರನ್ನು ವೀರಪ್ಪನ್ ಒತ್ತೆ ಇರಿಸಿಕೊಂಡು ಹಣ ಮತ್ತಿತರ ವಿಚಾರಗಳ ಬೇಡಿಕೆ ಇಟ್ಟದ್ದನ್ನು ಸ್ಮರಿಸಬಹುದು. ಟಿಪ್ಪು ಸುಲ್ತಾನನ ಮಕ್ಕಳನ್ನು ಬ್ರಿಟಿಷರು ಒತ್ತೆ ಇರಿಸಿಕೊಂಡಿದ್ದರು.

ಪ್ರಸವ ಸಮಯದಲ್ಲಿ ತಾಯಿ ತನ್ನ ಜೀವವನ್ನು ಒತ್ತೆ ಇಡುವಳು. ಸೈನಿಕರು ಗಡಿಯಲ್ಲಿ ತಮ್ಮ ಜೀವವನ್ನು ಪಣಕ್ಕಿಟ್ಟು ರಕ್ಷಿಸುವರು, ಯುದ್ಧ ಸಮಯದಲ್ಲಿ ಶತೃಗಳೊಡನೆ ಹೋರಾಡುವರು. ಅಗ್ನಿಶಾಮಕ ಸಿಬ್ಬಂದಿ ಅಗ್ನಿ ದುರಂತ ಸಮಯದಲ್ಲಿ ತಮ್ಮ ಜೀವವನ್ನು ಒತ್ತೆ ಇಡುವರು. ಈ ಎಲ್ಲ ಒತ್ತೆಗಳು ನಿಸ್ವಾರ್ಥ ಹಾಗೂ ತ್ಯಾಗದ ಪ್ರತೀಕವಾಗಿವೆ.

ಒತ್ತೆ ಎನ್ನುವುದು ಸಾಮಾನ್ಯವಾಗಿ ಮನುಷ್ಯರನ್ನು ಕುಗ್ಗಿಸುವ ಪದ. ಅನಿವಾರ್ಯವಾಗಿ ಒತ್ತೆ ಇಡಬೇಕಾಗಿ ಬಂದರೂ ನಮ್ಮ ಸ್ವಂತಿಕೆ, ಗೌರವ, ಸ್ವಾಭಿಮಾನಕ್ಕೆ ಧಕ್ಕೆ ಬರದಂತಿರಬೇಕು. ಒತ್ತೆಯಿಂದ ಬಂಧಮುಕ್ತರಾಗಲು ಯತ್ನಿಸಿಬೇಕು.

***

ಕೋರಿಕೆ

– ಸರಸ್ವತಿ ನಟರಾಜ್

ಪದದೇವಿ ಶಾರದೆಯೇ
ದಯಮಾಡಿ ನನ್ನಲ್ಲಿ
ಕೈ ಹಿಡಿದು ಬರೆಸೆನ್ನನು!

ಮನವು ಸುತ್ತುತಲಿಹುದು
ಅಲೆದಾಟ ಸಾಕಿನ್ನು
ಕೈ ಹಿಡಿದು ಬರೆಸೆನ್ನನು !

ಅಂದೆನ್ನ ಚಿತ್ತದಲಿ ಬಂದಂತ ಸಾಲುಗಳು
ಇಂದದೇಕವು ದೂರ ಓಡುತಿಹವು!

ಎಲ್ಲಿ ಹೋದವೋ ಬಿಟ್ಟು
ಭಾವದೊರತೆಗಳೆಲ್ಲಾ
ಕೈಹಿಡಿದು ಬರೆಸೆನ್ನನೂ! (ಪದದೇವಿ)

ಚಿತ್ತದಲಿ ನೂರೆಂಟು ಪಾತ್ರಗಳು ಕುಣಿದಾಡಿ
ಹೇಳು ನನ್ನಯ ಕಥೆಯ ಎನ್ನುತಿಹವು

ಕೂತು ಬರೆಯಲು ಹೋದೆ
ಭ್ರಮೆಯಂದದಲಿ ದೂರ
ಮಾಯವಾದವು ಎಲ್ಲಾ
ಹೋದವೆಲ್ಲಿ! (ಪದದೇವಿ)

ನೀನೊಲಿದು ಕೃಪೆ ಮಾಡಿ
ವಾಗ್ವಿಲಾಸವ ನೀಡು
ಇನ್ನಾರ ತಾನೆ ನಾ ಬೇಡಬಹುದು!

ಕೈಬಿಟ್ಟೆಯಾದರೆ ನಮ್ಮಮ್ಮ ಶಾರದೆಯೇ
ಭಾವ ಶೂನ್ಯದಿ ನಾನು ಮರೆಯಾಗದಿಹೆನೇ

ಹೊನ್ನಬೇಡೆನೋ ತಾಯಿ
ಐಶ್ವರ್ಯವನು ಬೇಡೆ
ಅಕ್ಷರವ ಸ್ರವಿಸು ನೀನು

ನೀನೇ ಗತಿ ಎನಗಮ್ಮ
ಜ್ಞಾನ ಧಾರೆಯ ಹರಿಸಿ
ಕೈ ಹಿಡಿದು ಬರೆಸೆನ್ನನು! (ಪದದೇವಿ)

(ಬಿ.ಎಂ ಶ್ರೀ ಕ್ಷಮೆ ಕೋರಿ –ಅವರ ಕರುಣಾಳು ಬಾ ಬೆಳಕೆ ಹಾಡನ್ನನುಸರಿಸಿ..)

***

ಸಣ್ಣ ಕತೆ (ಭಾಗ–1)

ಶಿಶಿರ ವಸಂತ

– ಪೂರ್ಣಿಮ ಭಗವಾನ್

ಮೈಸೂರು ಬ್ಯಾಂಕಿನ ಸಂಸ್ಥಾಪಕರಲ್ಲಿ ಒಬ್ಬರಾದ ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯನವರ ಜನ್ಮ ದಿನವನ್ನು ಆಚರಿಸಲು ಮೈಸೂರು ಬ್ಯಾಂಕಿನ ನಿವೃತ್ತ ಉದ್ಯೋಗಿಗಳ ಸಂಘವು ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದ ಮುದ್ದೇನಹಳ್ಳಿಯ ಕಡೆಗೆ ಒಂದು ದಿನದ ಪ್ರವಾಸ ಏರ್ಪಡಿಸಿದ್ದರು. ಕಾರ್ಯಕ್ರಮದ ಕುರಿತು ಪ್ರಕಟಣೆ ನೋಡಿದ ದಿನದಿಂದಲೇ ಸೆಪ್ಟೆಂಬರ್ 15ನೇ ದಿನಾಂಕವನ್ನು ಪ್ರವಾಸಕ್ಕೆಂದು ಮೀಸಲಿರಿಸಿ ಯಾರ್‍ಯಾರು ಬರಬಹುದು ಎಂದು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕಿ ಮಂಡಿಗೆ ತಿನ್ನುತ್ತಿದ್ದಳು ಮಂಗಳ. ಅವಳ ಹಾಗೆಯೇ ಇನ್ನೂ ಕೆಲವು ಗೆಳತಿಯರು ಬಹು ಉತ್ಸಾಹದಿಂದ ಆ ದಿನಕ್ಕಾಗಿ ಎದುರು ನೋಡುತ್ತಿದ್ದರು. ಪರಸ್ಪರ ಭೇಟಿಯಾದಾಗ ಬಹಳ ಚೆನ್ನಾಗಿ ಮಾತನಾಡುತ್ತಿದ್ದ ಆಪ್ತಮಿತ್ರೆ ಗಾಯತ್ರಿ ಎಂದೂ ಫೋನ್ ಮಾಡುತ್ತಿರಲಿಲ್ಲ. ಸೆಪ್ಟೆಂಬರ್ ಎರಡರಂದು ಬೆಳಗ್ಗೆ ಬೆಳಗ್ಗೆಯೇ ಗಾಯತ್ರಿಯ ಫೋನ್ ಬಂದಾಗ ಮಂಗಳಾಗೆ ಹುಚ್ಚೆದ್ದು ಕುಣಿಯುವಂತೆ ಆಯಿತು.

ಗಾಯತ್ರಿ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ವಾಸಿಸುತ್ತಿದ್ದಳು. ಸಂಘದಲ್ಲಿ ವಿಚಾರಿಸಿದಾಗ ಪ್ರವಾಸಕ್ಕೆಂದು ಐದು ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ, ಅದರಲ್ಲಿ ಒಂದು ಬಸ್ಸನ್ನು ಮೈಸೂರು ರಸ್ತೆಯಲ್ಲಿಯೇ ಹತ್ತಿಕೊಳ್ಳಬಹುದು ಎಂದಿದ್ದರು. ಬೆಳಗ್ಗೆ ಸ್ವಲ್ಪ ತಡವಾಗಿ ಮನೆಯಿಂದ ಹೊರಡಬಹುದೆಂದು ಗಾಯತ್ರಿಗೆ ಹರ್ಷ ಹೆಚ್ಚಾಯಿತು. ಮಂಗಳಾಗೆ ಫೋನ್ ಮಾಡಿ ವಿಷಯ ತಿಳಿಸಿ ಹೇಳುವ ಸಲುವಾಗಿ, ಮಂಗಳಳ ಮನೆಯೂ ಮೈಸೂರು ರಸ್ತೆಗೆ ಸಮೀಪ ಇದ್ದು ಇಬ್ಬರೂ ಜೊತೆಗೂಡಿ ಹೋಗಬಹುದು ಎಂದು ಫೋನ್ ಮಾಡಿದ್ದಳು. ಮಂಗಳಾಗೆ ನಿವೃತ್ತರ ಸಂಘದ ಬಳಿ ಹೋಗುವುದೇ ಅನುಕೂಲ ಎನ್ನಿಸಿತು. ಇಬ್ಬರೂ ಸಂಘದ ಬಳಿಯೇ ಭೇಟಿ ಆಗುವುದೆಂದು ತೀರ್ಮಾನಿಸಿದರು.

ಸುಮಾರು 300 ರಿಂದ 350 ಜನ ಒಂದೇ ಸಮಯದಲ್ಲಿ ಅದೇ ಸ್ಥಳಕ್ಕೆ ಹೋದರೆ ಗುಂಪು ಹೆಚ್ಚಾಗುವುದೆಂದು ಸಂಘದವರು ಬೆಳಗಿನ ಉಪಹಾರಕ್ಕೆ ಬೇರೆ ಬೇರೆ ಹೋಟೆಲ್‌ಗಳ ಹತ್ತಿರ ನಿಲ್ಲಿಸಿದ್ದರು. ಗಾಯತ್ರಿ ಹತ್ತಿದ್ದ ಬಸ್ಸನ್ನು ಸೀದಾ ಸಣ್ಣ ಹೋಟೆಲ್ ಒಂದರ ಹತ್ತಿರ ನಿಲ್ಲಿಸಿದ್ದರು. ಮಂಗಳ ಹತ್ತಿದ ಬಸ್ಸು ದೊಡ್ಡ ನಂದಿ ಹೋಟೆಲ್ ಬಳಿ ನಿಲ್ಲಿಸಿದ್ದರು. ಸ್ಥಳ ವೀಕ್ಷಣೆಗೂ ಒಂದೆರಡು ಬಸ್ಸು ಭೋಗನಂದೀಶ್ವರ ದೇವಾಲಯಕ್ಕೆ ಮೊದಲು ಹೋದರೆ ಮಿಕ್ಕ ಬಸ್ಸುಗಳು ಮುದ್ದೇನಹಳ್ಳಿಗೆ ಹೋಗಿದ್ದವು. ಮದ್ಯಾಹ್ನ ಊಟಕ್ಕೆ ಮುದ್ದೇನಹಳ್ಳಿ ಸಮೀಪದ ಆಶ್ರಮವೊಂದರಲ್ಲಿ ವ್ಯವಸ್ಥೆ ಮಾಡಿ ಬಸ್ಸುಗಳು ಬರಲು ಸ್ವಲ್ಪ ಸಮಯದ ಅಂತರವನ್ನು ಗೊತ್ತು ಮಾಡಿದ್ದರು. ಅಲ್ಲಿ ಎಲ್ಲಾ ಗೆಳೆಯ ಗೆಳತಿಯರು ಭೇಟಿಯಾದರು. ಕೆಲವೊಮ್ಮೆ ಮಾನವನ ಎಣಿಕೆಯೇ ಬೇರೆ, ದೈವ ನಿಯಮವೇ ಬೇರೆ. ಬಹಳ ವರ್ಷಗಳ ನಂತರ ಅನೇಕ ಸಹೋದ್ಯೋಗಿಗಳ ಭೇಟಿ ಎಲ್ಲರ ಮನಸ್ಸಿಗೂ ಮುದ ನೀಡಿತು.

ಬೆಳಗ್ಗೆ ಭೋಗನಂದೀಶ್ವರ ದೇವಾಲಯ, ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯನವರ ಮನೆ, ಮ್ಯೂಸಿಯಂ, ಸಮಾಧಿ ಸ್ಥಳ, ಸತ್ಯಸಾಯಿ ಆಶ್ರಮ, ಗೋಶಾಲೆ ಆಸ್ಪತ್ರೆ ನೋಡಿದರು. ಸಂಘದವರು ಸಮಾಧಿ ಸ್ಥಳದ ಬಳಿ ಅಲ್ಲಿ ಹೋದವರಿಗೆಲ್ಲಾ ಸಿಹಿ ಹಂಚುವ ವ್ಯವಸ್ಥೆ ಮಾಡಿದ್ದರು. ಗೋಶಾಲೆಯಲ್ಲಿ ಹಸುಗಳಿಗೆ ಎಲ್ಲರೂ ಬಾಳೆಹಣ್ಣು ತಿನ್ನಿಸಿದರು. ಆಸ್ಪತ್ರೆಯಲ್ಲಿಯೂ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಿದರು. ಗೋಶಾಲೆಯಲ್ಲಿ ನೂರಾರು ಹಸುಗಳಿದ್ದರೂ ಸ್ವಲ್ಪವೂ ವಾಸನೆ ಇಲ್ಲದೇ ಅತ್ಯಂತ ಶುಭ್ರವಾಗಿ, ಸುವ್ಯವಸ್ಥಿತವಾಗಿ ಇಟ್ಟಿದ್ದಾರೆ. ಸಗಣಿಯಿಂದ ಮಾಡಿರುವ ಗಂಧದ ಕಡ್ಡಿ, ಪದಕಗಳು, ಫಲಕಗಳನ್ನು ಎಲ್ಲರೂ ಮೆಚ್ಚಿ ಖರೀದಿಸಿದರು.

ಮಂಗಳಾಳ ತಮ್ಮ ವಸಂತನ ಬಾಲ್ಯದ ಗೆಳೆಯ ಮೂರ್ತಿಯೂ ಸಹ ಬಂದಿದ್ದರು. ಲೋಕಾಭಿರಾಮವಾಗಿ ಮಾತನಾಡಿದ ನಂತರ ಮೂರ್ತಿಯವರು ಮಂಗಳಾ ಹತ್ತಿರ ಕೆಲವು ವೈಯಕ್ತಿಕ ವಿಷಯಗಳ ಪ್ರಸ್ತಾಪ ಮಾಡಿದರು. ವಸಂತನ ಹೆಂಡತಿ ಶಿಶಿರ ಸಹ ಮೂರ್ತಿಗೆ ದೂರದ ಸಂಬಂಧಿ. ಹಾಗಾಗಿ ಮೂರ್ತಿಗೆ ಶಿಶಿರ ವಸಂತ ಇಬ್ಬರ ಸ್ವಭಾವವೂ ಚೆನ್ನಾಗಿ ತಿಳಿದಿತ್ತು. ಕರೋನದಿಂದ ವ್ಯಾಪಾರ ಕುಂಠಿತವಾಗಿದ್ದರೂ ಇದ್ದ ಹಣದಲ್ಲೇ ಆರಕ್ಕೇರದೆ ಮೂರಕ್ಕಿಳಿಯದೆ ಜಾಣತನದಿಂದ ಸಂಸಾರ ನಿರ್ವಹಣೆ ಮಾಡುತ್ತಿದ್ದಳು ಶಿಶಿರ. ದಂಪತಿಗಳು ಎಂದೂ ಯಾರ ಬಳಿಯೂ ತಮ್ಮ ಕಷ್ಟವನ್ನು ತೋರ್ಪಡಿಸಿರಲಿಲ್ಲ. ವಸಂತನ ತಂದೆಯವರು ಕಟ್ಟಿಸಿದ ಸ್ವಂತ ಮನೆಯಲ್ಲಿಯೇ ಜೊತೆಯಲ್ಲಿ ವಾಸವಾಗಿದ್ದುದರಿಂದ ವಸಂತನಿಗೆ ಮನೆ ಖರ್ಚು ಸ್ವಲ್ಪ ಕಡಿಮೆಯಾಗಿತ್ತು. ಹೇಗೋ ಸರಿ ತೂಗಿಸುತ್ತಿದ್ದನು.

ಕರೋನ ತನ್ನ ಬಾಹುಗಳನ್ನು ವಿಸ್ತರಿಸುವ ಮೊದಲೇ ವಸಂತ ತನ್ನ ತಂದೆಯವರ ಸಹಸ್ರಚಂದ್ರ ದರ್ಶನ ಸಮಾರಂಭವನ್ನು ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ನಡೆಸಿದ್ದನು. ಶಿಶಿರಳೂ ಸಹ ತಾನೇ ಇಷ್ಟಪಟ್ಟು ಗಂಡನ ಮನವೊಲಿಸಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡಿದ್ದಳು. ವಸಂತನ ಸಹೋದರ ಸಹೋದರಿಯರು ನೌಕರಿಯಲ್ಲಿ ಇದ್ದುದರಿಂದ ನೆಂಟರಿಷ್ಟರ ಹಾಗೆ ಬಂದು ಹೋಗಿದ್ದರು.

ಬಾಯಿಬಿಟ್ಟು ಹೇಳದಿದ್ದರೂ ಮೂರ್ತಿಗೆ ಗೆಳೆಯನ ಆರ್ಥಿಕ ಪರಿಸ್ಥಿತಿಯ ಅರಿವಿತ್ತು. ವಸಂತ ವ್ಯಾಪಾರ ಆರಂಭಿಸಿದ ಹೊಸದರಲ್ಲಿಯೇ ತನ್ನ ಉಳಿತಾಯದ ಹಣದಿಂದ ಒಂದು ನಿವೇಶನ ಖರೀದಿಸಿದ್ದನು. ಅದು ಬಿಟ್ಟರೆ ಬುದ್ಧಿವಂತ ಮಕ್ಕಳೇ ಅವನ ಆಸ್ತಿ.

ಮೂರ್ತಿ: ವಾಸವಾಗಿರುವ ಮನೆ ನಿಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿ. ಅದನ್ನು ಅವರು ತಮ್ಮಿಷ್ಟ ಬಂದ ರೀತಿಯಲ್ಲಿ ವಿಲೇವಾರಿ ಮಾಡಬಹುದು. ನಿಮ್ಮ ತಂದೆಯವರ ಮನಸ್ಸಿನಲ್ಲಿ ಏನಿದೆ ಎಂದು ಸ್ವಲ್ಪ ತಿಳಿದುಕೊಳ್ಳಿ

ಮಂಗಳ: ವಯಸ್ಸಾಗಿರುವ ತಂದೆಯವರ ಬಳಿ ಮನೆಯ ವಿಷಯವನ್ನು ಹೇಗೆ ಕೇಳುವುದು? ಅದರಿಂದ ಅವರ ಮನಸ್ಸಿಗೆ ನೋವುಂಟಾಗಬಹುದು. ಅವರಿಷ್ಟ ಬಂದಂತೆ ಮಾಡಲಿ ಬಿಡಿ.

ಮೂರ್ತಿ: ನೀವು, ಇತರ ಅಕ್ಕ ತಮ್ಮಂದಿರೆಲ್ಲರೂ ಅನುಕೂಲವಾಗಿ ಇದ್ದೀರಿ. ಸ್ವಂತ ಮನೆ ಮಾಡಿಕೊಂಡಿದ್ದೀರಿ. ಜೀವನ ನಿರ್ವಹಣೆಗೆ ಪಿಂಚಣಿ ಬರುತ್ತದೆ. ವಸಂತನಿಗೆ ಯಾವುದೇ ರೀತಿಯ ಪಿಂಚಣಿ ಇಲ್ಲ. ವ್ಯಾಪಾರವೂ ಸಹ ಅಷ್ಟಕ್ಕಷ್ಟೇ. ಮಗ ಇನ್ನೂ ಓದುತ್ತಾ ಇದ್ದಾನೆ.

ಮಂಗಳ: ಅದರ ವಿಷಯದಲ್ಲಿ ನನಗೆ ಆಸಕ್ತಿ ಇಲ್ಲ. ನಾವೂ ಸಹ ಸ್ವಂತ ದುಡಿಮೆಯಿಂದ ಇಷ್ಟು ಆಸ್ತಿ ಸಂಪಾದನೆ ಮಾಡಿದ್ದು. ಹೇಗಿದ್ದರೂ ವಸಂತನ ಹತ್ತಿರ ನಿವೇಶನ ಇದೆಯಲ್ಲಾ. ಮುಂದೆ ಅವನೇ ಏನೋ ಒಂದು ದಾರಿ ಕಂಡುಕೊಳ್ಳುತ್ತಾನೆ.

ಅಲ್ಲಿಗೆ ಮಾತುಕತೆ ಮುಗಿದು ಅವರವರ ಬಸ್ ಹತ್ತುವ ಸಮಯ ಬಂತು. ಒಬ್ಬರಿಗೊಬ್ಬರು ವಿದಾಯ ಹೇಳಿದರು.

ವಸಂತನ ಆರೋಗ್ಯ ಈಗ್ಗೆ ಮೂರು ವರ್ಷಗಳ ಕೆಳಗೆ ಸ್ವಲ್ಪ ಏರುಪೇರಾಗಿತ್ತು. ಮಧ್ಯರಾತ್ರಿಯಲ್ಲಿ ಬಚ್ಚಲು ಮನೆಗೆ ಹೋಗಿ ಬಂದು ಇದ್ದಕ್ಕಿದ್ದಂತೆ ಮಂಚದ ಮೇಲೆಯೇ ಕುಸಿದುಬಿದ್ದನು. ಅವನಿಗೆ ಒಂದೆರಡು ನಿಮಿಷಗಳ ಕಾಲ ಸುತ್ತಲಿನ ಪ್ರಪಂಚದ ಅರಿವೇ ಇರಲಿಲ್ಲ. ಪತ್ನಿ ಶಿಶಿರಳಿಗೆ ಗಾಬರಿಯಾಯಿತು. ಎಂದೂ ಅನಾರೋಗ್ಯದಿಂದ ಬಳಲದಿದ್ದ ಪತಿಗೆ ಇಂದೇನಾಯಿತು ಎಂದು. ಮಾರನೇ ದಿನ ವಸಂತ ಮಡಿಕೇರಿಯಲ್ಲಿದ್ದ ತನ್ನ ಸಹಪಾಠಿ ನರರೋಗ ತಜ್ಞ ಸತೀಶನಿಗೆ ಕರೆಮಾಡಿ ನಡೆದ ಸಂಗತಿಯನ್ನು ತಿಳಿಸಿದನು. ಡಾಕ್ಟರ್ ಸತೀಶ್ ತಕ್ಷಣವೇ ಸ್ಥಳೀಯ ನರರೋಗ ತಜ್ಞರ ಬಳಿ ತಪಾಸಣೆ ಮಾಡಿಸಿಕೊಳ್ಳಲು ತಿಳಿಸಿದ್ದರು. ವೈದ್ಯರು ಮಿದುಳಿನ ಸ್ಕ್ಯಾನಿಂಗ್ ಮಾಡಿದ್ದರು.

ಡಾಕ್ಟರ್ : ಮಿದುಳಿನಲ್ಲಿ ಒಂದು ಸಣ್ಣ ತೊಂದರೆ ಇದೆ. ನಿಮ್ಮ ಅದೃಷ್ಟ ಚೆನ್ನಾಗಿದೆ. ಕೆಲವರಿಗೆ ಹೀಗಾದಾಗ ಲಕ್ವಾ ಹೊಡೆಯುವ ಸಾಧ್ಯತೆ ಇರುತ್ತದೆ. ಈ ಕೆಳಗಿನ ಮಾತ್ರೆಗಳನ್ನು ನಾನು ಬರೆದುಕೊಟ್ಟಿರುವಷ್ಟು ಸಮಯ ತೆಗೆದುಕೊಳ್ಳಿ. ಒಂದು ಮಾತ್ರೆ ಮಾತ್ರ ನೀವು ಬದುಕಿರುವವರೆಗೂ ಬಿಡದೆ ತೆಗೆದುಕೊಳ್ಳಿ, ಬೇರೇನೂ ಹೆದರಿಕೆ ಇಲ್ಲ, ಧೈರ್ಯದಿಂದ ಇರಿ ಎಂದಿದ್ದರು.

ಮಂಗಳಾ ಮನಃಪಟಲದಲ್ಲಿ ಹಳೆಯ ಘಟನೆಗಳು ಸುಳಿದು ಹೋದವು. ಬುದ್ಧಿವಂತನಾದ ವಸಂತ ಸ್ನಾತಕೋತ್ತರ ಪದವಿ ಪಡೆದಿದ್ದರೂ ಸಹ ವ್ಯಾಪಾರ ಮಾಡಬೇಕು ಎನ್ನುವ ಆಸೆಯಿಂದ ಕೆಲಸಕ್ಕೆಂದು ಯಾವುದೇ ಅರ್ಜಿಯನ್ನೇ ಹಾಕಿರಲಿಲ್ಲ. ನಾವೇ ಬೇರೆಯವರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕು, ಇತರರ ಕೈಕೆಳಗೆ ನಾವು ಕೆಲಸ ಮಾಡುವುದು ಬೇಡ ಎನ್ನುವ ಆದರ್ಶ. ಚಿಕ್ಕ ಅಂಗಡಿಯನ್ನು ಇಟ್ಟುಕೊಂಡು ಕಷ್ಟಪಟ್ಟು ವ್ಯಾಪಾರ ಮಾಡಿ ಬರುವ ಆದಾಯದಲ್ಲಿ ತಂದೆ ತಾಯಿಯರನ್ನು, ಹೆಂಡತಿ, ಇಬ್ಬರು ಮಕ್ಕಳನ್ನು ನೋಡಿಕೊಂಡು ತೃಪ್ತಿಯಿಂದ ಜೀವನ ನಡೆಸುತ್ತಿದ್ದನು.

ಮೂರ್ತಿಗೆ ವಸಂತನ ಆರೋಗ್ಯದ ವಿಚಾರ ತಿಳಿದಿರಲಿಲ್ಲ. ಶಿಶಿರ ವಸಂತರ ಮುಂದಿನ ದಿನಗಳ ಬಗ್ಗೆ ಮೂರ್ತಿಯ ಕಾಳಜಿ ಕಂಡು ಮಂಗಳಾಗೆ ತನ್ನ ವರ್ತನೆ ಬಗ್ಗೆಯೇ ನಾಚಿಕೆಯಾಯಿತು. ರಕ್ತಸಂಬಂಧಕ್ಕಿಂತ ಗೆಳೆತನವೇ ಮೇಲು ಎಂಬುದು ಮತ್ತೊಮ್ಮೆ ಮನವರಿಕೆಯಾಯಿತು.

ಮದ್ಯಾಹ್ನದ ಊಟ ಮುಗಿದ ನಂತರ ಮೋಕ್ಷ ರಂಗನಾಥ ದೇವಾಲಯವನ್ನು ನೋಡಿಕೊಂಡು ಇಶಾ ಫೌಂಡೇಶನ್‌ನ ಬೃಹದಾಕಾರದ ಈಶ್ವರನನ್ನು ನೋಡಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು.

ಪ್ರವಾಸದ ಪೂರ್ವಾರ್ಧದಲ್ಲಿ ಹರ್ಷಭರಿತವಾಗಿದ್ದ ಮಂಗಳಾ ಮನವು ತನಗೇ ಅರಿವಿಲ್ಲದಂತೆ ಮತ್ತೆಲ್ಲೋ ಜಾರಿತು. ಮೂರ್ತಿ ಮರುದಿನ ಫೋನ್ ಮಾಡಿ ತಾನೇನಾದರೂ ತಪ್ಪು ನುಡಿದಿದ್ದರೆ ಕ್ಷಮಿಸುವಂತೆ ಕೇಳಿದಾಗ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವಂತೆ ಆಯಿತು.

***

ಅಜ್ಜಿಯ ನೆನಪು ಬಿಸಿ ಬಜ್ಜಿಯಂತಿದೆ

– ಗೌರಿ ಭಟ್ಟ

ಕೆಂಪು ಬಣ್ಣದ ಸೀರೆಯುಟ್ಟು, ಬೋಳು ತಲೆಯ ಮೇಲೆ ಸೆರಗು ಹೊದ್ದು, ಬಾಗಿಲಲ್ಲಿ ಕುಳಿತು ಬರಿಗಣ್ಣಿನಲ್ಲಿಯೇ ಪುಸ್ತಕಗಳನ್ನು ಓದುತ್ತಿದ್ದ ನನ್ನ ಅಜ್ಜಿ ಹಾಗೂ ಅವಳ ಮಗ್ಗದ ಸೀರೆಯ ಸುವಾಸನೆ ನನಗೆ ಮಾಸದ ನೆನಪು.

ಅಜ್ಜಿಗೂ ನನಗೂ ಬಹಳ ಆಪ್ತತೆ. ಎಷ್ಟೇ ಕೋಪ ಬಂದಿದ್ದರೂ ನನ್ನ ಮಾತಿಗೆ ಅವಳು ನಕ್ಕುಬಿಡುತ್ತಿದ್ದಳು. ನಾನೆಂದರೆ ಅವಳಿಗೆ ಬಹಳ ಇಷ್ಟವಾಗಿತ್ತು. ನನ್ನ ಶಾಲೆಯ ಗುರುಗಳು, "ಗೌರಿ ಚೆನ್ನಾಗಿ ಓದುತ್ತಾಳೆ, ಒಳ್ಳೆಯ ಹುಡುಗಿ, ಜಾಣೆ" ಎಂದೆಲ್ಲ ಹೊಗಳುತ್ತಿದ್ದರೆ ಅವಳು ಬಹಳ ಖುಷಿಪಡುತ್ತಿದ್ದಳು. ನನ್ನ ಬಗ್ಗೆ ವಿಶೇಷ ಹೆಮ್ಮೆ ಇತ್ತು ಅವಳಿಗೆ. ನಾನು ನನ್ನ ಅಪ್ಪನನ್ನೇ ಹೋಲುತ್ತಿರುವುದೂ ಇದಕ್ಕೆ ಕಾರಣವಿರಬಹುದು. ಅಜ್ಜಿಯ ಹತ್ತಿರವೇ ಮಲಗುತ್ತಿದ್ದ ನನ್ನನ್ನು ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ಬೆಳಗಿನ ಜಾವವೇ ಓದಲು ಎಬ್ಬಿಸುತ್ತಿದ್ದಳು. ಏಳದೇಹೋದರೆ ಶಾಲಾ ಗುರುಗಳಿಗೆ ಹೇಳುತ್ತೇನೆಂದು ಭಯ ಹುಟ್ಟಿಸುತ್ತಿದ್ದಳು!!

ಅಜ್ಜಿಯ ಕೊನೆಗಾಲದಲ್ಲಿ ಸ್ವಲ್ಪ ದೂರದಲ್ಲಿರುವ ಬಚ್ಚಲು ಮನೆಗೆ ಒಬ್ಬಳೇ ಹೋಗಿ ಸ್ನಾನಮಾಡಿ ಬರುವುದು ಸಾಧ್ಯವಾಗುತ್ತಿರಲಿಲ್ಲ. ಕಾಲೇಜಿನ ರಜಾದಿನಗಳಲ್ಲಿ ನಾನು ಅವಳ ಜೊತೆ ಹೋಗುತ್ತಿದ್ದೆ. ಸ್ನಾನಮಾಡಿ ತೊಳೆದು ಒಣಗಿಸಿದ್ದ ಕೆಂಪು ಬಣ್ಣದ ಮಗ್ಗದ ಸೀರೆಯುಟ್ಟು, ದೇವರ ಧ್ಯಾನ ಮುಗಿಸಿ, ಬರಿಗಣ್ಣಿನಲ್ಲಿ ತೊರವೆ ರಾಮಾಯಣ ವನ್ನೋ, ಕನಕದಾಸರ ಹರಿಭಕ್ತಿಸಾರವನ್ನೋ, ಓದುವುದು ಅವಳ ದಿನಚರಿಯಾಗಿತ್ತು.

ನಾನಾಗ ಪಿಯುಸಿ ಮೊದಲನೇ ವರ್ಷದ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೆ. ಓದಲು ರಜಾ ಕೊಟ್ಟಿದ್ದರು. ಒಂದು ದಿನ ಡಿಸೆಂಬರ್ ಚಳಿಯಲ್ಲಿ ಬೆಚ್ಚಗೆ ಬಿಸಿಲು ಕಾಯಿಸುತ್ತಿದ್ದಳು ನನ್ನ ಅಜ್ಜಿ. ಸುಮಾರು ಬೆಳಗ್ಗೆ 10.30ಕ್ಕೆ ಸ್ನಾನ ಮಾಡಿಸುತ್ತೇನೆಂದು ಕರೆದರೆ ನನ್ನ ಕಡೆಗೆ ನೋಡಲಿಲ್ಲ.

"ಏ ಮುದುಕಿ! ಒಂದರ ಮೇಲರ್ಧ ದೋಸೆಗೆ ಚಟ್ಣಿ ಇಷ್ಟ ಅಂತ ಹಾಕಿಸಿಕೊಂಡು ಖುಷಿಯಿಂದ ತಿಂದಿದ್ದೀಯಾ. ಮೇಲಾಗಿ ಲೋಟ ಪೂರ್ತೀ ಗಟ್ಟಿ ಹಾಲು ಕುಡಿದಿದ್ದೀಯ. ಹಸಿವಾಗಿರಲಿಕ್ಕಿಲ್ಲ". ಅಂದೆ. ಮುದುಕಿ 'ಅಂತ ಕರೆದರೆ ಸ್ವತಃ ಅಜ್ಜಿಗೇ ಅಲ್ಲದೇ ನಮ್ಮ ಮನೆಯಲ್ಲಿ ಯಾರಿಗೂ ಇಷ್ಟವಾಗುತ್ತಿರಲಿಲ್ಲ, ಆ ಧೈರ್ಯವು ಯಾರಿಗೂ ಇರಲಿಲ್ಲ. ಎಲ್ಲಾದರೂ ಒಮ್ಮೊಮ್ಮೆ ನಾನು ಆ ಧೈರ್ಯ ಮಾಡುತ್ತಿದ್ದೆ.

ಅದಕ್ಕೂ ಆ ಕಡೆಯಿಂದ ಯಾವುದೇ ಉತ್ತರವಿಲ್ಲ. ನಾನು ಯಾವಾಗಲೂ ಅಜ್ಜಿಯ ಉತ್ತರಕ್ಕೆ ಕಾಯುತ್ತಿರಲಿಲ್ಲ. ಹತ್ತಿರ ಹೋಗಿ ಅವಳ ಡೊಳ್ಳು ಹೊಟ್ಟೆಗೆ ಒಂದು ಸಣ್ಣದಾಗಿ ಗುದ್ದಿ. ಅಜ್ಜಿಯ ಬೊಚ್ಚು ಬಾಯಿಗೆ ಒಂದು ಸಿಹಿಯಾದ ಮುತ್ತು ಕೊಟ್ಟು ಎತ್ತಿಕೊಂಡೇ ಹೋಗಿ ಬಚ್ಚಲು ಮನೆಯಲ್ಲಿ ಬಿಡುತ್ತಿದ್ದೆ.

ಒಂದು ಸಲ ಕರೆದಾಗ ಏನೂ ಹೇಳಲಿಲ್ಲ. ಎರಡನೆಯ ಸಲ ಕರೆದು ಅವಳ ಡೊಳ್ಳು ಹೊಟ್ಟೆಗೆ ಎಂದಿನಂತೆಯೇ ಸಣ್ಣದಾಗಿ ಗುದ್ದಲು, ನಿಸ್ತೇಜವಾಗಿ ನನ್ನ ಕಡೆಗೆ ನೋಡಿದಳು. ತಡಮಾಡದೇ ಅವಳನ್ನು ಎತ್ತಲು ಹೋದೆ, ನನ್ನ ಕೈಗೆ ಸಿಗದೇ. ಮಗ್ಗೆಯಲ್ಲಿನ ಗಾಳಿ ಬರಿದಾದಾಗ ಟುಸ್ಸೆಂದು ಕೆಳಗೆ ಬಿದ್ದಂತೆ ನನ್ನಿಂದ ಒಂದು ಮೀಟರಿನಷ್ಟು ಹಿಂದೆ ಹೋಗಿ ಕುಸಿದು ಹೋದಳು. ಅಲ್ಲೇ ನೆಲದ ಮೇಲೆಯೇ ಅವಳನ್ನು ನಿಧಾನವಾಗಿ ಮಲಗಿಸಿದೆ.

ಎಷ್ಟು ಕರೆದರೂ ನನ್ನ ಕರೆಗೆ ಓಗೊಡುತಿಲ್ಲ,
ಅಲ್ಲಾಡಿಸಿದರೂ ಪ್ರೀತಿಯ ಅಜ್ಜಿ ಸ್ಪಂದಿಸುತಿಲ್ಲ,
ಡೊಳ್ಳು ಹೊಟ್ಟೆಗೆ ಇಟ್ಟ ಗುದ್ದು ನಗು ತರಿಸಲಿಲ್ಲ,
ಬೊಚ್ಚುಬಾಯಿಗೆ ಕೊಟ್ಟ ಮುತ್ತು ಸಿಹಿಯಾಗಿರಲಿಲ್ಲ,
ಎತ್ತಿ –ಹೊತ್ತೋಡಬೇಕೆಂದರೆ ಸಾಧ್ಯವಾಗಲಿಲ್ಲ,
ಕಣ್ಣೆದುರೇ ಶವವಾಗಿ ಮಲಗಿದ್ದು ಮರೆಯುವಂತಿಲ್ಲ,
ಸತ್ತರೂ ಬಿಡದೆ ಕಾಡುತಿರುವಳು ಹುಸಿಯಲ್ಲ.

ನನ್ನ ಮನ ಅಜ್ಜಿಯ ನೆನಪಿನಿಂದ ಹಸಿಯಾಗುವುದು .

ಮಗ್ಗದ ಸೀರೆಯ ಪರಿಮಳವು ಮೂಗಿಗೆ ಸೋಂಕಿದಾಗ,
ನಾ ನಗಲು ಡೊಳ್ಳು ಹೊಟ್ಟೆಯು ಕುಣಿಯುವಾಗ,
ನೋಟಿನಲಿ ತಾತನ ನಗುವನು ಕಾಣುವಾಗ,
ಹೊಸದಾದ ಕನ್ನಡ ಪುಸ್ತಕದ ಪುಟ ತೆರೆಯುವಾಗ,
ತಪ್ಪಾಗಿ ಪದಗಳನು ಆಡುವಾಗ, ಬರೆಯುವಾಗ,
ಕನಸಿನಲಿ ಬಂದು ಬೊಚ್ಚು ಬಾಯಲಿ ನಗುವಾಗ,
ಆ ಬಾಯಿಗೆ ಮುತ್ತಿಡುತೆ ಎಚ್ಚರವಾಗುವಾಗ.

ಮರೆವೆನೆಂದರೂ ಬಿಡದೆ ಕಾಡುವಾಕೆ

ಬಳಪವ ಕೈಯಲ್ಲಿ ಹಿಡಿದು ಬರೆಸಿದಾಕೆ,
ನನ್ನ ಮುದ್ದಾದ ಅಕ್ಷರವ ನೋಡಿ ಹಿಗ್ಗಿದಾಕೆ,
ಕಪ್ಪಾದ ನನ್ನನ್ನು ಪ್ರೀತಿಯಿಂದ ಅಪ್ಪಿದಾಕೆ,
ತಪ್ಪನ್ನು ಒಪ್ಪವಾಗಿಸಿ ಬಿಗಿದು ತಬ್ಬಿಕೊಂಡಾಕೆ,
ಒಪ್ಪಾದ ಕಾಲಿಗೆ ಬೆಳ್ಳಿ ಗೆಜ್ಜೆಯ ತೊಡಿಸಿದಾಕೆ,
ಎಲ್ಲಾ ಕೊಟ್ಟು ನಾನೀಗ ಕರೆದರೆ ಬಾರದಾಕೆ,
ಮುದುಕಿಯಾಗಿಯೇ ನನ್ನನ್ನು ಪ್ರೀತಿಯಿಂದ ಕಾಡುವಾಕೆ.

ಅಜ್ಜಿಯ ನೆನಪು ಇನ್ನೂ ಇಷ್ಟದ ಬಿಸಿ ಬಜ್ಜಿಯಂತಿದೆ.

(ನಲವತ್ತಮೂರು ವರ್ಷಗಳ ಹಿಂದೆ ಅಂದರೆ ಹತ್ತೊಂಬತ್ತು ಡಿಸೆಂಬರ್ ಹತ್ತೊಂಬತ್ ನೂರಾ ಎಂಬತ್ತನೇ ಇಸವಿಯಲ್ಲಿ ನಾನು ಕಳೆದುಕೊಂಡ ಪ್ರೀತಿಯ ಅಜ್ಜಿಯ ನೆನಪುಗಳ ಬಗ್ಗೆ)

***

ವ್ಯಾಕರಣದ ಪ್ರಯೋಜನಗಳು

– ಗಣಪತಿ ಹೆಗಡೆ

ವ್ಯಾಕರಣ ಶಬ್ದವು 'ವ್ಯಾಕ್ರಿಯಂತೆ' ಎನ್ನುವದರಿಂದ ಹುಟ್ಟಿಕೊಂಡಿದೆ.

'ವ್ಯಾಕ್ರಿಯಂತೇ ವ್ಯುತ್ಪಾದ್ಯಂತೇ ಅರ್ಥವತ್ತಾಯ ಪ್ರತಿಪಾದ್ಯಂತೇ ಶಬ್ದಾಃ ಯಸ್ಮಿನ್ ತತ್' ಎಂದು ವ್ಯಾಕರಣವನ್ನು ವ್ಯಾಖ್ಯಾನಿಸಲಾಗುತ್ತದೆ. (ವ್ಯಾಕಾರಃ=ರೂಪಾಂತರ)

ಇದರಿಂದಾಗಿಯೇ ಜಿ.ವಿಷ್ಣುಮೂರ್ತಿ ಭಟ್ಟರು, ಬಾಲಬೋಧಿನಿ (ವೈಯಾಕರಣ ಸಿದ್ಧಾಂತ ಕೌಮುದೀ ಇದರ ಕನ್ನಡ ವ್ಯಾಖ್ಯಾನದಲ್ಲಿ) 'ಪದಸಂಸ್ಕಾರವನ್ನು ತಿಳಿಸುವ ಶಾಸ್ತ್ರಕ್ಕೆ 'ವ್ಯಾಕರಣಶಾಸ್ತ್ರವೆಂದು ಹೆಸರು' ಅಂತ ಸ್ಥೂಲವಾಗಿ ವ್ಯಾಕರಣಶಾಸ್ತ್ರದ ಕುರಿತು ತಿಳಿಸಿದ್ದಾರೆ.

ಬಹುಶಃ, ಎಲ್ಲಾ ಭಾಷೆಗಳೂ, ನಿಯಮಬದ್ಧವಾಗಿ ನಡೆಯಲು ವ್ಯಾಕರಣ, ಆವಶ್ಯಕವಷ್ಟೇ ಅಲ್ಲ ಅನಿವಾರ್ಯ ಕೂಡ ಹೌದು. ಆ ಆ ಭಾಷೆಗಳಿಗೆ ಅನುಗುಣವಾಗಿ ವ್ಯಾಕರಣ ಪ್ರಕ್ರಿಯೆಗಳು ನಡೆಯುತ್ತವೆ. ಅಕ್ಷರ-ಶಬ್ದ- ವಾಕ್ಯಗಳ ಉತ್ಪತ್ತಿ ಹಾಗೂ ಅವುಗಳ ರಚನೆಗಳು ವಿವಿಧ ಭಾಷೆಗಳಲ್ಲಿ ಬೇರೆ ಬೇರೆ ರೀತಿಯಾಗಿಯೇ ಇರುವದು ಸಹಜ. (ಅಕ್ಷರ-ಶಬ್ದ-ವಾಕ್ಯಗಳ ರಚನಾಕ್ರಮವನ್ನು ತಿಳಿಸುವ ಶಾಸ್ತ್ರವು ವ್ಯಾಕರಣ ಹಾಗೂ ಅವುಗಳ ಕಾವ್ಯ ಭಾಗವನ್ನು ವಿವರಿಸುವ ಶಾಸ್ತ್ರವನ್ನು ಲಕ್ಷಣಶಾಸ್ತ್ರವೆಂತಲೂ ತಿಳಿಯಬಹುದು)

ಸಂಸ್ಕೃತ ವ್ಯಾಕರಣ, ಇಂಗ್ಲೀಷ್ ವ್ಯಾಕರಣ, ಕನ್ನಡ ವ್ಯಾಕರಣ, ತಮಿಳು ವ್ಯಾಕರಣ ಹೀಗೆ ಬೇರೆ ಬೇರೆ ಭಾಷೆಯ ವ್ಯಾಕರಣಗಳಲ್ಲಿಯ ವ್ಯತ್ಯಾಸವು ತಿಳಿದಿದ್ದೇ ಆಗಿದೆ. ಕರ್ತೃ-ಕರ್ಮ-ಕ್ರಿಯಾಪದಗಳಂತಹ ಪ್ರಕ್ರಿಯೆಗಳು ಸಾಮಾನ್ಯವಾಗಿ ಎಲ್ಲಾ ಭಾಷೆಗಳಲ್ಲಿ ಒಂದೇ ಆಗಿರುತ್ತವೆ. ಹಾಗೆಯೇ ಕಾವ್ಯಭಾಗಗಳಾದ ಗುಣಾಲಂಕಾರಗಳೂ ಮೂಲರೂಪದಲ್ಲಿ, ಭಾಷೆಗಳ ವ್ಯತ್ಯಾಸದಿಂದ ಬೇರೆ ಬೇರೆ ಆಗುವ ಸಂಭವ ಕಡಿಮೆ. (ಇಂಗ್ಲೀಷಿನಲ್ಲಿ simile, metaphor ಮೊದಲಾದವುಗಳನ್ನು ಉಪಮೆ, ರೂಪಕ ಹೀಗೆ ಕರೆಯುತ್ತೇವೆ. ಆದರೆ ಬೇರೆ ಬೇರೆ ಭಾಷೆಗಳಲ್ಲಿಯೂ ಇವುಗಳ ಸ್ವರೂಪ ಒಂದೇ ಆಗಿರುತ್ತದೆ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಎನ್ನುವಂತಹ ವಿವರಣೆ ಎಲ್ಲಾ ಭಾಷೆಗಳ ಕಾವ್ಯಕ್ಕೆ ಒಂದೇ ರೀತಿ ಅನ್ವಯವಾಗುತ್ತದೆ.)

ಆದರೆ ಶಬ್ದಗಳ ಉತ್ಪತ್ತಿ, ಶಬ್ದಗಳ ಅರ್ಥಸ್ಫುರಣೆ ಹಾಗೂ ವಾಕ್ಯಗಳ ಸಂಯೋಜನೆಯಲ್ಲಿ ಭಾಷೆಗಳಲ್ಲಿಯ ವ್ಯತ್ಯಾಸಗಳನ್ನು ಗುರುತಿಸಬಹುದು. ಶಾಕಟಾಯನರಂತೂ, 'ಎಲ್ಲಾ ನಾಮಪದಗಳು ಧಾತುವಿನಿಂದಲೇ ಉಂಟಾಗಿವೆ' ಎಂದು ಹೇಳುವ ಮೂಲಕ ಧಾತು ಜನಕ ರೂಪವೆಂತಲೂ ಎಲ್ಲಾ ನಾಮಪದಗಳು ಜನ್ಯರೂಪಗಳೆಂದೂ ತಿಳಿಸಿದ್ದಾರೆ. (ಸಂಗೀತದಲ್ಲಿ ಜನ್ಯ-ಜನಕ ರಾಗಗಳಿದ್ದ ಹಾಗಿರಬಹುದು.)
(ಧೃ ವಿಂದ ಧರಣಿ, ಧರ್ಮ, ಕೃ ವಿಂದ ಕರ್ಮ, ಕರಣ, ಕ್ರಿಯೆ, ಕರ್ತೃ ಹೀಗೆ)

ಯಾವುದೇ ಭಾಷೆ ಇರಲಿ ಅದರ ಸುಸಂಬದ್ಧವಾದ ಪ್ರಯೋಗಕ್ಕೆ ಆ ಭಾಷೆಯ ಪರಿಪೂರ್ಣವಾದ ತಿಳುವಳಿಕೆ ಅತ್ಯವಶ್ಯಕ.

ಇವೇ ವ್ಯಾಕರಣದ ಉಪಯೋಗಗಳು.

'ಯದ್ಯಪಿ ಬಹು ನಾಧೀಷೇ ತಥಾಪಿ ಪಠ ಪುತ್ರ ವ್ಯಾಕರಣಂ
ಸ್ವಜನಃ ಶ್ವಜನೋ ಮಾ ಭೂತ್ ಸಕಲಂ ಶಕಲಂ ಸಕೃತ್ ಶಕೃತ್'

(ಮಗು, ನೀನು ಬಹಳ ಓದಿಲ್ಲದಿದ್ದರೂ ವ್ಯಾಕರಣವನ್ನು ಮಾತ್ರ ಕಲಿ. ಸ್ವಜನ (ನಮ್ಮವರು) ಎನ್ನುವದನ್ನು ನಾಯಿ ಅಂತ ಹೇಳಬಾರದು, ಪೂರ್ತಿ ಎನ್ನುವದನ್ನು ಒಡೆದ ತುಂಡು ಎನ್ನಬಾರದು, ಸುಕೃತ ಎನ್ನುವದನ್ನು ಮಲ ಎಂತ ಎನ್ನಬಾರದು)

ಈ ಶ್ಲೋಕ, ವ್ಯಾಕರಣದ ಪಾರಮ್ಯವನ್ನು ಹೇಳಲು ಒಂದು ಸಮರ್ಥ ಹೇಳಿಕೆ. ಅರ್ಥಗಳಲ್ಲಿ ಕೇವಲ ಬದಲಾವಣೆಯಲ್ಲ, ವಿಪರೀತ, ಅಶ್ಲೀಲ ಅಥವಾ ಅಸಹ್ಯ ಅರ್ಥಸ್ಪುರಣೆಯೂ ಆಗುತ್ತದೆ.

ಮೊಳೆ–ಮೊಲೆ, ಹೇಳು–ಹೇಲು, ಮಗ–ಮಂಗ, ರಿಕ್ತ–ರಕ್ತ, ವೇಶ್ಯೆ–ವೈಶ್ಯೆ, ಭುಕ್ತಿ–ಭಕ್ತಿ ಹೀಗೆ ಕನ್ನಡದಲ್ಲಿಯೂ ಇಂತಹ ಉದಾಹರಣೆಗಳನ್ನು ಗಮನಿಸಬಹುದು. (ಇತರ ಭಾಷೆಗಳೂ ಇದಕ್ಕೆ ಹೊರತಲ್ಲ ಅಲ್ಲವೇ?).

ಎಷ್ಟೋ ಸಲ ಬೇರೆ ಬೇರೆ ಅರ್ಥಗಳುಳ್ಳ ಶಬ್ದಗಳನ್ನು ಬಳಸುವಾಗಲೂ ಸಂದರ್ಭವನ್ನು ಗಮನಿಸಿ ಶಬ್ದಗಳ ಬಳಕೆ ಆಗಬೇಕು.

ಇದಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

1. ಒಮ್ಮೆ ನೀರಾಟಕ್ಕಿಳಿದ ಹೆಂಡತಿಯ ಮೇಲೆ ಗಂಡ ನೀರೆರಚಿದ. ಅವಳು 'ಮೋದಕೇನ ತಾಡಯ' ಅಂತ ಹೇಳಿದಾಗ ಅವನು ಅವಳ ಮೇಲೆ ಎರಚಲಿಕ್ಕಾಗಿ 'ಮೋದಕಗಳನ್ನು ತರಿಸಿದನಂತೆ. (ಮೋದಕೇನ ತಾಡಯ=ಮಾ ಉದಕೇನ ತಾಡಯ= ನೀರನ್ನು ಎರಚಬೇಡ)

2. ಊಟಕ್ಕೆ ಕುಳಿತಾಗ ಒಬ್ಬರು 'ಸೈಂಧವಮಾನಯ' ಅಂತ ಹೇಳಿದಾಗ 'ಕುದುರೆಯನ್ನು' ತಂದು ಕಟ್ಟಿದರಂತೆ. (ಸೈಂಧವ ಶಬ್ದಕ್ಕಿರುವ ಉಪ್ಪು ಹಾಗೂ ಕುದುರೆ ಎನ್ನುವ ಅರ್ಥಗಳನ್ನು ತಿಳಿಯದೇ ಇದ್ದುದರಿಂದ ಆದ ಆಧ್ವಾನ ಇದು).

3. ಊಟಕ್ಕೆ ಪಂಡಿತನೊಂದಿಗೆ ಕುಳಿತಿದ್ದಾಗ ಗಂಡ 'ದಧಿಮಾನಯ' ಅಂದನಂತೆ. ಅದಕ್ಕೆ ಭಾಷೆಯನ್ನು ತಿಳಿದ ಹೆಂಡತಿ, 'ಗಂಡನಿಗೆ ಆರೋಗ್ಯಕ್ಕೆ ಮೊಸರು ಹೊಂದುವದಿಲ್ಲ. ಆದುದರಿಂದ ದಧಿ ಮಾ ಆನಯ ಅಂತ ಹೇಳಿದರು' ಎಂದು ಮಜ್ಜಿಗೆ ತಂದು ಬಡಿಸಿ ಗಂಡನ ಮಾನ ಉಳಿಸಿದಳಂತೆ. (ದಧಿ ಶಬ್ದದ ದ್ವಿತಿಯಾ ವಿಭಕ್ತಿ ದಧಿಮ್ ಅಂತ ಆಗದೇ ದಧೀ ಅಂತಲೇ ಇರುತ್ತದೆ. ಆದುದರಿಂದ ದಧಿಮಾನಯ ಇದು ಅಶುದ್ಧ ಶಬ್ಧ)

4. ಒಬ್ಬ ಜ್ಯೋತಿಷಿ, ನಾಗದೋಷವಿದೆ, ಆದುದರಿಂದ ನಾಗಪೂಜೆ ಮಾಡಿಸು ಅಂತ ಹೇಳಿದಾಗ ಆನೆಯನ್ನು ತಂದು ಅದಕ್ಕೆ ಪೂಜೆ ಮಾಡಿಸಿದನಂತೆ. (ಆನೆ ಹಾಗೂ ನಾಗ ಸಮಾನಾರ್ಥಕ ಶಬ್ದಗಳು. ಆದರೆ ಸನ್ನಿವೇಶದ ತಿಳುವಳಿಕೆಯನ್ನು ಅರಿತು ಶಬ್ದದ ಅರ್ಥವನ್ನು ತಿಳಿದುಕೊಳ್ಳಬೇಕು).

5. ಮಂತ್ರಘೋಷಣೆಯಲ್ಲಿ 'ಹೇ ಅರಯಃ' ಅಂತ ಹೇಳುವ ಬದಲಾಗಿ 'ಹೇ ಅಲಯಃ' ಅಂತ ಹೇಳಿದುದರಿಂದ ರಾಕ್ಷಸರು ಸೋತುಹೋದರೆಂದು ಇತಿಹಾಸ ಹೇಳುತ್ತದೆ.

6. 'ಇಂದ್ರಶತ್ರುರ್ವರ್ಧಸ್ವ' ಎನ್ನುವದು ವೇದದಲ್ಲಿ ವ್ಯಾಕರಣದ ತಿಳುವಳಿಕೆ ಎಷ್ಟು ಮಹತ್ವದ್ದು ಅಂತ ತಿಳಿಸಲು ಒಂದು ಪ್ರಮುಖವಾದ ವೇದ ಮಂತ್ರ. ಕೇವಲ ಶಬ್ದದಲ್ಲಿ ಇರಬಹುದಾದ ಉದಾತ್ತ– ಅನುದಾತ್ತ ಸ್ವರ ವ್ಯತ್ಯಾಸದಿಂದಾಗಿ ಅರ್ಥವೇ ವ್ಯತ್ಯಾಸವಾಗಿ ವೃತ್ತಾಸುರನೇ ಸಾಯುತ್ತಾನೆ. ಸ್ವರದ ಬದಲಾವಣೆಯಿಂದಾಗಿ ಸಮಾಸವೇ ಬದಲಾವಣೆಯಾಗಿ, ಇಂದ್ರನು ಶತ್ರು ಎನ್ನುವದರ ಬದಲಾಗಿ ಇಂದ್ರನ ಶತ್ರು ಅಂತ ಆಯಿತು. (ಇಂದ್ರಶತ್ರು ಎನ್ನುವದನ್ನು ಎರಡು ರೀತಿ ಬಿಡಿಸಬಹುದು. ಇಂದ್ರಸ್ಯ ಶತ್ರುಃ ಯಃ ಸಃ–ತತ್ಪುರುಷ ಸಮಾಸ. ಹಾಗೂ ಇಂದ್ರಃ ಯಸ್ಯ ಶತ್ರುಃ ಸಃ–ಬಹುವ್ರೀಹಿ ಸಮಾಸ). ಆದುದರಿಂದಲೇ ವೇದಮಂತ್ರಗಳು ಸ್ವರಸಮ್ಮಿತ ಎನ್ನುವದು. ಸ್ವರರಾಹಿತ್ಯದಿಂದಾಗಿ ವಿಪರೀತ ಪರಿಣಾಮ ಉಂಟಾಗುತ್ತದೆ.

7. ಪಾರ್ಥಸಾರಥಿ ಅಂದರೆ ಕೃಷ್ಣ ಅಂತ ಎಲ್ಲರಿಗೂ ಗುತ್ತು. ಆದರೆ 'ಪಾರ್ಥಃ ಯಸ್ಯ ಸಾರಥಿ, ಸಃ ಪಾರ್ಥಸಾರಥಿ'(ಅರ್ಜುನನು ಯಾರ ಸಾರಥಿಯೋ ಅವನು), ಅಂತ ಹೇಳಿ ಉತ್ತರಕುಮಾರನೇ ಪಾರ್ಥಸಾರಥಿ ಅಂತ ಹೇಳುವವರೂ ಇದ್ದಾರೆ. (ಇದು ತಮಾಶೆಗಾಗಿ ಮಾತ್ರ. ನಿಜವಾದ ಅರ್ಥ ಪಾರ್ಥಸ್ಯ ಸಾರಥಿಃ ಯಃ ಸಃ (ಪಾರ್ಥನ ಸಾರಥಿಯು ಯಾರೋ ಅವನು ಪಾರ್ಥಸಾರಥಿ).

'ಕಾನಿ ಪುನ: ಶಬ್ದಾನುಶಾಸನಸ್ಯ ಪ್ರಯೋಜನಾನಿ?'(ಶಬ್ದಾನುಶಾಸನ ಅಂದರೆ ವ್ಯಾಕರಣ)

ಹೀಗೆ ವ್ಯಾಕರಣದ ಪ್ರಯೋಜನೆಗಳನ್ನು ತಿಳಿಸುವಾಗ,

'ರಕ್ಷೋಹಾಗಮಲಘ್ವಸನ್ದೇಹಾಃ ಪ್ರಯೋಜನಮ್ ।।'
ಎನ್ನುವದು ಪ್ರಮುಖವಾದ ಸೂತ್ರ. (ರಕ್ಷಃ, ಊಹಃ, ಆಗಮ, ಲಘು, ಅಸಂದೇಹ ಇವು ವ್ಯಾಕರಣದ ಪ್ರಯೋಜನಗಳು).

ಇದರ ಜೊತೆ ವ್ಯಾಕರಣದ ಅಧ್ಯಯನದ ಅವಶ್ಯಕತೆಯನ್ನು ಈ ಕೆಳಗಿನಂತೆ ತಿಳಿಸಿದ್ದಾರೆ.

ರಕ್ಷಾರ್ಥಂ ವೇದಾನಾಮಧ್ಯೇಯಂ ವ್ಯಾಕರಣಂ.।

ಲಘ್ವರ್ಥಂ ಚಾಧ್ಯೇಯಂ ವ್ಯಾಕರಣಮ್ ।

ಅಸನ್ದೇಹಾರ್ಥಂ ಚಾಧ್ಯೇಯಂ ವ್ಯಾಕರಣಮ್।

ಮ್ಲೇಚ್ಛಾ ಮಾ ಭೂಮೇತ್ಯ್ ಅಧ್ಯೇಯಂ ವ್ಯಾಕರಣಮ್ ।

ದುಷ್ಟಾಞ್ ಛಬ್ದಾನ್ ಮಾ ಪ್ರಯುಕ್ಷ್ಮಹೀತ್ಯ್ ಅಧ್ಯೇಯಂ ವ್ಯಾಕರಣಮ್।

ತಸ್ಮಾದ್ ಅನರ್ಥಕಂ ಮಾಧಿಗೀಷ್ಮಹೀತ್ಯಧ್ಯೇಯಂ ವ್ಯಾಕರಣಮ್ ।

ಸ್ತ್ರೀವನ್ ಮಾ ಭೂಮೇತ್ಯ್ ಅಧ್ಯೇಯಂ ವ್ಯಾಕರಣಮ್ ।

ಆರ್ತ್ವಿಜೀನಾಃ ಸ್ಯಾಮೇತ್ಯಧ್ಯೇಯಂ ವ್ಯಾಕರಣಮ್ ।

ಮಹತಾ ದೇವೇನ ನಃ ಸಾಮ್ಯಂ ಯಥಾ ಸ್ಯಾದ್ ಇತ್ಯಧ್ಯೇಯಂ ವ್ಯಾಕರಣಮ್ ।

ವಾಙ್ ನೋ ವಿವೃಣುಯಾದ್ ಆತ್ಮಾನಮ್ ಇತ್ಯಧ್ಯೇಯಂ ವ್ಯಾಕರಣಮ್।

ಪ್ರಾಯಶ್ಚಿತ್ತೀಯಾ ಮಾ ಭೂಮೇತ್ಯ್ ಅಧ್ಯೇಯಂ ವ್ಯಾಕರಣಮ್ ।

ಸತ್ಯದೇವಾಃ ಸ್ಯಾಮೇತ್ಯ್ ಅಧ್ಯೇಯಂ ವ್ಯಾಕರಣಮ್ ।

***

ತಿಂಡಿ ತೀರ್ಥ

– ಸುವರ್ಣಲಕ್ಷ್ಮಿ

ದೋಸೇ ರುಚಿಯೆಲ್ಲಾ ನಂದೆಂದಿತು
ಚಟ್ನಿ ದೋಸೆ ರುಚಿಗೆ ಕಾರಣವೆ ತಾನೆಂದಿತು

ಸೇಮಿಗೆಯು ಮುಂದೆ ಬಂದು ತಾನೇ ದೊರೆಯೆಂದಿತು
ಇಡ್ಲಿ ವಡೆ ಸಾಂಬಾರ್ ಬನ್ಸ್ ಮತ್ತು ಪೂರಿ ಸಮನಾರೆನಗೆಂದೂ
ಬಾಳಲೆ ಇದರ ರುಚಿಗೆ ಕಾರಣವೇ ತಾನೆಂದಿತು

ಅಂಬೊಡೆಯು ಉರುಳುತ ಬಂದು ತಾನೇ ಮೊದಲೆಂದಿತು
ಗೋಧಿಯ ಹಲ್ವಾ ಸಿಹಿ ಸಿಹಿ ಹಲ್ವಾ ಸಮನಾರೆನಗೆಂದು
ಸಕ್ಕರೆಯು ಇದರ ಸವಿಗೆ ಕಾರಣವೇ ತಾನೆಂದಿತು

ಉಪ್ಪಿಟ್ಟು ನಿತ್ಯವೆಂದೂ ತಾನೇ ಗತಿಯೆಂದಿತು
ಘಮ ಘಮ ಕಾಫೀ ಖಡಕ್ ಚಹಾ ಸಮನಾರೆನಗೆಂದೂ
ಎಲ್ಲಾ ಸವಿದು ಬಾಯಿ ತಾನೇ ಸುಖಿಯೆಂದಿತು

***

ಹಾಸ್ಯ ಲೇಖನ

ಡಾಲಿಯ ಪ್ರೇಮ ಪ್ರಕರಣ

– ಗಿರಿಜಾ ರಾಜ್ ಎಲ್.

ಡಾಲಿ ಸಹಜ ಸುಂದರಿ. ಅವಳ ಮುದ್ದಾದ ಮುಖ ನೋಡಿದವರಿಗೆ ಮತ್ತೊಮ್ಮೆ, ಮಗದೊಮ್ಮೆ ನೋಡುವ ಆಸೆಯಾಗುತ್ತಿತ್ತು. ಅವಳ ಮೈ ಬಣ್ಣ ಸ್ವಚ್ಛವಾದ ಶ್ವೇತ. ಹಣೆಯ ಮೇಲೆ ತಿಲಕದಂತೆ ಒಂದು ಕಪ್ಪುಗೆರೆ, ಅವಳ ದನಿಯ ಇಂಪಿಗೆ ಮರುಳಾದ ಅವಳ ಗೆಳೆಯರು ಅವಳನ್ನು ಅಗಲಿರಲು ಬಹಳ ದುಃಖ ಪಡುತ್ತಿದ್ದರು. ಅವಳ ಮೈಮಾಟ, ನೋಟ, ದನಿ ಅವರಿಗೆ ಹುಚ್ಚು ಹಿಡಿಸುತ್ತಿತ್ತು. ಕೈಯಿಂದ ಸ್ಪರ್ಶಿಸಿದರೆ ಮಕಮಲ್ಲಿನಷ್ಟು ಮೃದುವಾದ ಮೈ, ಬಿಳಿಯ ರೇಶಿಮೆ ಕೂದಲುಗಳ ನಯ, ನುಣುಪು, ಮನಸಿಗೆ ಆಹ್ಲಾದ ನೀಡುತ್ತಿತ್ತು. ಈ ಮುದ್ದು ಡಾಲಿ ಮನೆಯವರಿಗೆಲ್ಲ ಅಚ್ಚುಮೆಚ್ಚು. ಮನೆ ಕಾಯುವ ಕೆಲಸವನ್ನು ಅವಳಷ್ಟು ನಿಯತ್ತಾಗಿ ಯಾರೂ ಮಾಡಲಾರರು. ನಾವು ಯಾರಾದರೂ ಹತ್ತಿರ ಸುಳಿದರೆ ಸಾಕು, ಮುದ್ದು ಕೂಸಿನಂತೆ ಮುಸು ಮುಸು ಮಾಡುತ್ತ ನಮ್ಮ ಕಾಲುಗಳನ್ನು ನೆಕ್ಕುವಳು. ನಾವು ಪ್ರೀತಿಯಿಂದ ತಲೆ ಸವರಿದರೆ ಮುಗಿಯಿತು, ಮಡಿಲಲ್ಲೇ ಮಲಗಿಬಿಡುವಳು.

ನಮ್ಮ ಮನೆಯ ಬೀದಿಯಲ್ಲಿ ಶ್ವಾನಗಳು ಅಧಿಕವಾಗಿ, ಅವರೆಲ್ಲರೂ ಡಾಲಿಯ ಸೌಂದರ್ಯಕ್ಕೆ ಮಾರು ಹೋಗಿ, ಅವಳ ಪ್ರಿಯತಮರಾಗಲು ಬಯಸುತ್ತಿದ್ದವು. ಒಂದಲ್ಲ ಒಂದು ಶ್ವಾನ ರಾಜಕುಮಾರ, ಡಾಲಿಯ ಪುಟ್ಟ ಮನೆಯ ಬಳಿ ಸುಳಿದಾಡುತ್ತ, ಸರಳುಗಳ ಕಂಡಿಯೊಳಗೆ ಮೂತಿ ತೂರಿಸಿ, ಡಾಲಿಯ ಕಣ್ಣುಗಳೊಳಗೆ ಕಣ್ಣು ಬೆರೆಸಿ, ಪ್ರೇಮಭಿಕ್ಷೆ ಬೇಡುತ್ತಿದ್ದವು. ನನ್ನ ತಮ್ಮಂದಿರಿಗೆ ಈ ಶ್ವಾನ ರಾಜಕುಮಾರರ ತಲೆ ಕಂಡರಾಗುತ್ತಿರಲಿಲ್ಲ. ಡಾಲಿಯನ್ನು ಕಂಡ ಕೂಡಲೇ ನಾಯಿಬುದ್ಧಿ ತೋರಿಸುತ್ತ ಜೊಲ್ಲು ಸುರಿಸಿಕೊಂಡು ಬಾಲ ಆಡಿಸುವುದನ್ನು ನೋಡಿದರೆ ಅವರನ್ನು ಮೈ ಉರಿದು ಹೋಗುತ್ತಿತ್ತು. ಇದಕ್ಕೆ ಕಾರಣವಿದೆ, ಡಾಲಿ ಹೆಣ್ಣು, ಈ ಪ್ರಿಯತಮರ ಸೆಳೆತಕ್ಕೆ ಒಳಗಾಗಿ ಎಡವಿದರೆ, ಹುಟ್ಟುವ ಡಾಲಿ ಮರಿಗಳನ್ನು ಯಾರು ಸಾಕುವುದು? ಡಾಲಿಯನ್ನು ಎಚ್ಚರದಿಂದ ಕಾವಲು ಕಾಯಬೇಕಾಗಿತ್ತು. ಡಾಲಿಯನ್ನು ಮೊದಲು ಸರಪಳಿಯಿಂದ ಬಂಧಿಸಿ ಕಟ್ಟುತ್ತಿರಲಿಲ್ಲ. ಆದರೆ ಗೆಳೆಯರ ಕಾಟ ಹೆಚ್ಚಾದಾಗ ಅವಳನ್ನು ಕಟ್ಟುವುದು ಅನಿವಾರ್ಯವಾಯಿತು. ಹಗಲು ಹೊತ್ತಿನಲ್ಲಿ ಬರುವ ಡಾಲಿ ಪ್ರಿಯರನ್ನು ಗದರಿಸಿ ಓಡಿಸುತ್ತಿದ್ದುದರಿಂದ ಬೇಸರಗೊಂಡ ಆ ಶುನಕ ರಾಜಕುಮಾರರು, ಈ ರೀತಿ ಅಮರ ಪ್ರೇಮಕ್ಕೆ ಅಡ್ಡ ಬರುವ ಅರಸಿಕರನ್ನು ತಮ್ಮ ಬೌ ಬೌ ಭಾಷೆಯಲ್ಲಿ ಚೆನ್ನಾಗಿ ಬೈದುಕೊಂಡು, ರಾತ್ರಿ ಹೊತ್ತಿನಲ್ಲಿ ಡಾಲಿಯನ್ನು ಸಂಧಿಸಲು ತೀರ್ಮಾನಿಸಿದವು.

ನನ್ನ ತಮ್ಮಂದಿರಿಗೆ ಇದೊಂದು ದೊಡ್ಡ ತಲೆನೋವು ಮಾತ್ರವಲ್ಲ, ಮನೆಯ ಮರ್ಯಾದೆಯ ಪ್ರಶ್ನೆಯಾಗಿತ್ತು! ಒಬ್ಬರಾದ ಮೇಲೆ ಒಬ್ಬರು ನಿದ್ದೆಗೆಟ್ಟು ಕಾವಲು ಕಾಯಬೇಕು ಎಂದು ತೀರ್ಮಾನವಾಯ್ತು. ಒಂದು ಸರಿಯಾದ ದೊಣ್ಣೆಯನ್ನು ಸಿದ್ಧ ಮಾಡಿಟ್ಟುಕೊಂಡರು. ತಮ್ಮಂದಿರು ಮಾತಾಡಿಕೊಳ್ಳುತ್ತಿದ್ದುದು ನನ್ನ ಕಿವಿಗೆ ಬಿತ್ತು. "ಏ ನೀಲಾ, ಆ ಕಂದು ಬಣ್ಣದ ನಾಯಿ.. ಅದೇ ಹಣೆ ಮಾತ್ರ ಬೆಳ್ಳಗಿದೆಯಲ್ಲ, ಅದು ಕಳ್ಳ ನನ್‌ಮಗಂದು. ಸರಿಯಾಗಿ ಅದರ ಕಾಲುಮುರಿಯುವ ಹಾಗೆ ಹಾಕಬೇಕು ನೋಡು."

ನೀಲಕಂಠ, "ಒಳ್ಳೇ ಗ್ರಹಚಾರ ಬಂತಲ್ಲ ನಮಗೆ, ನಿದ್ದೆಗೆಟ್ಟು ಈ ನಾಯಿಗಳನ್ನು ಕಾಯುವುದು". ನಿದ್ರಾಪ್ರಿಯನಾದುದರಿಂದ ಇದು ದೊಡ್ಡ ಹಿಂಸೆ ಎನಿಸುತ್ತಿತ್ತು ಅವನಿಗೆ. ಕೊನೇ ತಮ್ಮ ಅನಿಲ್ ಹೇಳಿದ, "ಅಲ್ರೋ, ನಾನೆಷ್ಟು ದಿನದಿಂದ ಹೇಳ್ತಾ ಇದೀನಿ, ಡಾಲಿ ಗೂಡಿನ ಚಿಲಕ ಸರಿ ಇಲ್ಲ ಅಂತ. ಅದನ್ನು ಮೊದ್ಲು ಭದ್ರ ಮಾಡ್ಕೊಂಡ್ರೆ ನಾಯಿಗಳು ಬಂದ್ರೂ ಏನಾಗಲ್ಲ". ಬಾಬು ಹೇಳಿದ, "ಹೌದಪ್ಪಾ, ಟೈಮೇ ಸಿಗಲ್ಲ, ಸರಿ ಮಾಡಿಸ್ಬೇಕು, ಆ ಕರಿಬಿಳಿ ಪಟ್ಟಿ

ಇರೋ ನಾಯೊಂದು ಬರುತ್ತೆ ನೋಡು, ಅದು ಮೂತಿ ಚಾಚಿ ಬಾಗಿಲು ತಳ್ತಾನೇ ಇರುತ್ತೆ, ಆಯ್ತು ಹೇಗಾದ್ರೂ ಮಾಡಿ, ಎರಡು ಮೂರು ನಾಯಿಗಳಿಗೆ ದೊಣ್ಣೆ ಸೇವೆ ಮಾಡಿದ್ರೆ ಸಾಕು, ಆಮೇಲೆ ಡಾಲಿ ಹೆಸ್ರು ಕೇಳಿದ್ರೂ ಉಚ್ಚೆ ಉಯ್ಕೋತಾವೆ" ಎಂದು ಮಾತು ಮುಗಿಸಿದ.

ಹೀಗೇ ಒಂದು ವಾರ ತಮ್ಮಂದಿರು ನಿದ್ದೆಗೆಟ್ಟರು. ಕರಿಬಿಳಿ ಪಟ್ಟೆ ನಾಯಿ, ಕಂದು ನಾಯಿ, ಕರಿ ನಾಯಿ, ಬಿಳಿ ನಾಯಿ ಎಲ್ಲವೂ ಏಟು ತಿಂದವು. ತಮ್ಮಂದಿರು ಮೀಸೆ ತಿರುವಿದರು. ಇಷ್ಟೊಂದು ಘೋರ ರೀತಿಯಲ್ಲಿ ಅಮರ ಪ್ರೇಮದ ದಾರಿಯಲ್ಲಿ ಮುಳ್ಳು ಹರಡುವ ಪಾಪಿಗಳನ್ನು ಕಂಡು ಶಪಿಸುತ್ತಾ, "ಈ ಡಾಲಿಯ ಸಹವಾಸವೂ ಬೇಡ, ಆ ದೊಣ್ಣೆಯ ಮರಣ ಸದೃಶ ಏಟೂ ಬೇಡ" ಎಂದು ನಿರ್ಧರಿಸಿ ಒಬ್ಬೊಬ್ಬರೇ ರಾಜಕುಮಾರರು ಕಳಚಿಕೊಂಡರು. ದಿಗ್ವಿಜಯ ಸಾಧಿಸಿದವರಂತೆ ಅಟ್ಟಹಾಸ ಮಾಡಿದರು ನನ್ನ ಅನುಜರು.

ಕೆಲದಿನಗಳು ಕಳೆದವು. ಡಾಲಿಗೆ ಪ್ರಿಯತಮರ ಹಾವಳಿ ತಪ್ಪಿತೆಂದು ಕಾಣುತ್ತದೆ. ನನ್ನ ತಮ್ಮಂದಿರು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಒಂದು ದಿನ ನನ್ನ ಕಾಲುಗಳನ್ನು ಸುತ್ತು ಹಾಕುತ್ತಾ, ಪ್ರೀತಿಯಿಂದ ಆಟವಾಡುತ್ತಿದ್ದ ಡಾಲಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವಳ ಹೊಟ್ಟೆ ದಿನದಿಂದ ದಿನಕ್ಕೆ ದಪ್ಪವಾಗುತ್ತಿದೆ ಎನಿಸಿತು. ನನ್ನ ಸಂಶಯವನ್ನು ನನ್ನ ತಮ್ಮಂದಿರ ಕಿವಿಗೆ ಹಾಕಿದೆ. ಡಾಲಿ ಏನಾದರೂ ಎಡವಿದ್ದಾಳೆಯೇ? ನಡತೆಗೆಟ್ಟಿದ್ದಾಳೆಯೇ? ತಮ್ಮಂದಿರು ಪ್ರಬಲವಾಗಿ ವಿರೋಧಿಸಿದರು. "ಅದೆಂಗ್ ಸಾಧ್ಯ, ಎಷ್ಟೋ ದಿನ ಆಯ್ತು ಆ ನಾಯ್ಗಳು ಬರೋದ್ ನಿಲ್ಸಿ". ಹಾಗೆ ಹೀಗೆ ಅಂತ ದಬಾಯಿಸಿಬಿಟ್ಟರು. ಆದರೂ ಅವರಿಗೂ ಸಣ್ಣಗೆ ಎದೆಯ ಮೂಲೆಯಲ್ಲೆಲ್ಲೋ ಡವಡವ ಶುರುವಾಯಿತು. ಏನಾದರಾಗಲಿ ಪಶುವೈದ್ಯರನ್ನು ಕರೆಸಿ ಒಂದು ಸಲ ಚೆಕ್‌ಅಪ್ ಮಾಡಿಸಿ ಬಿಡೋಣ" ಎಂದು ಮಾತಾಡಿಕೊಂಡರು. ಪಶುವೈದ್ಯರು ಬಂದರು. ಡಾಲಿಯನ್ನು ಡಿಟೈಲಾಗಿ ಪರಿಶೀಲಿಸಿದರು. ಸಿನಿಮಾಗಳಲ್ಲಿ ನಾಟಕೀಯವಾಗಿ ನಗುತ್ತಾ, ಸಿದ್ಧಪಡಿಸಿದ ರೆಡಿಮೇಡ್ ಡೈಲಾಗ್ ಹೇಳ್ತಾರಲ್ಲ, ಹಾಗೆ ಬಾಯಿ ತೆರೆದು ಅಗಲವಾಗಿ ನಗುತ್ತಾ. "ಶುಭ ಸುದ್ದಿ ಮಾರಾಯರೇ, ಡಾಲಿ ಗರ್ಭಿಣಿಯಾಗಿದ್ದಾಳೆ" ಎಂದು ತಮ್ಮ ಕೆಲಸಕ್ಕೆ ಫೀಸು ಪಡೆದು ಹೊರಟುಬಿಟ್ಟರು.

ನಗುತ್ತಿದ್ದ ಆ ಡಾಕ್ಟರ ಮೂತಿಗೆ ಒಂದು ಅಪ್ಪಳಿಸಿಬಿಡಬೇಕೆನಿಸಿತು ತಮ್ಮಂದಿರಿಗೆ. ಡಾಲಿ ಮಾಡುವುದೆಲ್ಲವನ್ನೂ ಮಾಡಿ ಮಳ್ಳಿಯಂತೆ, ಏನೂ ಅರಿಯದ ಮುಗ್ಧಳಂತೆ ಎಂದಿನಹಾಗೇ ಎಲ್ಲರ ಕಾಲುಗಳನ್ನು ಸುತ್ತು ಹಾಕುತ್ತಾ, ನೆಕ್ಕುತ್ತ, ಮೂಸುತ್ತ ಮುದ್ದು ಮಾಡಿಸಿಕೊಳ್ಳಲು ತವಕಿಸುತ್ತಿದ್ದಳು. ತಮ್ಮಂದಿರೆಲ್ಲ ಸುಸ್ತಾಗಿ ಕುರ್ಚಿಗೊರಗಿ, ಆದ ಶಾಕ್‌ನಿಂದ ನಿಧಾನವಾಗಿ ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

***

ಕಾರ್ಮೋಡದಲ್ಲೊಂದು ಸೂರ್ಯಕಿರಣ

– ನಾಗರತ್ನ ಚಂದ್ರಶೇಖರ್

"ಮದುವೆಯಾಗಿ ಮೂರು ವರ್ಷ ಆಯ್ತಲ್ಲ, ಏನೂ ಸಮಾಚಾರ ಇಲ್ವ"– ಈ ಮಾತುಗಳನ್ನು ನೆಂಟರಿಷ್ಟರಿಂದ ಆಗಾಗ್ಗೆ ಕೇಳಿಸಿಕೊಂಡು ಸೀತಕ್ಕನಿಗೆ ಬೇಸರವಾಗಿತ್ತು.

"ಈಗಿನ ಕಾಲದ ಮಕ್ಕಳು, ನಾವು ಏನೂ ಹೇಳಕ್ಕಾಗಲ್ಲಮ್ಮ, ಮಗ, ಸೊಸೆ ಇಬ್ಬರೂ ವಿದ್ಯಾವಂತರು, ಉದ್ಯೋಗಸ್ಥರು, ಅವರೇ ನಿರ್ಧರಿಸಿಕೊಳ್ಳುತ್ತಾರೆ" ಎಂದು ಸಿದ್ಧ ಉತ್ತರವನ್ನು ಕೊಡುತ್ತಲೇ ಇದ್ದರು.

"ಈಗ್ಲೇ ಮಕ್ಕಳು, ಮರಿ ಅಂತ ಮಾಡ್ಕೊಂತಾ ಕೂತರೆ ಕೆರಿಯರ್ ಗತಿ ಏನು? ಅಷ್ಟೊಂದು ಓದಿ, ರ್‍ಯಾಂಕ್ ಪಡೆದು ಈಗತಾನೇ ಕೈ ತುಂಬಾ ಸಂಬಳ ಬರ್ತಾ ಇರೋ ಜಾಬ್ ಗತಿ ಏನು?" ಇಂತಹ ಆಲೋಚನೆಯನ್ನೇ ಗಟ್ಟಿಯಾಗಿ ಹಿಡಿದುಕೊಂಡಿದ್ದ ಮಾಧುರಿಯ ದಿಕ್ಕು ತಪ್ಪಿಸುವ ಸಂದರ್ಭ ಒದಗಿಯೇಬಿಟ್ಟಿತ್ತು.

"ಏಯ್... ಕಂಗ್ರಾಟ್ಸ್ ಕಣೆ..., ವರ್ಕ್ ಫ್ರಂ ಹೋಂ ಪ್ರಾಡಕ್ಟ್ ಅಂತೂ ಲಾಂಚ್ ಆಯ್ತಲ್ಲ, ತುಂಬಾ ಸಂತೋಷ" ಮಾಧುರಿಯ ಆಪ್ತ ಗೆಳತಿ ಎರಡು ಮಕ್ಕಳ ತಾಯಿಯಾಗಿದ್ದ ರೋಹಿಣಿಯು ಅಭಿನಂದನೆಗಳನ್ನು ತಿಳಿಸಿ ಸಂಭ್ರಮಿಸಿದ್ದಳು.

"ನನ್ನ ಕಷ್ಟ ನನ್ಗೆ. ಕರೋನ ಅಂತ ಮನೆ ಕೆಲಸದವರನ್ನು ಬಿಡಿಸಿಬಿಟ್ಟಿದ್ದೇವೆ. ಅಪ್ಪ, ಅಮ್ಮನ ಮನೆಯೋ ಹೋಗಕ್ಕಾಗದಷ್ಟು ದೂರ. ನಮ್ಮತ್ತೆಗೆ ತುಂಬಾ ಕಷ್ಟವಾಗುತ್ತೆ, ಕಣೆ. ಗರ್ಭ ತೆಗೆಸಿಕೊಂಡು ಬಿಡೋಣ ಅಂದ್ರೆ, ನನ್ನ ಗಂಡ ಬೇಡಾ ಅಂತಾನೆ".

"ಛೆ, ಛೆ, ಹಾಗೆ ಮಾತ್ರ ಮಾಡ್ಬೇಡ, ಸ್ವಲ್ಪ ಎಚ್ಚರಿಕೆಯಿಂದಿದ್ದರೆ ಸಾಕು, ಹೇಗೂ ಕರೋನಾದಿಂದಾಗಿ ಮನೆಯಿಂದ ಹೊರಗಿನ ಸುತ್ತಾಟ, ತಿನ್ನೋದು ಎಲ್ಲಾ ಬಂದ್ ಆಗಿದೆಯಲ್ಲ, ನಿಮ್ಮತ್ತೆ ಬೇರೆ ಒಳ್ಳೆ ರುಚಿ ರುಚಿಯಾದ ರಸಗವಳ ಮಾಡ್ತಾರೆ. ಏನೂ ತಾಪತ್ರಯವಾಗಲ್ಲ. ನಮ್ಮ ಫ್ಯಾಮಿಲಿ ಡಾಕ್ಟರ್ ಸುವರ್ಣ ಅವರನ್ನೂ ಪರಿಚಯಿಸುತ್ತೇನೆ, ಒಳ್ಳೇ ಗೈನಕಾಲಜಿಸ್ಟ್, ಶಿ ವಿಲ್ ಟೇಕ್ ಕೇರ್ ಆಫ್ ಯು" ಆಪ್ತ ಗೆಳತಿಯ ಭರವಸೆಯಿಂದ ಸ್ವಲ್ಪ ಗೆಲುವಾದಳು ಮಾಧುರಿ. ಶುಭ ಸಮಾಚಾರ ತಿಳಿದರೂ ಅದು ವೈದ್ಯರಿಂದ ಖಚಿತವಾದ ಮೇಲಷ್ಟೇ ಹೊರಗೆ ಸುದ್ದಿ ತಿಳಿಸಬೇಕು ಎಂದು ಮಗ, ಸೊಸೆ ತಾಕೀತಿನಂತೆ ಸೀತಕ್ಕನಿಗೆ ಮೊಮ್ಮಗುವಿನ ಕಾಣಲು ಯಾರು ಅಡ್ಡಿ ಮಾಡಿಯಾರು?

ತೆಳ್ಳಗೆ ಬಳುಕುವ ಬಳ್ಳಿಯಂತಿದ್ದ ಮಾಧುರಿಗಂತೂ ದಿನೇ ದಿನೇ ಉಬ್ಬುತ್ತಿದ್ದ ಹೊಟ್ಟೆಯೊಳಗೆ ಇರಬಹುದಾದ ಕೂಸಿನ ಭವಿಷ್ಯದ ಚಿಂತೆ. ಹೈದರಾಬಾದಿನಲ್ಲಿದ್ದ ಅಮ್ಮನ ಜೊತೆ ಕಾಲ ಕಳೆಯಬೇಕೆಂಬ ಬಯಕೆಗೆ ಹಲವಾರು ಅಡ್ಡಿ, ಆತಂಕಗಳು. ಒಂದು ರೀತಿ ಸೆಂಟ್ರಲ್ ಜೈಲಿನ ಖೈದಿಯಂತೆ ಹೆಜ್ಜೆ ಹೆಜ್ಜೆಗೂ ಎಚ್ಚರಿಕೆಯಿಂದ ತನ್ನ ಸುತ್ತಲೂ ಗೋಡೆಯೊಂದನ್ನು ನಿರ್ಮಿಸಿದ ಕಟ್ಟುಪಾಡಿನೊಳಗೆ ನಗುವುದೋ, ಅಳುವುದಕ್ಕೂ ತಿಳಿಯದೆ ಚಡಪಡಿಸುತ್ತಿದ್ದಳು ಮಾಧುರಿ. ಇಷ್ಟು ವರ್ಷ ತಾಯ್ತನವನ್ನು ಮುಂದೂಡಿ, ಈಗ ಇಂತಹ ಸಂದರ್ಭದಲ್ಲಿ ಗರ್ಭ ಧರಿಸಿ ತಪ್ಪು ಮಾಡಿದೆನೇನೋ ಎನ್ನುವ ತಪ್ಪಿತಸ್ಥ ಮನೋಭಾವ. ಸೀತಕ್ಕನ ಮಾತೃ ಹೃದಯ ಪರಿಚಯವಿದ್ದವರಿಗೆ ಮಾಧುರಿ

ಅವರ ಸೊಸೆಯಲ್ಲ, ಮಗಳೇ ಅನ್ನುವಷ್ಟು ಭರವಸೆ. ಅಕ್ಕಪಕ್ಕದವರಿಗೆ ಸೀತಕ್ಕನ ಅಡುಗೆ ಮನೆಯಿಂದ ಹೊರ ಬರುವ ವೈವಿಧ್ಯತೆಯ ರುಚಿ ಪಾಕಗಳ ಪರಿಮಳ ಮಾಧುರಿಯ ಅದೃಷ್ಟ, ಪುಣ್ಯದ ಲೆಕ್ಕ ಹೇಳುತ್ತಿದ್ದವು.

ಈ ಸಂದರ್ಭದಲ್ಲೇ ಹೈದರಾಬಾದಿನಲ್ಲಿದ್ದ ಮಾಧುರಿಯ ಅಜ್ಜಿಗೆ ಆರೋಗ್ಯ ಏರುಪೇರಾಗಿ ತೀರಿಹೋಗಿದ್ದರು. ನಿಬಂಧನೆಯಂತೆ ಶವ ಪರೀಕ್ಷೆ ಮಾಡಿದ ಮೇಲೆ ಕರೋನಾ ಪಾಸಿಟಿವ್ ಎಂದು ತಿಳಿದು ಶವ ಸಂಸ್ಕಾರದಲ್ಲಿ ಸರ್ಕಾರದ ನಿಯಮದಂತೆ ಮಣ್ಣು ಮಾಡಲಾಗಿತ್ತು. ಮನೆಯವರೆಲ್ಲಾ ಕ್ವಾರೆಂಟೈನ್ಗೆ ಒಳಗಾಗಿದ್ದರು. ಮಾಧುರಿಯ ಆರೋಗ್ಯದ ದೃಷ್ಟಿಯಿಂದ ವಿಷಯವನ್ನು ಮುಚ್ಚಿಡಲೇಬೇಕಿತ್ತು. ಅವಳು ಆಗಾಗ ಅಜ್ಜಿಯಂದ ಮಗುವಿಗೆ ಎಣ್ಣೆ ಸ್ನಾನ ಮಾಡಿಸುವ ವಿಚಾರ ಹೇಳುತ್ತಿದ್ದಳು ಬೇರೆ.

ಪಡವಲಕಾಯಿಯಂತಿದ್ದ ಮಾಧುರಿ ಬೂದುಕುಂಬಳಕಾಯಿಯಂತಾಗಿದ್ದು ಅತ್ತೆಯವರ ಕಾಳಜಿ, ಆರೈಕೆಯಿಂದ ಎಂದು ಎಲ್ಲರೂ ಅಂದುಕೊಂಡಂತೆ ಇರಲಿಲ್ಲ ಪರಿಸ್ಥಿತಿ. ಅವಳ ಗರ್ಭದಲ್ಲಿ ಅವಳ ಮಕ್ಕಳಿರುವರೆಂಬ ಸುದ್ಧಿ ಕೇಳಿ ಎಲ್ಲರಿಗೂ ಮತ್ತಷ್ಟು ಆತಂಕ. "ವರ್ಕ್ ಫ್ರಂ ಹೋಂ ರಾತ್ರಿ ಹಗಲು ಮಾಡಿದ್ರಿಂದಲೇ ಈ ಬೋನಸ್ ಕಣೆ ನಿಂಗೆ" ಅಂತ ಗೆಳತಿ ರಾಧಿಕ ಕಿಚಾಯಿಸಿದ್ದಳು. ಒಬ್ಬನೇ ಮಗನ ಇಬ್ಬರು ಮಕ್ಕಳ ಆಗಮನಕ್ಕೆ ಸಿದ್ಧತೆಗಳನ್ನು ಸೀತಕ್ಕ ಈಗ ಮತ್ತಷ್ಟು ವೇಗ, ಶ್ರದ್ಧೆಯಿಂದ ಮಾಡಿ ದಣಿಯುವುದನ್ನು ನೋಡಿ ಮಾಧುರಿಗೂ ಸಂಕಟವಾಗುತ್ತಿತ್ತು. ಸೀಮಂತಕ್ಕಾದರೂ ಅಪ್ಪ, ಅಮ್ಮ, ಅಜ್ಜಿ ಬರುವಂತಿದ್ದರೆ ಚೆನ್ನಾಗಿತ್ತು ಎಂದುಕೊಳ್ಳುತ್ತಿದ್ದಳು. ಆದರೆ ಬಸ್ಸುಗಳ ಓಡಾಟವೂ ನಿಯಂತ್ರಿತವಾಗಿದ್ದರಿಂದ ಆ ಸಂತೋಷವೂ ಅವಳಿಗೆ ದಕ್ಕಲಿಲ್ಲ ಎಂದುಕೊಂಡೇ ದಿನ ದೂಡಿದಳು. ಯಾವ ಹೆಚ್ಚುವರಿ ಶಾಸ್ತ್ರ, ಸಂಪ್ರದಾಯಗಳ ಸಂಭ್ರಮವಿಲ್ಲದೆ ಮನೆಯಷ್ಟಕ್ಕೆ ಮಾಧುರಿಯ ಉಡಿ ತುಂಬಿಸಿ ಶಾಸ್ತ್ರ ಮುಗಿಸಿದ್ದರು.

ಕರೋನಾದ ಭಯಾನಕ ದೃಶ್ಯಗಳು, ಸಾವು, ನೋವಿನ ಸುದ್ಧಿ ಸಮಾಚಾರಗಳನ್ನು ಮನೆಯಲ್ಲಿದ್ದ ಟಿ.ವಿ., ವೃತ್ತ ಪತ್ರಿಕೆಗಳಿಂದ ದೂರವಿರಿಸುವ ಹರಸಾಹಸ ಮಾಡಿ ಮನೆಯವರು ಹೈರಾಣಾದರು.

"ನಮ್ಮ ಮಕ್ಕಳಿಗೆ ಏನು ಹೆಸರಿಡುವುದು? ಹೆಣ್ಣಾದರೆ ಕರೀನಾ, ಗಂಡಾದರೆ ಕರೋನಾ'' ಅಂತೆಲ್ಲಾ ಹಾಸ್ಯ ಮಾಡುತ್ತಿದ್ದವಳಿಗೆ ಈಗ ಎರಡು ಮಕ್ಕಳ ಢಬಲ್ ಧಮಾಕ ಎನ್ನುವ ಹಾಗಾಗಿತ್ತು. ಗೊತ್ತಾದ ದಿನ ತುಂಬಿದ ನಂತರ ಡಾ.ಸುವರ್ಣ ಅವರು ಕೆಲಸ ಮಾಡುತ್ತಿದ್ದ ನರ್ಸಿಂಗ್ ಹೋಂನಲ್ಲಿ ಎರಡು ಮುದ್ದಾದ ಪುಟ್ಟ ಶಿಶುಗಳಿಗೆ ಮಾಧುರಿ ತಾಯಿಯಾದಳು. ಒಂದೇ ಪಡಿಯಚ್ಚಿನಂತಿದ್ದ ಮುದ್ದಾದ ತನ್ನ ಮಕ್ಕಳನ್ನು ತೋರಿಸುತ್ತಾ ಗಂಡನಿಗೆ "ಸಧ್ಯ, ಗಂಡು ಮಗುವಾಗಿದ್ದರೆ ಕರೋನಾ ಅಂತ ಹೆಸರಿಡುವುದು ತಪ್ಪಿತು, ಈಗ ಎರಡೂ ಕರೀನಾಗಳೇ" ಎಂದು ಕಣ್ಣು ಮಿಟುಕಿಸಿದಳು. ಬಾಯೊಳಗೆ ಬೆರಳಿಟ್ಟು ಚೀಪುತ್ತಾ ಬೆಚ್ಚಗೆ ಮಲಗಿದ್ದ ಅವುಗಳನ್ನು ಆಶ್ಚರ್ಯದಿಂದ ನೋಡುತ್ತಿದ್ದವನು "ಅರೇ, ನಾವೆಲ್ಲಾ ಬಾಯಿ, ಮೂಗು ಮುಚ್ಚಿಕೊಂಡೇ ಆರೇಳು ತಿಂಗಳಿಂದ ಓಡಾಡುತ್ತಿದ್ದೇವೆ, ಆದರೆ ಈ ಬೆರಳು ಚೀಪುವ ಮಕ್ಕಳಿಗೆ ಮುಂದೆ ಮಾಸ್ಕ್ ಹಾಕುವ ಅಭ್ಯಾಸ ಮಾಡೋದು ಹ್ಯಾಗೆ ಮಾಧುರಿ?" ಎಂದು ಕಿಚಾಯಿಸಿದಾಗ ಅಲಿದ್ದವರೆಲ್ಲಾ ಜೋರಾಗಿ ನಕ್ಕರು. ಪುಟ್ಟ ಮಕ್ಕಳು ಬೆಚ್ಚಿ, ಪಿಳಿಪಿಳಿ ಕಣ್ಣು ಬಿಟ್ಟವು. ಕಾರ್ಮೋಡದಲ್ಲೊಂದು ಸೂರ್ಯ ಕಿರಣ ಕಂಡಂತಾಗಿತ್ತು.

***

ಇಜೇರಿಯ ಮರ್ಮ ತಿಳಿಯಿತು

– ವಿಠ್ಠಲ ಇಜೇರಿ

ಅದು 1994ರ ಜುಲೈ ತಿಂಗಳು, ನಾನು ಗುಲಬುರ್ಗಾದ ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ನಮ್ಮ ಭಾರತೀಯ ಸ್ಟೇಟ್ ಬ್ಯಾಂಕಿನ ಪ್ರಧಾನ ಕಚೇರಿಯಿಂದ ಲೆಖ್ಖ ತಪಾಸಿಗನಾಗಿ ನೀಯೋಜಿಸಲ್ಪಟ್ಟಿದ್ದೆ.

ಅಲ್ಲಿ ಹಿಂದಿನ ವರ್ಷ ಅದೇ ಕೆಲಸಕ್ಕೆ ನಿಯುಕ್ತರಾಗಿ ಪ್ರಧಾನ ಕಚೇರಿಯಲ್ಲಿ ನನ್ನ ಸಹಪಾಠಿಯಾಗಿದ್ದ ಅಮರನಾರಾಯಣ ಹೋಗಿದ್ದರು. ಅಪರಿಚಿತರ ಮಧ್ಯೆ ಒಬ್ಬ ಸ್ನೇಹಿತರು ಸಿಕ್ಕಿದ ಸಂತೋಷವಿತ್ತು, ಯಾಕೆಂದರೆ ಬೆಂಗಳೂರಿನಲ್ಲಿ ಗುಲಬುರ್ಗಾ ಬಿಸಿಲು ಮತ್ತು ನಾನು ಕೆಲಸ ಮಾಡಬೇಕಾದ ಮೂಲ ಸೌಲಭ್ಯ ವಂಚಿತ ಹಳ್ಳಿಗಳ ಬಗ್ಗೆ ತುಂಬಾ ಹೆದರಿಸಿದ್ದರು. ಆದರೆ ನಾನು ಯಾವುದಾದರೂ ಹೊಸ ಜಾಗೆಗೆ ಹೋಗಲೇ ಬೇಕಾಗಿತ್ತು. ಬೇರೆ ಶಾಖೆಗಳಿಗೆ ಹೋದರೆ ಮತ್ತೆ ಅದೇ ಚರ್ವಿತ ಚರ್ವಣ, ಅದೇ ಡೆಪಾಸಿಟ್ಟು, ಹೊಸ ಸಾಲ ಕೊಡು, ಹಳೆ ಸಾಲ ವಸೂಲಿ ಮಾಡು, ಲೆಖ್ಖ ತಾಳೆ ಮಾಡು, ಮಾಮೂಲಿ ಕೆಲಸ. ಇಲ್ಲಿ ಹೊಸ ಕೆಲಸ, ವಿವಿಧ ಹೊಸ ಊರುಗಳ ಭೇಟಿ. ಇಲ್ಲಿ ಪ್ರಯಾಣದ ತೊಂದರೆ ಬಿಟ್ಟರೆ ಬೇರೇನೂ ತೊಂದರೆ ಇರಲಿಲ್ಲ. ದಾಸರು ಸತ್ಯ ಹೇಳುತ್ತಾರೆ ಎಂದು ಬಲವಾಗಿ ನಂಬಿದವನು ನಾನು. ಅವರ ಮಾತುಗಳನ್ನು ಮೆಲುಕು ಹಾಕಿಕೊಂಡೆ.

"ಎಂತಾದರೂ ಚಿಂತೆ ಬಿಡದು
ನಿಶ್ಚಿಂತರಾದವರ ನಾನೊಬ್ಬರನೂ ಕಾಣೆ!!

ಬ್ರಹ್ಮನಿಗೆ ಶಿರವೊಂದು
ಛಿನ್ನವಾದ ಚಿಂತೆ
ರಕ್ಕಸರ ಗುರುವಿಗೆ
ಕಣ್ಣಿಲ್ಲದಾ ಚಿಂತೆ !!..,.

ನೋಡಿ, ಅಂತವರ ಪಾಡೇ ಹಾಗಿರುವಾಗ ನನ್ನ ಪಾಡೇನು? ಹೇಗಿದ್ದರೂ, ಎಲ್ಲಿದ್ದರೂ ಚಿಂತೆ ತಪ್ಪದು, ಅದು ಗುಲಬುರ್ಗಾ ಬಿಸಿಲಿನಲ್ಲಿಯೇ ಇರಲಿ ಎಂದು, "ಕೃಷ್ಣ, ನೀನು ಕೃಷ್ಣಾ ಗ್ರಾಮೀಣ ಬ್ಯಾಂಕಿನ ಆದಿಯಲ್ಲಿ ಇರುವೆ, ನನ್ನ ಅಲ್ಲಿಯ ಹಾದಿಯನ್ನು ಸುಗಮಗೊಳಿಸು" ಎಂದು ಬೇಡಿಕೊಂಡು ಆ ಬ್ಯಾಂಕಿನ ಮುಖ್ಯ ಕಚೇರಿಗೆ ಹಾಜರಾದೆ.

ಮೊದಲ ಹಂತದಲ್ಲಿಯೇ ಅಗ್ನಿ ಪರೀಕ್ಷೆ ಎದುರಾಯಿತು.

ನನ್ನನ್ನು ಎರಡು ದಿನ ಮುಖ್ಯ ಕಚೇರಿಯಲ್ಲಿ ಮುಂಚಿನ ತಪಾಸಣೆ ಪ್ರತಿಗಳನ್ನು ಓದಲು ಕೊಟ್ಟು, ಎರಡು ದಿನ ಕಳೆದು ನನ್ನ ಸ್ನೇಹಿತ ಅಮರನಾರಾಯಣ ಅವರೊಂದಿಗೆ ಸುರಪುರ ಬಳಿಯ ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ಕೆಲಸದ ಬಗ್ಗೆ ತಿಳಿಯಲು ಕಳುಹಿಸಿದರು. ನಾವಿಬ್ಬರೂ ಸುರಪುರ ಬಸ್ ನಿಲ್ದಾಣಕ್ಕೇನೋ ಬಂದೆವು. ಅಲ್ಲಿಂದ ಮುಂದೆ "ದಾರಿ ಕಾಣದಾಗಿದೆ, ರಾಘವೇಂದ್ರಾ" ಹಾಡು ನೆನಪಿಗೆ ಬಂತು. ಯಾಕೆಂದರೆ ನಾವು ಹೋಗಬೇಕಿದ್ದ ಗ್ರಾಮಕ್ಕೆ ಯಾವ ಬಸ್ಸು? ಯಾವಾಗ ಬರುತ್ತೆ ? ಎಂಬ ಮಾಹಿತಿ ಸ್ವತಃ ಅಲ್ಲಿಯ ಸರಕಾರಿ ಬಸ್ ಅಧಿಕಾರಿ ಸೇರಿದಂತೆ ಯಾರೂ ಕೊಡಲಿಲ್ಲ. ಹಾಗೇ ಕಾದುಕೊಂಡಿದ್ದೆವು. ಅಷ್ಟರಲ್ಲಿ ಒಂದು ಟೆಂಪೋ. ಅದರಲ್ಲಿ ಸಾಕಷ್ಟು ಸಾಮಾನು ತುಂಬಿದ್ದರು,

ಅದು ಆ ಹಳ್ಳಿಗೆ ಹೋಗುತ್ತದೆ ಎಂದು ತಿಳಿಯಿತು. ಆ ಟೆಂಪೋ ಆಸಾಮಿ, ನಾವು ಸುಧಾರಿಸಿದವರಂತೆ ಇದ್ದುದು ಕಂಡು ಟೆಂಪೋ ಹಿಂದೆ ಸ್ಥಳ ಮಾಡಿಕೊಟ್ಟು, 'ಸಾಹೇಬರ ಬರ್ರೀ' ಅಂದ. ನಾನು ಮೇಲೆ ಏರಲು ಹೊರಟಾಗ ಸಧ್ಯ ನನ್ನ ಗುರು, ಮುಂಚಿನ ಸ್ನೇಹಿತ ತಕರಾರು ತೆಗೆದ, "ರೀ, ಅದರಲ್ಲಿ ಒಣ ಮೆಣಸಿನಕಾಯಿ ಮೂಟೆ ತುಂಬಿದ್ದಾರೆ, ಅದೇಗೆ ಹೋಗುವುದು?" ಅಂದ. ನಾನು, "ನಾವು ಬಯಸಿದ್ದು ಸದಾ ಸಿಗುವದಿಲ್ಲ. ಮೆಣಸಿನಕಾಯಿ ಮೂಟೆಯೊಟ್ಟಿಗೆ ನಾವೂ ಪ್ರಯಾಣ ಮಾಡೋದು, ಇಲ್ಲಿ ಕಾಯುವುದಕ್ಕಿಂತ ಹೇಗೋ ಹೋಗುವುದು ಉತ್ತಮ" ಎಂದು ಹೇಳಿದೆ. ಒಲ್ಲದ ಮನಸ್ಸಿನಿಂದ ಟೆಂಪೋ ಹತ್ತುತ್ತಾ ಅವರು "ನನಗೆ ಈ ಕೆಲಸ ಯಾವಾಗ ಮುಗಿಯುತ್ತೋ ಎಂದು ಕಾಯುತ್ತಿದ್ದೇನೆ. ಈಗಿನ ನಿಮ್ಮ ನಿರ್ಧಾರ ನೋಡಿದರೆ ನೀವು ಸುಲಭವಾಗಿ ಈ ಟರ್ಮ್ ಮೂರು ವರ್ಷ ಮುಗಿಸ್ತೀರಿ" ಎಂದ.

ಅಂದು ಪ್ರಾರಂಬವಾದ ಮೊದಲ ಶಾಖೆಯಿಂದ (ಶಾಖೆಯ ಹೆಸರು ನೆನಪಿಲ್ಲ) 79 ಶಾಖೆಗಳ ಲೆಖ್ಖಪತ್ರ ಪರಿಶೋಧನೆ ಮಾಡಿದೆ. ಆದರೆ ನನಗೆ, ಅಂದರೆ ಇಜೇರಿಗೆ, ನಾನು ಕಾದುಕೊಂಡಿದ್ದ, ಇಜೇರಿ ಶಾಖೆಯ ಲೆಖ್ಖ ಪತ್ರ ಪರೀಕ್ಷಿಸುವ ಅವಕಾಶ ಸಿಗಲೇ ಇಲ್ಲ. ನನ್ನ ಮೂರು ವರ್ಷದ ಅವಧಿ ಮುಗಿಯಲು ಬಂದಿತ್ತು, ಈಗ ನಾನೇ ನನಗೆ ಇಜೇರಿ ಶಾಖೆಗೆ ಸಾಧ್ಯವಾದರೆ ಕಳುಹಿಸಿ ಎಂದು ಮುಖ್ಯ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಬೇಡಿಕೆ ಇಟ್ಟೆ. ಅವರು ನಗುತ್ತ, "ಓಹೋ, ನಿಮ್ಮೂರು, ಅಲ್ಲಿಗೆ ಖರ್ಚಿಲ್ಲದೇ ನೋಡಿ ಬರಬೇಕು, ಆಯಿತು ಹೋಗಿ ಬನ್ನಿ" ಎಂದು ಇಜೇರಿ ಶಾಖೆಯ ಇನ್ಸಸ್ಪೆಕ್ಷನ್ ದಯಪಾಲಿಸಲಿಸಿದರು.

ಬೆಂಗಳೂರಿನಲ್ಲಿ ನನ್ನ ಈ 'ಇಜೇರಿ' ಎಂಬ ಅಡ್ಡ ಹೆಸರು ಒಬ್ಬೊಬ್ಬರ ಬಾಯಲ್ಲಿ ಒಂದೊಂದು ರೀತಿಯಲ್ಲಿ ಉಚ್ಚಾರಣೆ ಪಡೆಯುತ್ತಿತ್ತು. ಕೆಲವರು ಐಜೇರಿ ಅಂದರೆ ಕೆಲವರು ಇಜಿರಿ, ಮತ್ತೆ ಕೆಲವರು ಹಜೇರಿ, ಹಲವರು ಇಜಾರಿ ಅಂದದ್ದಿದೆ. ಪತ್ರಗಳು ಐಯರ್ ಎಂದು ಬಂದದ್ದೂ ಉಂಟು. ಆದರೆ ಅಂದು ಇಜೇರಿ ಶಾಖೆಗೆ ಗುಲಬುರ್ಗಾದಿಂದ ಜೇವರಗಿಗೆ ಹೋಗಿ, ಪ್ರಥಮ ಸಲ ಜೇವರಗಿ ಬಸ್ ನಿಲ್ದಾಣದಿಂದ ಇಜೇರಿಗೆ ನಾನು ಹೊರಟಾಗ ನನ್ನ ಕಿವಿಗಳ ಪುಣ್ಯ ಹೇಳತೀರದಷ್ಟು. ಒಬ್ಬರು ಒಂದು ಇಜೇರಿ ಕೊಡಿ ಅಂದರೆ ಮತ್ತೊಬ್ಬರು ಎರಡು ಇಜೇರಿ, ಒಬ್ಬ ಮುದುಕ ತನಗೆ, ಮಗ, ಮೊಮ್ಮಗನಿಗೆ ಒಟ್ಟು ಮೂರು ಇಜೇರಿ. ಅಷ್ಟು ಮಾತ್ರವಲ್ಲ, ಅಲ್ಲಿಯ ಹೆಂಗಸರೆಲ್ಲರಿಗೂ ಅಂದು ಇಜೇರಿಯೇ ಬೇಕಿತ್ತು. ಅದು ಈ ಮುದುಕ ಇಜೇರಿ ಅಲ್ಲ ಆ ಮಾತು ಬೇರೆ. ಆದಿ, ಮಧ್ಯಾಂತ, ಅಂತ್ಯದಲ್ಲಿ ಅಂದರೆ ಬಸ್ಸಿನಲ್ಲಿಯ ಮುಂದೆ, ಹಿಂದೆ ಮತ್ತು ಮಧ್ಯದಲ್ಲಿರುವವರಿಗೆ ಎಲ್ಲ ಅಪರಿಚಿತರಿಗೆ ಇಜೇರಿ ಬೇಕು. ಇಜೇರಿಗೆ ಹೊರಟ ಆ ಬಸ್ಸಿನಲ್ಲಿ ಅಂದು ಬರೀ ಇಜೇರಿಯದೇ ಸೊಲ್ಲು. ಇಜೇರಿ ಖುಷ್ ಹುವಾ.

ನಾನು ಈವರೆಗೆ ಅಂದುಕೊಂಡದ್ದು, ನಮ್ಮ ಇಜೇರಿ ಅಡ್ಡ ಹೆಸರಿಗೆ ಕಾರಣ ಬಹುಶಃ ನಮ್ಮ ಹಿರಿಯರಾರೋ ಗುಲಬುರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಇಜೇರಿ ಊರಿನಿಂದ ಬಹಳ ಹಿಂದೆ ನಮ್ಮೂರು ಬಾಗಲಕೋಟೆಗೆ ವಲಸೆ ಬಂದಿರಬೇಕು ಅಂತಾ. ಅದಕ್ಕೊಂದು ಕಾರಣವೂ ಇತ್ತು, ನಾವು ಯಾದಗಿರಿ ಹತ್ತಿರವಿದ್ದ ಮೈಲಾರಲಿಂಗನ ಒಕ್ಕಲು, ಅದು ನಮ್ಮ ಮನೆ ದೇವರು. ಅಲ್ಲಿಗೆ ಪ್ರತಿವರ್ಷ ಕಾಯಿ, ಕರ್ಪೂರ, ಪೂಜೆಗೆ ಹೋಗುತ್ತೇವೆ. ಪ್ರಸ್ತುತ ಇಜೇರಿ ಊರು ಅಲ್ಲಿಗೆ ಹತ್ತಿರದಲ್ಲಿದೆ.

ಮೊನ್ನೆ ನನ್ನ ಈ ಇಜೇರಿ ಹೆಸರಿಗೆ ಹೊಸ ಆಯಾಮ ವೇದಿಕೆಯಲ್ಲಿ ಸ್ನೇಹಿತರೊಬ್ಬರಿಂದ ತಿಳಿದುಬಂತು. ಜಾನಪದ ಸಾಹಿತ್ಯದಲ್ಲಿ ಸ್ಥಳನಾಮ ಅಧ್ಯಯನ ಎಂಬ ಪ್ರಕಾರವಿದೆ. ಅದರ ಉದ್ದೇಶ ಮತ್ತು ಮಹತ್ವವೇನೆಂದರೆ.

ಒಂದೊಂದು ಊರಿನ ಹೆಸರಿನ ಹಿಂದೆ ಒಂದು ಕತೆ, ಐತಿಹ್ಯ, ನಂಬಿಕೆ, ಸಂಪ್ರದಾಯವಿರುತ್ತದೆ. ಸ್ಥಳ ನಾಮಗಳ ಅಧ್ಯಯನ ಪ್ರಾದೇಶಿಕ ಇತಿಹಾಸವನ್ನು ತಿಳಸುತ್ತವೆ. ಒಂದು ಊರಿನ ಇಂದು ಕಾಣುವ ಸಾಂಸ್ಕೃತಿಕ ಪರಂಪರೆ, ಮರೆಯಾಗಿಹೋದ ಸಾಂಪ್ರದಾಯಿಕ ಆಚರಣೆಗಳು ಸ್ಥಳನಾಮದ ಮಡಿಲಲ್ಲಿ ಜೋಪಾನವಾಗಿರುತ್ತವೆ.

ಸ್ಥಳ ನಾಮಗಳ ಗುರುತಿಸುವಿಕೆ, ಸ್ಥಳಕ್ಕೆ ಹೆಸರು ಇಟ್ಟವರು ಯಾರು? ಅದಕ್ಕೆ ಹಿನ್ನೆಲೆ ಏನೆಂದು ಅರಿಯುವುದು ಮತ್ತು ಅದರಲ್ಲಿರುವ ಸ್ವಾರಸ್ಯವನ್ನು ಅನುಭವಿಸುವುದರಲ್ಲಿದೆ. ಆದುದರಿಂದ ಸ್ಥಳ ನಾಮ ಕೇವಲ ವ್ಯವಹಾರಿಕ ಹೆಸರಾಗದೆ ಅದೊಂದು ಮಾಹಿತಿ ಕ್ಷೇತ್ರ ಮತ್ತು ಅಧ್ಯಯನ ಯೋಗ್ಯ ವಿಷಯವಾಗಿದೆ. ಒಂದು ಸ್ಥಳಕ್ಕೆ ಹೆಸರು ಬರಲು ಭೌಗೋಲಿಕ ಅಂದರೆ ಏರು ತಗ್ಗು, ಕಾಡುಮೇಡು, ಬಯಲು ಬೆಟ್ಟ ಹೀಗೆ, ಇಲ್ಲವೆ ಐತಿಹಾಸಿಕ ಅಂದರೆ ಕೋಟೆಕೊತ್ತಲ ಯುದ್ಧ ಜಗಳ, ಶಾಸನ, ಸ್ಮಾರಕ, ಅಥವಾ ಬೇರೆ ಸಾಮಾಜಿಕ ಕಾರಣಗಳಿರಬಹುದು. ಹೀಗೆ ಊರುಗಳೆಂದರೆ ಸ್ಥಳಗಳು ಮಾತ್ರವಲ್ಲ ಅವು ಒಂದೊಂದು ಕಥೆಗಳಾಗಿವೆ.

ಈ ಹಿನ್ನೆಲೆಯಲ್ಲಿ ಸ್ನೇಹಿತರಾದ ಜನಾರ್ಧನ ತುಂಗಾ ಅವರು ಸಂಶೋಧಕರೊಬ್ಬರ ಅಧ್ಯಯನದ ಹಿನ್ನೆಲೆಯಲ್ಲಿ ಇಜೇರಿ ಊರಿನ ಹಿನ್ನೆಲೆ ಎರಡು ನೀರಿನ ತೊರೆಗಳು, ಇರ್ + ಝರಿ ಅದು ಇರ್ಝರಿ ಅಂದರೆ ಇಜೇರಿ ಎಂದು ಆಗಿರಬಹುದು ಎಂಬ ಪ್ರಸ್ತುತಿಯನ್ನು ವೇದಿಕೆಗೆ ಹಾಕಿ, ಹೊಸ ಅಧ್ಯಯನಕ್ಕೆ ನಾಂದಿ ಹಾಕಿದ್ದಾರೆ. ಇಜೇರಿ ಊರಿನ ಪಕ್ಕದಲ್ಲಿ ನೀರಿನ ತೊರೆಗಳ ವಿಷಯ ನನಗೀಗ ತಿಳಿಯದು. ನಮ್ಮ ತಾತನ ಊರಿನ ಉತ್ತರದಿಂದ ಮಳೆಗಾಲದಲ್ಲಿ ಮಾತ್ರ ಮುಖ ತೋರಿಸುವ ಬರೀ ಕಲ್ಲು ಇರುವ ಕಲ್ಲ ಹಳ್ಳ, ದಕ್ಷಿಣದಲ್ಲಿ ಇನ್ನೊಂದು ಬರೀ ಮರಳು ಇದ್ದ ಸಣ್ಣ ಹಳ್ಳ ಇವೆ. (ಈಗ ಪರಿಸರ ನಾಶದೊಂದಿಗೆ ಸದಾ ನೀರು ಹರಿಯುತ್ತಿದ್ದ ಹಳ್ಳ ಜೊಂಡು ಪ್ರದೇಶ) ಆದರೆ ಅವೆರಡು ಸೇರಿಲ್ಲ. ಅಲ್ಲಿ ಮಗ್ಗಗಳು ಹೆಚ್ಚು. ಮಲಮಲ್ಲು ಎಂಬ ಹೆಸರಲ್ಲಿ ಧೋತಿ ನೇಯ್ಗೆ ಜಾಸ್ತಿ ಇತ್ತು. ಆದುದರಿಂದ ಧೋತಿಹಾಳ ಅಂದರೆ ದೋಟಿಹಾಳ ಆಯಿತು ಎಂದು ಹೇಳುತ್ತಿದ್ದರು. ಆ ಪ್ರದೇಶದಲ್ಲಿ ಜಾಲಿಮರ ಜಾಸ್ತಿ. ಹತ್ತಿರದಲ್ಲಿ ಎರಡು ಜಾಲಿಹಾಳಗಳಿವೆ. ಅವುಗಳನ್ನು ದೊಡ್ಡ ಜಾಲಿಹಾಳ, ಚಿಕ್ಕ ಜಾಲಿಹಾಳ ಎಂದು ಗುರುತಿಸುತ್ತಾರೆ. ನಮ್ಮ ಊರು ಬಾಗಲಕೋಟ, ಬ್ಯಾಂಗಲ್ ಕೋಟದಿಂದ ಬಂದಿದೆ ಎಂದು ಹೇಳುತ್ತಿದ್ದರು. ಬಿಜಾಪುರದ ಆದಿಲ್ ಶಾ ತನ್ನ ಮಗಳಿಗೆ ಬಳೆ ನೀಡುತ್ತಿದ್ದ ಬಳಗಾರರಿಗೆ (ಬ್ಯಾಂಗಡಿಗರು) ಉಂಬಳಿ ಕೊಟ್ಟ ಕೋಟೆ ಊರು. ತುಂಗಾ ಅವರು ಇಜೇರಿಯವರ ಹೆಸರಿನ ಮರ್ಮ ಅಂದದ್ದು ನನಗೂ ಹೊಸ ವಿಷಯ ಮತ್ತು ಅದೊಂದು ಇಂದು ತಿಳಿದ ಹೆಸರಿನ ರಹಸ್ಯ.. ಅದನ್ನು ಆಸಕ್ತಿವಹಿಸಿ ತಿಳಿಸಿದುದಕ್ಕೆ ಶ್ರೀಯುತ ತುಂಗಾ ಅವರಿಗೆ ಧನ್ಯವಾದಗಳು, ಮತ್ತು ಎಲ್ಲರಿಗೂ ವಂದನೆಗಳು.

***

'ಕಾಯ' ಬೇಕು

– ಭ ರಾ ವಿ

ಕಾದ ಹೆಂಚಿನ ಮೇಲೆ ಹದಬೆಂದ ತಿನಿಸಂತೆ
ಕಾದ ಮನಸಿನ ಬಿಸಿಗೆ ಬಂದ ಪದ ಸೊಗಸು
ಕಾಯುವುದು ಕವಿ ಮತಿಯು ಕಾವ ಕೂರುತ ಹದಕೆ
ಕಾಣುವದು ಕಾಣ್ಕೆಯದು ಚಿಪ್ಪನೊಡೆದು. ।

ಪರಮಾತ್ಮನಂಶವೀ ಆತ್ಮ ತತ್ವದ ಬೆಸುಗೆ
ಪ್ರಕಟವಾಗಲು ಅದಕೆ 'ಕಾಯ'ಬೇಕು
ಎಲ್ಲವನ್ನನುಭವಿಸಿ ಪಾಪ ಪುಣ್ಯವ ಗಳಿಸಿ
ಹಿಂತಿರುಗಲೀ 'ಕಾಯ' ಸಾಯಬೇಕು

ಕಾಯಕ್ಕೆ ಕಾವುಂಟು ಉಸಿರಲ್ಲಿ ಬಿಸುಪುಂಟು
ಕಾವು ಜೀವಂತಿಕೆಯ ಕುರುಹು ಕಾಣೊ
ಕಾಯುವುದರಿಂದಡುಗೆ ಕಾಯುವಿಕೆ ಅಡಿಗಡಿಗೆ
ಕಾಯಲೇಬೇಕು ಕೊನೆ ಬರುವವರೆಗೆ ।

ಕಾಯುವನು ಕಾಯುವವ ಪಕ್ವವಾಗುವವರೆಗೆ
ಬೇಯುವೆವು ತ್ರಿಗುಣಗಳ ಪಾಕದೊಳಗೆ
ಹಾಯುವೆವು ತೆರೆತೆರೆಗಳೊಟದೀ ಸಾಗರದೆ
ನೋಯುವೆವು ಮಾಯುವೆವು ಸಂಸಾರದೆ

ಕಾಯುವೆವು ಪ್ರೀತಿಯಲಿ, ಕಾಯ್ವುದುನ್ನತಿಗಾಗಿ
ಆಧ್ಯಾತ್ಮದಲು ಸಹಿಸಿ ಕಾಯಬೇಕು
ಇಷ್ಟಸಾಧ್ಯವೆ ಇರಲಿ ಕಷ್ಟಕೋಟಲೆಯಿರಲಿ
ಅವತಾರಕೂ ಕೂಡ ಕಾಯಬೇಕು! ।

***

ಸಂಕ್ರಾಂತಿ ಸಡಗರ

– ಮನೋಹಂಸ

:ಪಲ್ಲವಿ::
ಬಂದಿದೆ ಬಂದಿದೆ ಸಂಕ್ರಾಂತಿ ಹಬ್ಬವು ಬಂದಿದೆ
ತಂದಿದೆ ತಂದಿದೆ ಹೊಸ ಸಂಭ್ರಮವ ತಂದಿದೆ

ಸುಗ್ಗಿಯ ಕಾಲ, ಹಿಗ್ಗಿದ ಮನಸು
ಎಲ್ಲೆಡೆ ಸಮೃದ್ಧಿಯ ಕ್ರಾಂತಿ ತಂದಿದೆ

::ಚರಣ–1::
ವರುಷದ ಮೊದಲ ಹಬ್ಬವ ನಾವು ಆಚರಿಸೋಣ
ನೇಸರ ಪಥವ ಬದಲಿಸೊ ಪರಿಯ ನೋಡೋಣ

ಕಬ್ಬು ಕಿತ್ತಳೆ ಎಳಚಿ ಅರಿಶಿನ
ಕೊಂಡು ತರಲು ಬನ್ನಿ ಹೋಗೋಣ.   ::ಪಲ್ಲವಿ::

::ಚರಣ 2::
ಎಳ್ಳು, ಬೆಲ್ಲ ಕೊಬ್ಬರಿ ಕಡಲೆಯ ಮಿಶ್ರಣವು
ವಿವಿಧಾಕಾರದ ಸಕ್ಕರೆ ಅಚ್ಚುಗಳ ನೋಡುವೆವು

ಎಳ್ಳು ಬೆಲ್ಲವ ಬೀರಲು ಹೋಗುವ
ಬನ್ನಿ ಎರಡು ಒಳ್ಳೆ ಮಾತನಾಡುವ. ::ಪಲ್ಲವಿ::

***

ಸವಿಬೆಲ್ಲ-ಸಿಹಿಗಲ್ಲ

– ಎಂ.ಎಸ್. ನರಸಿಂಹಮೂರ್ತಿ

ಯಾವುದು ಹೆಚ್ಚು ಸಿಹಿ?

ಅದು ಅವರವರ ಭಾವಕ್ಕೆ, ಅವರವರ ಬಕುತಿಗೆ ಬಿಟ್ಟಿದ್ದು. ಗೃಹಸ್ಥನಾದ ಮೇಲೆ ಗೃಹಿಣಿಯ ಕೈಲಿ ಲಗಾಮಿರುತ್ತೆ ಅಂತಾರೆ. ನನ್ನ ವಿಷಯದಲ್ಲಂತೂ ನಿಜ. ಉಳಿದವರ ಬಗ್ಗೆ ನಾನು ಹೇಳಲಾರೆ. ಸತ್ಯ ವಾಕ್ಯವನ್ನು ಬಹುಮಂದಿ ನಿರಾಕರಿಸುತ್ತಾರೆ.

ಕೆಲವು ವರ್ಷಗಳ ಹಿಂದೆ ಹಾಸ್ಯೋತ್ಸವ ಕಾರ್ಯಕ್ರಮದಲ್ಲಿ ನನ್ನ ಗೆಳೆಯ ವಿಶ್ವ ಒಂದು ಪ್ರಶ್ನೆ ಪಬ್ಲಿಕ್ಕಾಗಿ ಕೇಳಿದ್ದ.

"ಸಂಸಾರಿಗೂ, ಸಂನ್ಯಾಸಿಗೂ ವ್ಯತ್ಯಾಸ ಏನು?"

ಎಂಥ ಚಾಲೆಂಜು! ಅವನಿಗೆ ಆದೇ ವರ್ಷ ಮದುವೆ ಆಗಿತ್ತು. ಕೂಡಲೇ ಉತ್ತರ ಕೊಟ್ಟೆ. "ಹುಲಿಯ ಚರ್ಮದ ಮೇಲೆ ಮಲಗೋನು ಸಂನ್ಯಾಸಿ, ಹುಲಿಯ ಜೊತೆ ಮಲಗೋನು ಸಂಸಾರಿ" ಎಂದೆ. ಚಪ್ಪಾಳೆಗಳ ಸುರಿಮಳೆ.

ಮಡದಿಯ ಬೇಡಿಕೆಗಳನ್ನು ಪೂರೈಸೋದು ಕಷ್ಟ ಎಂಬುದು ಎಲ್ಲರ ಅನುಭವ. ಹೊಸ ವರ್ಷದಲ್ಲಿ ವಿಶಾಲು ಹೊಸ ಸೀರೆಗೆ ಇಂಡೆಂಟ್ ಹಾಕಿದಳು.

"ರೀ, ಸಂಕ್ರಾಂತಿ ಹಬ್ಬಕ್ಕೆ ಒಂದು ಹೊಸ ರೇಷ್ಮೆ ಸೀರೆ!"

ವಿಶ್ವ ಗಹಗಹಿಸಿ ನಕ್ಕಾಗ ಅವನ ಮುಖದಲ್ಲಿ ನೆಗೆಟಿವಿಟಿ ನಲಿದಿತ್ತು.

"ಸಂಕ್ರಾಂತಿ ಅಂದ್ರೆ ದನಗಳ ಹಬ್ಬ ಕಣಮ್ಮ. ಹಸುಗಳಿಗೆ ಅಲಂಕಾರ ಮಾಡ್ತೀವಿ. ಕೊಬ್ಬರಿ ಗಿಟುಕು, ಬಾಳೆಹಣ್ಣು ಹಸು ಕೊರಳಿಗೆ ಕಟ್ತೀವಿ. ಕೊಂಬುಗಳಿಗೆ ಬಣ್ಣ ಹಚ್ತೀವಿ. ದನದ ಹೆಗಲ ಮೇಲೆ ದಮಾಸ್ ಬಟ್ಟೆಯ ಗೌಸು ಹಾಕ್ತೀವಿ. ಬಲೂನುಗಳು ಕಟ್ತೀವಿ. ಮೆರವಣಿಗೆಯಲ್ಲಿ ಕರ್ಕೊಂಡ್ಹೋಗಿ ಕಿಚ್ಚಾಯಿಸ್ತೀವಿ. ಈಗ ಹೇಳು, ದನಗಳ ಹಬ್ಬಕ್ಕೆ ನಿಂಗೆ ಸೀರೆ ಬೇಕಾ?" ಎಂದ.

ವಿಶಾಲು ಈ ನಕಾರಾತ್ಮಕ ಹೇಳಿಕೆ ಒಪ್ಪಲು ತಯಾರಿರಲಿಲ್ಲ. "ಹಬ್ಬದ ಬಗ್ಗೆ ಇಷ್ಟೆಲ್ಲಾ ಹೇಳ್ತೀರಲ್ಲ. ಎಳ್ಳು–ಬೆಲ್ಲದ ಬಗ್ಗೆ ನಿಮಗೆಷ್ಟು ಗೊತ್ತು?" ಎಂದು ಸವಾಲು ಎಸೆದಳು.

"ಬೆಲ್ಲ ಮನುಷ್ಯನ ಬದುಕಲ್ಲಿ ಮೊದಲಿಂದ ಕಡೇವರೆಗೂ ಇರುತ್ತೆ. ನೀನು ಹೆಂಡ್ತಿಯಾಗಿ ನನ್ನನ್ನ ಕಂಟ್ರೋಲ್ಗೆ ತಗೊಳ್ಳೋಕೆ ಬೆಲ್ಲವೇ ಕಾರಣ" ಎಂದ ವಿಶ್ವ.

"ಅದು ಹ್ಯಾಗೇರಿ?"

"ಮದ್ವೆ ಟೈಮಲ್ಲಿ ಪುರೋಹಿತರು ಗಂಡು-ಹೆಣ್ಣು ನಡುವೆ ಅಡ್ಡ ತೆರೆ ಅಂತ ಅವರ ಪಂಚೇನ ಹಿಡೀತಾರೆ".

"ಅದು ಪುರೋಹಿತರ ಪಂಚೆ ಅಲ್ಲ, ಅಂತರಪಟ !"

"ಇರ್ಲಿ, ಯಾವ್ದೋ ಒಂದು ಗಾಳೀಪಟ. ಸೂಚನೆ ಕೊಡದೆ ಘಂಟಾನಾದ ಮಾಡ್ತಾರೆ. ವಧು ವರರು ಕೂಡಲೇ ಪರಸ್ಪರ ತಲೆ ಮೇಲೆ ಜೀರಿಗೆ ಬೆಲ್ಲ ಇಡಬೇಕು. ಮೊದಲು ಇಟ್ಟವರು ಡಾಮಿನೇಟ್ ಮಾಡ್ತಾರೆ ಅಂತ ನಂಬಿಕೆ. ನಿನ್ನ ಅಣ್ಣಂದಿರು, ತಮ್ಮಂದಿರು ಎಲ್ಲಾ ಸೇರಿ ನಿನ್ನ ಮೇಲಕ್ಕೆತ್ತಿ ನನ್ನ ತಲೆ ಮೇಲೆ ಜೀರಿಗೆ ಬೆಲ್ಲ ಇಡಿಸಿದರು. ಆವತ್ತಿಂದ ನೀನು ಹಾಕಿದ ತಾಳಕ್ಕೆ ನಾನು ಕುಣೀತಾ ಇದ್ದೀನಿ" ಎಂದು ದುಃಖಿಸಿದ.

"ನಾಟಕ ಸಾಕು, ಬೆಲ್ಲದ ಬಗ್ಗೆ ಹೇಳಿ"

"ಮದ್ವೆ ಆದ್ಮೇಲೆ ನೀನು ನಮ್ಮ ಮನೆಗೆ ಬಂದೆ. ಅಚ್ಚೇರು, ಬೆಲ್ಲ ಹೊಸ್ತಿಲಲ್ಲಿ ಇಟ್ಟಿದ್ರು. ಒದೀ ಅಂದಾಗ ನೀನು ಒದ್ದೆ. ನಮ್ಮ ತಾಯಿ ಮೊಣಕಾಲಿಗೆ ಅಚ್ಚೇರು ಬಂದು ಬಡೀತು".

"ನಾನು ಕಾಲೇಜಲ್ಲಿ ಫುಟ್ಬಾಲ್ ಪ್ಲೇಯರ್ರು" ಎಂದಳು ವಿಶಾಲು.

"ಯುಗಾದಿ ಬಂದ್ರೆ ಬೆಲ್ಲಕ್ಕೆ ಬೇವು ಬೆರೆಸಿ 'ಬೇವು-ಬೆಲ್ಲ' ಹಂಚ್ತೀವಿ. ಮನೆಗೆ ಯಾರಾದ್ರೂ ಬಂದ್ರೆ ನೀರು-ಬೆಲ್ಲ ಕೊಡ್ತೀವಿ. ನವಗ್ರಹ ಪೂಜೆ ಮಾಡ್ಬೇಕಾದ್ರೂ ಲಕ್ಷ್ಮಿ-ನಾರಾಯಣ ಸ್ವರೂಪ ಅಂತ ಬೆಲ್ಲದ ಅಚ್ಚನ್ನೇ ಪೂಜೆಗೆ ಇಡ್ತೀವಿ" ಎಂದು ಹೇಳ್ತಾ ಹೋದಾಗ ಅವಳಿಗೆ ಸಿಟ್ಟಾಯ್ತು.

"ಸಾಕು ಪುರಾಣ. ನಾನು ಈ ಸಲ ಬೆಲ್ಲ ತರೊಲ್ಲ. ಯಾಕೇಂದ್ರೆ ಅದಕ್ಕೆ ಏನೇನೋ ಕೆಮಿಕಲ್ಸ್ ಬೆರೆಸಿರ್ತಾರೆ, ಬಣ್ಣ ಬಿಳಿ ಬರಲಿ ಅಂತ" ಎಂದಳು.

"ನೋಡಿದ್ಯಾ, ಬಿಳೀ ಬಣ್ಣಾನ ನಂಬಬಾರದು ಅಂತ ಅದಕ್ಕೇ ಹೇಳೋದು. ನನ್ನ ಥರ ಇರೋ ಕರೀ ಬೆಲ್ಲಾನೇ ಬೆಸ್ಟು" ಎಂದ. ಅವಳಿಗೆ ಮತ್ತಷ್ಟು ಸಿಟ್ಟು ಬಂತು.

"ಈ ಸಲ ನಾನು ಅಂಗಡಿಯಿಂದಾನೇ ರೆಡಿಮೇಡ್ ಎಳ್ಳು-ಬೆಲ್ಲ ತರ್ತೀನಿ" ಎಂದಳು.

"ಏನಿದು ವಿಶಾಲು, ಎಳ್ಳು-ಬೆಲ್ಲಾನ ಮನೇಲಿ ರೆಡಿ ಮಾಡ್ಬೇಕು. ಆ ಸಂಭ್ರಮ ಖುಷಿ ತರುತ್ತೆ. ಕರೀ ಎಳ್ಳು ತಂದು ಅದರ ಚರ್ಮ ಸುಲಿದು ಬಿಳೀ ಎಳ್ಳು ಮಾಡಿ ಹುರಿಯೋ ಆ ಪ್ರೋಸೆಸ್ ಎಷ್ಟು ಚೆನ್ನಾಗಿರುತ್ತೆ ಗೊತ್ತಾ? ಮನೆ ತುಂಬಾ ಘಮಘಮ ಇರುತ್ತೆ" ಎಂದ ವಿಶ್ವ.

"ನೀವು ಸಹಾಯ ಮಾಡೋಕೆ ಬಂದ್ರೆ ನಾನು ಮನೇಲಿ ರೆಡಿ ಮಾಡ್ತೀನಿ" ಎಂದಳು.

ವಿಶ್ವ ಯೋಚಿಸುತ್ತಾ ಕೂತ. ಹಿಂದೆ ಇದ್ದ ಸಂಕ್ರಾಂತಿಯ ಸಡಗರ ಇವತ್ತು ಇಲ್ಲ. ಎಳ್ಳು ಬೆಲ್ಲದ ರೆಡಿಮೇಡ್ ಪ್ಯಾಕೆಟ್‌ಗಳೇ ಸಿಗುತ್ತೆ. ಕೊರಿಯರ್‌ನವನಿಗೆ ಹೇಳಿದ್ರೆ ಅವನೇ ಸೀರೆ ಉಟ್ಕೊಂಡು ಲೇಡಿ ಗೆಟಪ್‌ನಲ್ಲಿ ಹೋಗಿ ನಮ್ಮ ಪರವಾಗಿ ಎಲ್ಲಾ ಕಡೆ ಎಳ್ಳು ಬೀರಿ ಬಂದ್ಬಿಡ್ತಾನೆ. ಈ ರೀತಿಯಾದರೆ ಹಬ್ಬದ ಅರ್ಥ ಎಲ್ಲಿ ಉಳೀತು? ಎಂದು ವಿಶ್ವ ಯೋಚಿಸಿದ.

"ಕಡೇದಾಗಿ ಕೇಳ್ತೀನಿ, ಯಾವಾಗ ಕೊಡಿಸ್ತೀರ ಸೀರೆ ?" ವಿಶಾಲು ಕೇಳಿದಳು.

"ಎಲೆಕ್ಷನ್ ಹೊತ್ತಿಗೆ ಯಾರಾದರೂ ಸೀರೆ ಕೊಡಬಹುದು, ವೈಟ್ ಮಾಡೋಣ" ಎಂದ ವಿಶ್ವ.

"ನಾನು ನಿಮ್ಮ ಹೆಂಡತಿ, ಹೊರಗಿನವರು ನನಗೆ ಸೀರೆ ಕೊಡಿಸಬಾರದು" ಎಂದಳು.

"ನೋಡೋಣ, ಚುನಾವಣೆ ಮುಗಿದ ಮೇಲೆ ನಾನೇ ಕೊಡಿಸ್ತೀನಿ" ಎಂದ.

ಅಷ್ಟರಲ್ಲಿ ಕೊರಿಯರ್ ಬಾಯ್ ಬಂದು ಪ್ಯಾಕೆಟ್ ಕೊಟ್ಟು ಹೋದ. ವಿಶ್ವ ಓಪನ್ ಮಾಡಿದರೆ ಅದರಲ್ಲಿ ಏನಿತ್ತು? ಒಂದು ರೇಷ್ಮೆ ಸೀರೆ, ಒಂದು ನೆಟ್ ಬನಿಯನ್ !

"ನಾನೇ ತರಿಸಿದ್ದು. ಹಬ್ಬದ ದಿನ ಹೊಸ ಬಟ್ಟೆ ಮೈಮೇಲೆ ಇರಬೇಕು, ನನಗೆ ಸೀರೆ, ನಿಮಗೆ ಬನಿಯನ್!" ಎಂದು ಗಲ್ಲ ಕುಣಿಸಿ ಕಣ್ಣಲ್ಲೇ ನಕ್ಕಳು.

"ದುಡ್ಡೆಲ್ಲಿತ್ತು ?"

"ನಮ್ಮ ಜಾಯಿಂಟ್ ಅಕೌಂಟ್ ಕಾರ್ಡಿಂದ ಉಜ್ಜಿದೆ!"

ವಿಶ್ವ ಕುಸಿದು ಕುಳಿತ

***

ಮಾವನೂರಿಗೆ ಮೊದಲ ದಿನ

– ಭಗವಾನ್ ಕೆ.ಎನ್.

ಮಾವನೂರಿಗೆ ಹೋದ ಮೊದಲ ದಿನದಾ ಪರಿಯು
ಇಂದಿಗೂ ಮಾಸದದು ನೆನಪಲ್ಲಿ ಹಸಿರು.
ಸೋದರಿಕೆ ಸಂಬಂಧ ಪೂರ್ವೈಸದಿದ್ದರೂ,
ಆ ಊರು ಅಮ್ಮನಿಗೆ ಹೆಮ್ಮೆಯಾ ಹೆಸರು.

ನನ್ನ ಸೋದರ ಮಾವ, ನಮ್ಮ ಅಮ್ಮನ ತಮ್ಮ,
ಒಂದು ಹಗಲಿನ ಪಯಣ ಆ ಊರಿಗೆ.
ರವಿ ಮೂಡೋ ಹೊತ್ತಲ್ಲಿ ನಮ್ಮೂರ ಬಿಟ್ಟಲ್ಲಿ
ಮುಚ್ಚಂಜೆ ಮುಟ್ಟೇವು ಆ ಊರಿಗೆ.

ನವರಾತ್ರಿ ರಜವಾಗ– ನಮ್ಮ ಶಾಲೆಗೆ ಬಿಡುವು
ಕೂಡಿ ಬಂದಿತು ಸಮಯ ನಮ್ಮಣ್ಣಗೂ.
ನನ್ನ ಸೋದರಿ, ನಾನು, ನಮ್ಮಣ್ಣ, ನಮ್ಮ ತಾಯಿ
ನಾಲ್ವರೂ ಒಟ್ಟಾಗಿ ಹೊರಟೆವಾಗ.

ಮಧುಗಿರಿಯ ಹಿಂದಿಕ್ಕಿ ಮಡಕಶಿರ ತಲುಪಿದೆವು
ಸಿಗಲಿಲ್ಲ ನಮಗಾಗ ಬೇಕಿದ್ದ ಬಸ್ಸು.
ಎರಡು ತಾಸಿನ ಬಳಿಕ ಮಗದೊಂದು ಇತ್ತು
ಅದ ಹಿಡಿದು ಹೊರಟಾಗ ವೇಳೆ ಮೀರಿತ್ತು.

ಏಳು ಮೈಲಿಯ ಕಲ್ಲ ಬಳಿ ನಾವು ಇಳಿದಾಗ
ಸದ್ದಡಗಿ ಮಲಗಿತ್ತು ಸನಿಹದಾ ಊರು.
ಆಗೊಮ್ಮೆ ಈಗೊಮ್ಮೆ ನಾಯಿಗಳ ಬೊಗಳಾಟ
ಕತ್ತಲಿನ ಬಯಲಲ್ಲಿ ಗಾಳಿಯೂ ಜೋರು.

ಸುತ್ತ ಹುಡುಕಿದ ಅಣ್ಣ ಬ್ಯಾಟರಿಯ ಬೆಳಕಲ್ಲಿ,
ಮಾವ ಕಳಿಸಿದ ಆಳು ಎತ್ತಿನಾ ಬಂಡಿ.
ಕಾಣದಿರೆ ಎಲ್ಲಿಯೂ ಬೇಸತ್ತ ಮನಸುಗಳು
ನಮ್ಮ ಕಾಲ್ಗಳೆ ಮುಂದೆ ನಮ್ಮೊತ್ತೆಯಾಳು.

ನೀ ಬರೆದ ಕಾಗದವು ತಲುಪಿತೋ ಇಲ್ಲವೋ,
ತಮ್ಮನೇ ಊರಲ್ಲಿ ಇಲ್ಲವೇನೋ!
ಅಮ್ಮನಾ ಅನಿಸಿಕೆಗೆ ನಸುನಕ್ಕನಣ್ಣ
ತವರಿನಭಿಮಾನಕ್ಕೆ ಎಣೆಯಿಲ್ಲವೇನೋ!

ಚೆಲ್ಲತೊಡಗಿತು ಮುಂದೆ ಚೆಂದಿರನ ಹಾಲ್ಬೆಳಕು
ಕತ್ತಲೆಯು ಓಡಿತ್ತು ಹಾದಿ ತೆರೆದಿಟ್ಟು.
ಬೇಲಿಪೊದೆಗಳ ಸರಿಸಿ ಹೊಂಗೆ ತೋಪನು ಬಳಸಿ
ಪಯಣವದು ಸಾಗಿತ್ತು ನಿಡುಗಣ್ಣು ನೆಟ್ಟು.

ದೊಡ್ಡ ಕೆರೆಯಂಗಳದಿ ನೀರು ಹಾದಿಗೆ ಬಂದು
ನಾ ತೊಟ್ಟ ಚಲ್ಲಣವು ನೆನೆತೊಪ್ಪೆಯಾಯ್ತು.
ನೀರು ನೆಲದಾ ಹಾದಿ ಕಡೆಗೊಮ್ಮೆ ಮುಗಿದಾಗ
ಸರಿದಾರಿ ತಪ್ಪಿದ್ದು ಖಾತರಿಯದಾಯ್ತು.

ಕಟ್ಟೆ ಹಾದಿಲಿ ನಡೆದು, ಗದ್ದೆ ತೋಟವ ದಾಟಿ
ಕಲ್ಲು ಬಾವಿಯು ಬಂತು, ಮುಂದೆಯೇ ಊರು.
ಸದ್ದಿಲ್ಲದಿರುಳಲ್ಲಿ ಹಾಲು ಚೆಲ್ಲಿದ ಬೆಳಕು
ಅಬ್ಬ! ನಡೆದುದು ಸಾಕು ಇನ್ನು ನಿಸ್ಸೂರು.

ಊರ ಮಧ್ಯದಲಿರುವ ಎತ್ತರದ ಮನೆಯದು
ತಲೆಬಾಗಿಲೆಡಬಲಗೆ ಜಗತಿಯಾ ಆಯ.
ಅರೆತೆರೆದ ಬಾಗಿಲಿನ ಕಿಂಡಿಯಲಿ ಕೇಳುತಿದೆ
ಅತ್ತೆ ಮಾವರ ಮಾತು, ನಮ್ಮದೇ ವಿಷಯ.

ನಮ್ಮ ದನಿ ಕೇಳುತಲಿ ದೀಪ ಬೆಳಗಿತು ಒಳಗೆ
ಓ ಬನ್ನಿ ಬನ್ನಿರೆಂದು ಸ್ವಾಗತವು ನಮಗೆ.
ಎಲ್ಲರೂ ಕುಶಲವೇ? ಅತ್ತೆ ಕೇಳಲು ಪ್ರಶ್ನೆ
ಮೈಚಾಚಿ ಮಲಗಿದರೆ ಸಾಕಿತ್ತು ನಮಗೆ

ಬಹಳ ಹೊತ್ತಿನ ಹಿಂದೆ ಹಿಂದಿರುಗಿ ಬಂದವೂ
ಆಳು, ಎತ್ತಿನ ಬಂಡಿ ನಿಮಗಾಗಿ ಕಾದು.
ಮಾವ ಚಡಪಡಿಸಲು ಅಣ್ಣ ಹೇಳಿದನಾಗ
ನಾವು ಹೊರಟಿದ್ದೆ ಬಹು ತಡವಾಯಿತೆಂದು.

ದೊಡ್ಡ ಲಾಂದ್ರದ ಬೆಳಕು ಮನೆಯ ತುಂಬಿದುದಾಗ
ತಟ್ಟೆಗಳ ಸಡಗರದಿ ನಿದಿರೆ ದೂರಾಯ್ತು.
ನಮಗಾಗಿ ಕಾದಿದ್ದ ರಸಕವಳ ಉಂಡಾಗ
ಆಯಾಸ ಮರೆಯಾಗಿ ಚೈತನ್ಯ ಬಂತು.

ಊರ ಕಡೆ ಬರಲಿಲ್ಲವೇಕೆ ಪ್ರೀತಿಯ ಮಾವ?
ಬಿಡುವಿಲ್ಲ, ಬೇಸಾಯ, ಕೆರೆ ಬಾವಿ ಗದ್ದೆ.
ಕಣ್ಣಲ್ಲೆ ಅರಸಿದೆ ಮಾವನಾ ಮಗಳನ್ನು
ಕೋಣೆಯನು ಸೇರಿದ್ದ ಆ ಹುಡುಗಿ ನಿದ್ದೆ!

***

ಲೇಖನ (ಭಾಗ–1)

ಟ್ರಯಲ್ ಅಂಡ್ ಎರರ್ಸ್ - ಯತ್ನ ಮತ್ತು ವಿಫಲತೆ

– ಮಾಧುರಿ ಕೃಷ್ಣ

ಬೆಳಗಿನ ಹೊತ್ತು, ಇಡ್ಲಿಗೆ ಚಟ್ನಿಯನ್ನು ಮಿಕ್ಸಿಯಲ್ಲಿ ರುಬ್ಬುತ್ತಾ ಇದ್ದೆ. ಆ ಸದ್ದಿನಲ್ಲೂ ರಾಯಲ್ ಎನ್‌ಫೀಲ್ಡ್ ಗುಡು ಗುಡಾಯಿಸಿಕೊಂಡು ಮನೆ ಮುಂದೆ ಬಂದದ್ದೂ, ಮನೆ ಮುಂದೆ ನಿಂತದ್ದೂ ಗೊತ್ತಾಯಿತು.

'ಹಾಂ! ಬಂದ ನಮ್ಮ ವರ ಮಹಾಶಯ' ಎಂದುಕೊಳ್ಳುತ್ತ ಮುಂಬಾಗಿಲಿಗೆ ಬರುವುದರ ಒಳಗೆ ಕರೆಗಂಟೆ ಅವಸರ ಅವಸರವಾಗಿ ಕೂಗಿಕೊಳ್ಳತೊಡಗಿತು.

"ಇರಪ್ಪ ಮಾರಾಯ, ಸ್ವಲ್ಪ ಪೇಶನ್ಸ್ ಇರಲಿ" ಎನ್ನುತ್ತಲೇ ಬಾಗಿಲು ಪೂರಾ ತೆರೆದು ಕೈ ಮುಂದೆ ಮಾಡಿ ಸ್ವಾಗತ ಮಾಡಿದೆ.

ಡ್ಯಾನ್ಸಿಂಗ್ ಸ್ಟೆಪ್ಪಿನಲ್ಲಿ ಕಾಲಿನ ಬೂಟು ಕಳಚುತ್ತ, "ನೀವೆಲ್ಲ ಟಾಯ್ಲೆಟ್ ಗೀಯ್ಲೆಟ್ ಎಂದು ಹೋಗಿಬಿಟ್ಟಿದ್ದರೇ ಎಂದು ಎರಡು ಸಾರಿ ಕಾಲಿಂಗ್ ಬೆಲ್ ಒತ್ತಿಬಿಟ್ಟೆ ಅಷ್ಟೆ!" ಎಂದು ಬಾಗಿಲಲ್ಲಿ ನಿಂತು, "ತಿಂಡಿ ಗಿಂಡಿ ಏನೂ ಬೇಡ, ಆಫೀಸಿಗೆ ಹೋಗೋ ಮುಂಚೆ ಬಂದು ಹೋಗು ಎಂದ್ರಲ್ಲಾ ಆಂಟೀ, ಏನು ವಿಶೇಷ? ಯಾಕೆ ಅರ್ಜೆಂಟ್" ಎಂಬಿತ್ಯಾದಿ ಪ್ರಶ್ನೆಗಳನ್ನು ಬಡ ಬಡ ಉದುರಿಸಿದ.

"ಅರ್ಜೆಂಟೇ ಮಾರಾಯಾ, ಮತ್ತೆ ತಡವಾಗಿ ಕೈ ತಪ್ಪಿ ಹೋಗಬಾರದಲ್ಲವೇ?" ಎಂದೆ ನಾನು ಅವನನ್ನೇ ನೋಡುತ್ತ ಕೀಟಲೆಯಿಂದ.

"ವಾಟ್! ವಾಟ್! ಸಾಯಂಕಾಲ ಆಫೀಸ್ ಮುಗಿಯೋವರೆಗೂ ಕಾಯಲಿಕ್ಕಾಗದ ಆ ತಲೆ ಹೋಗೋ ಸಂಗತಿ ಎಂಥಾದ್ದ್ ಮಾರ್ರೆ?". ಭಾರೀ ಅಸಹನೆ ಹುಡುಗನಿಗೆ.

"ಬಾಗಿಲಲ್ಲೇ ನಿಂತು ಮಾತು ಯಾಕೆ, ಕೂತ್ಕೋ, ಕಾಫಿ ತರುತ್ತೇನೆ"

"ಅದೆಲ್ಲ ಏನೂ ಬೇಡ..., ವಿಷಯ ಏನಂಥ ಹೇಳಿಬಿಡಿ, ಇನ್ನು ಹತ್ತು ನಿಮಿಷದಲ್ಲಿ ನಾನು ಕಂಪೆನಿಯಲ್ಲಿ ಇರಬೇಕು. ಹೆಡ್ಡಾಫೀಸೊಂದಿಗೆ ಟ್ರಯಾಂಗಲ್ ಮೀಟಿಂಗಿದೆ!", ನಿಂತಿದ್ದ ಕಾಲು ಬದಲಾಯಿಸಿದ.

"ಒಂದೊಳ್ಳೇ ಪ್ರಪೋಸಲ್ ಬಂದಿದೆ ಮಾರಾಯಾ, ಲೇಟ್ ಮಾಡಿದರೆ ಬೇರೆಯವರ ಪಾಲಾಗಬಹುದು!" ತ್ಚು ತ್ಚು ಶಬ್ದ ಮಾಡಿದೆ.

"ಪ್ರಪೋಸಲ್ಲಾ, ಒಳ್ಳೆಯದಾ, ಹೋಗಲಿ ಬಿಡಿ ಆಂಟೀ, ಬೇರೆ ನೂರು ಬರಬಹುದು" ಎಂದು ಕ್ಯಾರ್ ಮಾಡದವನಂತೆ ಹೇಳಿದರೂ ಸೋಫಾ ಮೇಲೆ ಗಟ್ಟಿಯಾಗಿ ಕುಳಿತುಕೊಂಡ ನನ್ನಳಿಯ.

ಬದಲಾದ ಅವನ ಭಾವಕ್ಕೆ ಮನಸ್ಸಲ್ಲೇ ನಕ್ಕು, ಅವನ ಮುಂದಿದ್ದ ಟೀಪಾಯಿಯೆಡೆ ಬಾಗಿ ಕೆಳಗಿನ ಅರೆಯಲ್ಲಿದ್ದ ಉದ್ದದ ಲಕೋಟೆ ತೆಗೆದು ಒಂದು ಫೋಟೋ ಹೊರತೆಗೆದೆ. "ಇದನ್ನೊಮ್ಮೆ ನೋಡಿಬಿಟ್ಟು ಹೋಗು ಮಾರಾಯಾ, ನಿನಗೆ ಲೈಕ್ ಆಯಿತೆಂದರೆ ಮತ್ತೆ ಮಾತಾಡಬಹುದು" ಎಂದು ಫೋಟೋ ಅವನ ಮುಂದೆ ಹಿಡಿದೆ.

ತನಗೇನೂ ಆಸಕ್ತಿಯೇ ಇಲ್ಲದವನಂತೆ ಗೋಣು ಮಾತ್ರ ಉದ್ದ ಮಾಡಿದ. ಒಳ್ಳೇ ಫಿಟ್ಟಿಂಗ್ ಚೂಡಿದಾರದಲ್ಲಿದ್ದ ಸುಂದರ ತರುಣಿ! ಎರಡನೇ ನಿಮಿಷಕ್ಕೂ ಅವನ ಕಣ್ಣು ಅಲ್ಲೇ ಕೀಲಿಸಿತ್ತು.

"ಚೆನ್ನಾಗಿದ್ದಾಳೆ ಅಲ್ಲವೇ?" ಎಂದೆ, ಅವನ ಕಣ್ಣಿಂದ ಫೋಟೋ ಹಿಂದೆ ತರುತ್ತಾ. ಗಬಕ್ಕನೆ ಕೈ ಹಾಕಿ ಫೋಟೋ ಕಿತ್ತುಕೊಂಡ.

"ಯಾವಾಗ ನಿಮ್ಮ ವಧು ಪರೀಕ್ಷೆ, ಸಂಜೆ ತಾನೇ? 5 ಗಂಟೆಗೆ ಇಲ್ಲಿರುತ್ತೇನೆ" ಎನ್ನುತ್ತಲೇ ಬಾಗಿಲು ದಾಟಿ ಹೋಗಿ ರಾಯಲ್ ಎನ್‌ಫೀಲ್ಡ್‌ಗೆ ಕಿಕ್ ಹೊಡೆದು ಬಿಟ್ಟ.

ಅವನು ಹೋಗುವುದನ್ನೇ ಜಂಭದಿಂದ ನೋಡುತ್ತ ನಿಂತೆ. ಮತ್ತೆ ನಾಲ್ಕು ವರ್ಷ ಅವನಿಗೆ ಊಟ ತಿಂಡಿ ಕೊಟ್ಟು ಮನೆಯಲ್ಲಿರಿಸಿಕೊಂಡು ಪಾಲನೆ ಪೋಷಣೆ ಮಾಡಿದವಳು ನಾನಲ್ಲವೇ!!

ಸಂಜೆ 5 ಗಂಟೆಗೆ 5 ನಿಮಿಷ... ರಾಯಲ್ ಎನ್‌ಫೀಲ್ಡ್ ಗುಡುಗುಡಾಯಿಸಿಕೊಂಡೇ ಬಂತು.

"ಆಂಟೀ ರೆಡಿಯಾಗಿದ್ದೀರಾ? ಅಂಕಲ್, ಲೋಕೇಶನ್ ಕೊಟ್ಟು ಬಿಡಿ. ಡ್ರೈವಿಂಗ್ ನಾನೇ ಮಾಡುತ್ತೇನೆ" ಎಂದು ಕಾರ್ ಕೀ ಕಿತ್ತುಕೊಂಡೇಬಿಟ್ಟ.

"ಹೋಗುವುದು ನಾವು ಮೂವರಾಗುತ್ತೇವೆ ಅಗೋ ಆ ಗೊಂಬೆಯನ್ನು ತಂದುಬಿಡು" ಎಂದರು ಯಜಮಾನರು.

"ಗೊಂಬೆ ಯಾಕೆ? ಕನ್ಯೆಯ ಫೋಟೋವೇ ಇದೆಯಲ್ಲ! ಎಂದ ಮದುವೆ ಗಂಡು, ಡ್ರೈವರ್ ಸೀಟಿನ ಎದುರಿಗೆ ಫೋಟೋ ಸಿಕ್ಕಿಸುತ್ತ.

ಯಜಮಾನರು ಅವನ ಪಕ್ಕ ಕುಳಿತು, ಹಿಂದೆ ತಿರುಗಿ ನನ್ನ ಮುಖ ನೋಡಿದರು. ಗೆಲುವಿನ ಇಮೋಜಿ ನಮ್ಮಿಬ್ಬರ ಮುಖದಲ್ಲೂ ಲಾಸ್ಯವಾಡಿತು.

ಮತ್ತೆರಡು ಗಂಟೆಯ ಬಳಿಕ...

ನಾವು ಮೂವರೂ ಮನೆಗೆ ವಾಪಾಸು ಬಂದಿದ್ದೆವು. ಕಾರನ್ನು ಗೇಟಿನ ಹೊರಗೇ ನಿಲ್ಲಿಸಿ ಬೇರಾವ ಮಾತನ್ನೂ ಆಡದೆ ನನ್ನ ಅಳಿಯ ತನ್ನ ವಾಹನವನ್ನು ತುಳಿದು ಸ್ಟಾರ್ಟ್ ಮಾಡಿ, ಕೈಯಿಂದಲೇ 'ಬಾಯ್' ಸಂಜ್ಞೆ ತೋರಿಸಿ, ಗುಡರ್ ಗುಡರ್ ಎಂದು ನಮ್ಮ ಕ್ರಾಸಿನಿಂದಲೇ ಹೊರಟು ಹೋಗಿಯೇ ಬಿಟ್ಟ.

ಗೇಟಲ್ಲೇ ಉಳಿದ ಯಜಮಾನರು ಮತ್ತು ನಾನು ಅವನು ಕಣ್ಮರೆಯಾಗಿದ್ದನ್ನು ನೋಡಿಯೂ ಮತ್ತೆರಡು ಘಳಿಗೆ ಅಲ್ಲೇ ನಿಂತಿದ್ದೆವು.

ಕಾರಣ ಇಷ್ಟೆ...

ನನ್ನ ಗೆಳತಿಯೇ ಶಿಫಾರಸು ಮಾಡಿ ಪ್ರಪೋಸ್ ಮಾಡಿದ ಕನ್ಯಾಮಣಿ ತನ್ನನ್ನು ನೋಡಲು ಬಂದ ವರನಿಗಿಂತಲೂ ಕಾಲಮಹಿಮೆಯಿಂದ ಹೆಚ್ಚಿನ ಅಧ್ಯಯನವನ್ನು ಮಾಡಿದ್ದಲ್ಲದೆ, ಸಿದ್ಧಿ ಬುದ್ಧಿ ಕೌಶಲ್ಯಗಳಿಂದ ಅಧಿಕ ಮೊತ್ತವನ್ನು ಗಳಿಸುತಿದ್ದುದು ಮಾತ್ರವಲ್ಲ, ವರ ಮಹಾಶಯನಿಂದ ನಿಸ್ಸಂದೇಹವಾಗಿ ಮೂರು ಇಂಚುಗಳಷ್ಟು ಉದ್ದವಿದ್ದಳು.

***

ಹೇಳಿ ಹೋಗಬಾರದೇ?

– ಶಾಂತಿವಾಸು

ದೀಪ ಸುತ್ತುವ ದೇವತೆಯಂತೆ ಸುಳಿದಾಡಿ
ಬೆಳಕಲ್ಲಿಯೇ ಮಾಯವಾಗುವ ಒಂದು
ಸುಳಿವ, ನೀಡಿ ಹೋಗಬಾರದೇ?

ಮಿಡಿಯುವ ನಿನ್ನ ಹೃದಯದ ಭಾವಕೆ,
ತುಡಿಯಲೆನ್ನ ಮನ ಕಾದಿದೆ. ಎಲ್ಲಿರುವೆ ಎನ್ನುವ
ಗುರುತು ಹೇಳಿ ಹೋಗಬಾರದೇ?

ಬಾಳ ಬೆಳಕಾಗಿಸಿ, ಚಿಗುರ ನಗು ಬಾಡುವುದನು
ಸಹಿಸದ ಆತ್ಮಸಖನೇ, ಬಯಸಿದಾಗ ಕಾಣುವಂತೆ,
ನಿನ್ನಿರುವ ಹೇಳಿ ಹೋಗಬಾರದೇ?

ನೀನಿರದ ಮೇಲೆ ನಿನ್ನೊಂದಿಗಿನ ಚದುರು
ನೆನಪುಗಳ ಒಡನಾಟದಿ ನಾ ಹೇಗಿರಲಿ ಎನ್ನುವುದ
ಮೊದಲೇ ಹೇಳಿಯಾದರೂ ಹೋಗಬಾರದೇ?

ನಿನ್ನದೇ ದೃಷ್ಟಿಯಲಿ ಆತ್ಮಭಾವ ಸೃಷ್ಟಿಸುವ,
ನಿನ್ನ ಸಖಿಯ ಬಿಟ್ಟು ಹೋದ ಕಾರಣವಾದರೂ
ಹೇಳಿ ಹೋಗಬಾರದೇ?

ಒಂಟಿತನದ ಜೊತೆಯಾದೆನಗೆ ಮಾಡಿದ ಆಣೆ ಪ್ರಮಾಣಗಳ
ಬದಿಗೆ ಬಿಸುಟು, ಒಂಟಿ ಪಯಣವನ್ನಾಯ್ದು ಹೊರಟ
ನಿನ್ನ ಮನದ ಮಾತು ಹೇಳಿ ಹೋಗಬಾರದೇ?

ನಿನಗಾಗಿಯೇ ಮಿಡಿದು ಮಿಡಿದು ಸಿಡಿಯುತಿಹ
ಜೀವದ ನೋವನು, ನಿನ್ನ ಹೊತ್ತೊಯ್ದ ಯಮನಿಗೆ
ವಿವರಿಸಿದೊಂದು ಪುರಾವೆ ಮಾತು ಹೇಳಿ ಹೋಗಬಾರದೇ?

ಮೆಚ್ಚಿದ್ದನು ಸಾರಾಸಗಟು ನಿರಾಕರಿಸುವವನೆ,
ಯಮನನ್ನು ಮೆಚ್ಚಿಯೇ ಅಪ್ಪಿದೆಯಾ ಎಂಬ
ಒಂದು ಮಾತು ಹೇಳಿ ಹೋಗಬಾರದೇ?

ನಾನಿಲ್ಲದೆಡೆ ನಿನಗೆಲ್ಲಿದೆ? ಇದ್ದರೂ ಅದೆಲ್ಲಿದೆ
ಎನುವ ಸತ್ಯ ನನಗೂ ತಿಳಿಸದೆ ಎಲ್ಲಿಗೆ ಹೋದೆ?
ಹಾದಿಯನ್ನು ಹೇಳಿ ಹೋಗಬಾರದೇ?

ಒಂಟಿ ನೀನಲ್ಲವೆನುತ ಹೆಗಲುನೀಡಿ ಒಂಟಿಯಾಗಿ ನಿಂತ,
ನನ್ನನುಮತಿಯ ಒಂದೇ ಒಂದು ಸಲವಾದರೂ
ಕೇಳಿ ಹೋಗಬಾರದೇ?

ಕೊನೆಗೆ ನಿನ್ನನೇ ಆರಾಧಿಸಿ, ಪ್ರೀತಿಸಿ, ಗೌರವಿಸಿ,
ಮಾತು ಮೀರದ ನಿನ್ನ ಮಕ್ಕಳಿಗಾಗಿಯಾದರೂ
ನನಗೊಂದೇ ಒಂದು ಮಾತು ಹೇಳಿ ಹೋಗಬಾರದೇ?

***

ಲಬ್ ಡಬ್ ಎನ್ನುವ ಹೃದಯದಲ್ಲಿಣುಕಿದಾಗ…

– ಟಿ. ಎಸ್. ಶ್ರವಣ ಕುಮಾರಿ

ಕಡೆಯ ಸಂಚಿಕೆಯಿಂದ: ಇಷ್ಟೇನೇ ಜೀವನವೆಂದರೆ?! ಕೂಗಾಡುತ್ತಿದ್ದರೂ ಹೋಗುವುದೇ, ಮೌನವಾಗಿದ್ದರೂ ಹೋಗುವುದೇ– ಎಲ್ಲರದೂ ಇದೇ ಕತೆಯಲ್ಲವೇ! ಯಕ್ಷ ಧರ್ಮರಾಜನಿಗೆ ಕೇಳಿದ ಪ್ರಶ್ನೆ "ಮನುಷ್ಯ ಜೀವನದ ಅತ್ಯಂತ ಚೋದ್ಯವಾದ ಸಂಗತಿ ಯಾವುದು?" ಧರ್ಮರಾಜನ ಉತ್ತರ "ಸಾವು ನಿಶ್ಚಿತವೆಂದು ತಿಳಿದಿದ್ದರೂ ತಾನು ಚಿರಂಜೀವಿಯೆಂದೇ ತಿಳಿದುಕೊಂಡಿರುವುದು" ಅಷ್ಟೇ ಅಲ್ಲವೇ!!

*

ಡಾಕ್ಟರ ಮುಖವನ್ನೇ ನೋಡುತ್ತಿದ್ದೆ.. ಆಂಜಿಯೋಗ್ರಾಮ್‌ಗಾಗಿ ಅದೇ ಸ್ಥಿತಿಯಲ್ಲಿ ಮಲಗಿದ್ದೆ, ಕಾಲನ್ನು ಅಲುಗಿಸದೆ. ತೊಡೆಯ ಭಾಗದಿಂದ ಒಂದು ನಳಿಕೆ ತೂರಿ ಹೋಗಿ ಅದರೊಳಗಿನಿಂದ ಒಳಸೇರಿದ್ದ ಒಂದು ಉಪಕರಣ ಅಪಧಮನಿಯಲ್ಲಿ ಚಲಿಸುತ್ತಾ ಪಕ್ಕದಲ್ಲಿದ್ದ ಪರದೆಯ ಮೇಲೆ ತಾನು ಚಿತ್ರಿಸಿದ್ದನ್ನು ಬಿಂಬಿಸುತ್ತಿತ್ತು. ಪರದೆ ನನಗೆ ಕಾಣದಂತೆ ಕೊಂಚ ಪಕ್ಕಕ್ಕೆ ತಿರುಗಿಸಿದ್ದರು. ಸಂಪೂರ್ಣವಾಗಿ ಎಚ್ಚರವಾಗಿದ್ದೆ. ಡಾಕ್ಟರು, ಅವರ ಸಹಾಯಕಿ ವೈದ್ಯೆ, ಇನ್ನೊಬ್ಬ ಸಹಾಯಕ ಆಗೀಗ ಮಾತನಾಡುವುದೆಲ್ಲಾ ಕೇಳಿಸುತ್ತಿತ್ತು. "ಈಗ ಆರಂಭಿಸುತ್ತೇವೆ" ಎಂದು ಹೇಳಿಯೇ ಶುರುಹಚ್ಚಿಕೊಂಡಿದ್ದರು. "ಎಷ್ಟು ಹೊತ್ತಾಗಬಹುದು?" ಎಂದು ಕೇಳಿದಾಗ, "ಒಂದಿಪ್ಪತ್ತು ನಿಮಿಷ" ಎಂದಿದ್ದರು ನಿರ್ಭಾವುಕವಾಗಿ. "ನೋವಾಗತ್ತಾ?" ಎಂದದ್ದಕ್ಕೆ, "ಅಷ್ಟೇನೂ ತಿಳಿಯೋದಿಲ್ಲ. ಏನಾದರೂ ತೊಂದರೆ ಅನಿಸಿದರೆ ತಿಳಿಸಿ. ಅಲುಗಾಡಬೇಡಿ" ಎಂದವರು ತಮ್ಮ ಕೆಲಸವನ್ನು ಆರಂಭಿಸಿದ್ದರು. ಒಬ್ಬ ಸಹಾಯಕ ನನ್ನ ಕಾಲುಗಳನ್ನು ಅಲುಗಾಡದಂತೆ ಹಿಡಿದುಕೊಂಡೇ ಇದ್ದ. ಮಾಡಲಿನ್ನೇನೂ ಕೆಲಸವಿರಲಿಲ್ಲವಲ್ಲ. ಡಾಕ್ಟರ ಮುಖದ, ಅವರ ಸಹಾಯಕಿಯ ಮುಖದ ಪ್ರತಿಕ್ರಿಯೆಗಳನ್ನು ಗಮನಿಸುತ್ತಾ ಹೋದೆ. ಸೆಕೆಗಿರಬಹುದೇನೋ ಡಾಕ್ಟರ ಹಣೆಯಲ್ಲಿ ಬೆವರ ಹನಿಗಳು ಮೂಡುತ್ತಿದ್ದ ಹಾಗೆಲ್ಲಾ ಸಹಾಯಕಿ ಅದನ್ನು ಒರೆಸುತ್ತಿದ್ದಳು. ಅವರಿಬ್ಬರ ಮುಖವೂ ಬಲು ಗಂಭೀರವಾಗಿದ್ದು ಅದು ನನ್ನ ಗಂಭೀರ ಸ್ಥಿತಿಯ ಬಗ್ಗೆ ಇದ್ದ ಭಾವವೋ, ಇಲ್ಲವೇ ಅವರು ಇರುವುದೇ ಹಾಗೆಯೋ ಅರಿವಾಗಲಿಲ್ಲ. ನಾನೇಕೆ ಕೆಟ್ಟದ್ದನ್ನು ಯೋಚಿಸಲಿ– 'ಅವರಿರುವುದೇ ಹಾಗೆ' ಎಂದುಕೊಂಡುಬಿಟ್ಟೆ. ಅಂತೂ ಕಡೆಗೊಮ್ಮೆ "ಮುಗೀತು" ಎಂದಾಗ "ಡಾಕ್ಟ್ರೇ ಏನೂ ತೊಂದ್ರೆ ಇಲ್ಲ ಅಲ್ವಾ?" ಎಂದೆ. "ತೊಂದರೆ ಇದೆಯಮ್ಮಾ" ಎನ್ನುತ್ತಾ ದಾಖಲಿಸುತ್ತಿದ್ದ ಪರದೆಯನ್ನು ನನ್ನ ಕಡೆಗೆ ತಿರುಗಿಸಿ ಒಂದು ಕಡೆಗೆ ಬೊಟ್ಟುಮಾಡಿ ತೋರಿಸುತ್ತಾ "ಇಲ್ಲಿ ಒಂದು ಕಡೆ 87% ಬ್ಲಾಕ್ ಇದೆ. ಆದರೆ ಸ್ಟಂಟ್ ಹಾಕಿ ಆ ತೊಂದರೆಯನ್ನು ನಿವಾರಿಸಿಕೊಳ್ಳಬಹುದು. ಈಗಲೇ ಹಾಕಿದರೆ ಇನ್ನೊಂದು ಬಾರಿ ಇಷ್ಟೂ ಕಾರ್ಯಕ್ರಮಗಳು ಮಿಗುತ್ತವೆ. ಬೇರೆ ಎಲ್ಲಾದರೂ ಹಾಕಿಸಿಕೊಳ್ಳುವುದಾದರೆ ಇದರ ರೆಕಾರ್ಡನ್ನು ನಿಮಗೆ ಕೊಡುತ್ತೇವೆ. ಯಾವುದಕ್ಕೂ ನಿಮ್ಮ ಮನೆಯವರೊಂದಿಗೂ ಮಾತಾಡುತ್ತೇನೆ" ಎಂದವರೇ ನನ್ನನ್ನು ಅದೇ ಸ್ಥಿತಿಯಲ್ಲಿ ಬಿಟ್ಟು ಹೊರನಡೆದರು.

ಸದಾ ನನ್ನ ಸುತ್ತಮುತ್ತಲೇ ಓಡಾಡುತ್ತಿರುವ ಯಮಕಿಂಕರರು ಯಾವಾಗ ನನ್ನನ್ನು ಕ್ಯಾಚ್ ಹಾಕಿಕೊಳ್ಳಬಹುದೆನ್ನುವ ಸಂಚಿನಲ್ಲಿ ನನ್ನ ಸುತ್ತಮುತ್ತಲೇ ಕಾಣಿಸಿಕೊಳ್ಳುತ್ತಾ ನಗುತ್ತಿದ್ದರು. ನನಗ್ಯಾವ ಭಯ?! 'ಅಮ್ಮನಿಗೆ ಮೂರು ಬ್ಲಾಕ್ ಇದ್ದು ಬೈಪಾಸ್ ಸರ್ಜರಿಯನ್ನೇ ಮಾಡಬೇಕಾಯಿತು. ಇದು ಬರಿ ಸ್ಟಂಟ್ ಹಾಕೋದ್ತಾನೇ ಪರ್ವಾಗಿಲ್ಲ ಬಿಡು' ಎಂದೆ ಅವರೊಂದಿಗೆ. ಮನೆಯವರ ಒಪ್ಪಿಗೆಯನ್ನು ಪಡೆದುಕೊಂಡು ಬಂದವರು ನನ್ನ ಅನುಮತಿಯನ್ನೂ ಕೇಳಿ ತಮ್ಮ ಕೆಲಸವನ್ನು ಶುರುಹಚ್ಚಿಕೊಂಡರು. ಬೇರೇನೂ ಮಾಡಲು ತೋಚದೆ ಮನಸ್ಸಿನಲ್ಲೇ ಹನುಮಾನ್ ಚಾಲೀಸಾ ಹೇಳಿಕೊಳ್ಳತೊಡಗಿದೆ. ಮಧ್ಯದಲ್ಲಿ ಒಂದು ಸಲ ಇಂಥದೇ ಎಂದು ವಿವರಿಸಲು ಸಾಧ್ಯವಾಗದಂತಹ

ಸಂಕಟವಾಗತೊಡಗಿತು. ಯಮದೂತ ಎದೆಯೊಳಗೇ ಕೈ ಹಾಕಿದ್ದನೇನೋ. ತಡೆಯಲಾಗುತ್ತಿಲ್ಲ! ಸಹಾಯಕಿಗೆ ಹೇಳಿದೆ. ಅವಳು ಒಂದು ಇಂಜೆಕ್ಷನ್ ಚುಚ್ಚಿ ಅವನನ್ನು ಓಡಿಸಿದಳು. ಒಂದೆರಡು ನಿಮಿಷದಲ್ಲೇ ಕಡಿಮೆಯಾಗತೊಡಗಿತು. ಮಧ್ಯೆ ಒಂದೆರಡು ಬಾರಿ ಡಾಕ್ಟರು ಸಹಾಯಕನ ಮೇಲೆ ಸ್ವಲ್ಪ ರೇಗಿಕೊಂಡರು. 'ಅವನೇನು ಎಡವಟ್ಟು ಮಾಡಿದನೋ' ಅಂದುಕೊಂಡೆ. ಸ್ವಲ್ಪ ಹೊತ್ತಿನಲ್ಲೇ "ಹ್ಞಾಂ ಮುಗೀತು. ಎಲ್ಲಾ ಚೆನ್ನಾಗಿದೆ. ಸ್ವಲ್ಪ ಹೊತ್ತಿನ ಮೇಲೆ ವಾರ್ಡಿಗೆ ಕಳುಹಿಸಬಹುದು" ಎನ್ನುತ್ತಾ ತಮ್ಮ ಕೈಗವಸನ್ನು ತೆಗೆಯತೊಡಗಿದರು. ಅವರು ಕಟ್ಟಿಕೊಂಡಿದ್ದ ಏಪ್ರನ್ ಅಲ್ಲಲ್ಲಿ ರಕ್ತದಿಂದ ನೆಂದುಹೋಗಿತ್ತು. ನಿರ್ವಿಕಾರವಾಗಿ ಅದನ್ನು ತೆಗೆದುಹಾಕಿ ಹೊರನಡೆದರು. ಹಿಂದೆಯೇ ಸಹಾಯಕಿ ಮಿಕ್ಕೆಲ್ಲಾ ಮಾಹಿತಿಯನ್ನು ನೀಡಿ, ನನ್ನನ್ನು ವಾಪಸ್ಸು ನನ್ನ ಕಕ್ಷೆಗೆ ಕಳುಹಿಸುವ ಏರ್ಪಾಡು ಮಾಡಿದಳು.

ಸ್ಟ್ರೆಚರ್ ಹೊರಬರುವುದನ್ನೇ ಕಾಯುತ್ತಿದ್ದ ಗಂಡ, ಮಗಳು "ಹೇಗಿದ್ದೀ" ಎಂದರು. "ಆರಾಮಾಗಿದೀನಿ" ಎಂದವಳೇ "ತಂಗಿಗೆ ತಿಳಿಸಿದ್ದಾಯಿತೆ" ಎಂದೆ. ಅವಳು ತನ್ನ ಗಂಡನೊಂದಿಗೆ ಅಲ್ಲೇ ಆ ಪಕ್ಕದಲ್ಲಿ ನಿಂತಿದ್ದವಳು ಹತ್ತಿರ ಬಂದಳು. ಅವಳು ತುಂಬಾ ಭಾವಜೀವಿ. ಸದಾ ನನಗೋಸ್ಕರ ಏನೇನೋ ಹರಕೆಗಳನ್ನು ಹೊರುತ್ತಿರುತ್ತಾಳೆ. ಕಣ್ಣೀರನ್ನು ತಡೆದು ನಗಲು ಯತ್ನಿಸಿದಳು. ಆ ದಂಪತಿಗಳ ಪ್ರೀತಿಯ ಋಣ ತೀರಿಸಲು ಸಾಧ್ಯವಾಗದಂತಹುದು. ಇಬ್ಬರನ್ನೂ ನೋಡಿ ನಾನೇ "ಚೆನ್ನಾಗಿದೀನಿ" ಎಂದು ನಕ್ಕೆ. ನನ್ನ ಸ್ಟ್ರೆಚರ್ ತೀವ್ರ ನಿಗಾ ಘಟಕದ ಹಾಸಿಗೆಯನ್ನು ತಲುಪಿತು. ನೋಡಿಕೊಳ್ಳುತ್ತಿದ್ದ ಡಾಕ್ಟರಿಗೆ ಮತ್ತು ದಾದಿಗೆ ಎಲ್ಲಾ ವಿವರಗಳ ವರ್ಗಾವಣೆಯಾಯಿತು. ಯಮಕಿಂಕರರಿಗೆ ಸ್ವಲ್ಪ ನಿರಾಸೆಯಾಯಿತೇನೋ. ದೂರದಲ್ಲೇ ನಿಂತು ಎಲ್ಲವನ್ನೂ ನೋಡತೊಡಗಿದರು...

*

ಖಾಲಿಯಾಗಿದ್ದ ಪಕ್ಕದ ಬೆಡ್ಡಿಗೆ ಯಾರೋ ಹೊಸ ರೋಗಿಯ ಆಗಮನವಾಯಿತು. ಆಕೆ ಸರ್ಕಾರಿ ಇಲಾಖೆಯಲ್ಲಿ ಒಂದು ಉನ್ನತ ಹುದ್ದೆಯಲ್ಲಿದ್ದವರಂತೆ. ತಮಿಳು, ಇಂಗ್ಲಿಷನ್ನು ಬಿಟ್ಟು ಕನ್ನಡ ಬಾರದು. ದಾದಿಯರು ಹಿಂದಿಯಲ್ಲಿ ಬೇಕಾದರೂ ಮಾತಾಡಿಯಾರು. ಮಲೆಯಾಳಂ ಆಗಬಹುದು. ಇಲ್ಲಿರುವುದರಿಂದ ಕನ್ನಡ ಬರುತ್ತೆ. ತಮಿಳು ಸಾಧ್ಯವೇ. ಹಾಗಾಗಿ ಅವರೊಂದಿಗೆ ಎಲ್ಲಾ ಸಂಭಾಷಣೆಯೂ ಇಂಗ್ಲೀಷಿನಲ್ಲೇ. ಆಕೆಯದೊಂದು ಕಂಡೀಷನ್ನು. ಆಕೆಗೆ ಏನೇ ಔಷಧಿ ನೀಡಬೇಕಾದರೂ, ಇಂಜೆಕ್ಷನ್ ನೀಡಬೇಕಾದರೂ, ಯಾವುದೇ ಪರೀಕ್ಷೆಗೆ ಒಳಪಡಿಸುವುದಾದರೂ ಮೊದಲು ಅದನ್ನು ಹೊರಗೆ ಕುಳಿತಿರುವ ಅವರ ಮನೆಯವರಿಗೆ ಹೇಳಬೇಕು. ಅವರು ಅದನ್ನು ಗೂಗಲ್‌ನಲ್ಲಿ ಹುಡುಕಿ ಅದರ ಉದ್ದ ಅಡ್ಡ ಪರಿಣಾಮಗಳನ್ನೆಲ್ಲಾ ಓದಿಕೊಂಡು ಅನುಮತಿಸಿದರೆ ಮಾತ್ರಾ ಅದನ್ನು ನೀಡಬಹುದು; ಇಲ್ಲವಾದರೆ ಇಲ್ಲ. ನಾನಂತೂ ನನ್ನ ಸ್ಥಿತಿಯನ್ನೂ ಮರೆತು ಈ ಸನ್ನಿವೇಶ ಎಲ್ಲಿಗೆ ತಲಪುತ್ತದೆನ್ನುವ ಕುತೂಹಲದಿಂದ ವೀಕ್ಷಿಸುತ್ತಿದ್ದೆ. ಒಂದು ಹಗಲೆಲ್ಲಾ ಇದೇ ಕತೆ ಮುಂದುವರೆಯಿತು. ಈ ವಿಪರೀತವನ್ನು ದಾದಿಯರ, ವೈದ್ಯರ ಕೈಯಲ್ಲಿ ನಿಭಾಯಿಸಲು ಸಾಧ್ಯವಾಗದೆ ಈ ಪರೀಕ್ಷೆಗಳಿಗೆ ಮತ್ತು ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ನನ್ನ ಒಪ್ಪಿಗೆಯಿಲ್ಲ ಎನ್ನುವ ಪತ್ರಕ್ಕೆ ಸಹಿ ಹಾಕಿಸಿಕೊಂಡು ಸಂಜೆಯ ವೇಳೆಗೆ ಅವರನ್ನು ಮನೆಗೆ ಕಳುಹಿಸಿದರು. ಒಂದು ಬಿಟ್ಟಿ ಮನರಂಜನೆ ತಪ್ಪೇಹೋಯಿತು!

*

ಆ ದಿನವೇನು, ಮರುದಿನವೂ ಬಲಗಾಲನ್ನು ಅಲುಗಾಡಿಸುವಂತಿರಲಿಲ್ಲ. ಎಲ್ಲಾ ಚಿಕಿತ್ಸೆಗಳು ಮಾಮೂಲಿನಂತೆ ನಡೆಯುತ್ತಿದ್ದವು. ಆಮ್ಲಜನಕ, ರಕ್ತದೊತ್ತಡ ಮತ್ತಿತರ ಮಾಹಿತಿಗಳನ್ನು ದಾಖಲಿಸುವ ಯಂತ್ರಗಳು ತಮ್ಮಪಾಡಿಗೆ ತಮ್ಮ ಕಾರ್ಯನಿರ್ವಹಿಸುತ್ತಿದ್ದವು. ರಾತ್ರಿ ಎಷ್ಟು ಹೊತ್ತಾದರೂ ನಿದ್ರೆ ಬರಲಿಲ್ಲ. ನಿದ್ರೆ ಬರಲೆಂದು ಏನೋ ಮಾತ್ರೆಯನ್ನು ಕೊಟ್ಟರೂ ಅದೂ ಕೆಲಸ ಮಾಡಲಿಲ್ಲ. ಹೊರಳಾಡುವಂತೆಯೂ ಇಲ್ಲ. ಹವಾ ನಿಯಂತ್ರಣವೂ ಕೆಲಸ

ಮಾಡುತ್ತಿಲ್ಲವೇನೋ ಎನ್ನಿಸುವಂತಹ ಸೆಕೆ. ಹೇಳಿಕೊಳ್ಳಲು ಸಾಧ್ಯವಾಗದಂತಹ ಸಂಕಟ. ಒಂದಷ್ಟು ಹೊತ್ತು... ಹತ್ತು ಹದಿನೈದು ನಿಮಿಷವಾಗಿರಬಹುದು... ದಾದಿ ಎಲ್ಲಿಗೆ ಹೋದಳೋ... ಅವಳು ಬರುವ ಹೊತ್ತಿಗೆ ನನ್ನ ಹಿಂದಿನ ಒಂದು ಮಾಪಕ ಯಾರಾದರೂ ಸತ್ತಾಗ ಬಾರಿಸುವ ಚರ್ಚಿನ ಗಂಟೆಯಂತಹ ಶಬ್ದವನ್ನು ಹೊಮ್ಮಿಸುತ್ತಿತ್ತು. ಬಂದವಳಿಗೆ ಅದನ್ನು ನೋಡಿ ಗಾಬರಿ! "ಎಷ್ಟು ಹೊತ್ತಿನಿಂದ ಈ ರೀತಿಯ ಶಬ್ದ ಬರ್ತಿದೆ?" ಎಂದಳು ಹೆದರಿಕೆಯಿಂದ. "ಒಂದೈದು ನಿಮಿಷವಾಗಿರಬಹುದೇನೋ... ಯಾಕೆ?" ಎಂದೆ. "ಏನಿಲ್ಲಾ... ಡಾಕ್ಟನ್ನ ಕರೀತೀನಿ. ಬಿ.ಪಿ. ಇಳೀತಿದೆ" ಎಂದವಳೇ ಓಟಕಿತ್ತಳು.

ಮಧ್ಯರಾತ್ರಿ. ನೈಟ್ ಡ್ಯೂಟಿಯ ಡಾಕ್ಟು ಒಂದು ಸುತ್ತು ಎಲ್ಲರನ್ನೂ ನೋಡಿ ಮುಗಿಸಿ ಹೋಗಿ ಮಲಗಿದ್ದರೇನೋ... ಕಣ್ಣುಜ್ಜಿಕೊಳ್ಳುತ್ತಾ ಅವಳೊಂದಿಗೇ ಓಡಿ ಬಂದರು... ಜೊತೆಗೆ ಇನ್ನೊಬ್ಬ ಡಾಕ್ಟರ್, ಮೇಟ್ರನ್ ಎಲ್ಲರೂ ನನ್ನ ಹಾಸಿಗೆಯ ಸುತ್ತಾ ನಿಂತುಬಿಟ್ಟರು. ಎಲ್ಲರ ಮುಖದಲ್ಲೂ ಗಾಬರಿ! ಅದ್ಯಾವ ಮಾಯದಲ್ಲೋ ಯಮಕಿಂಕರರು ಮತ್ತೆ ಬಂದು ನನ್ನ ಪಕ್ಕದಲ್ಲಿ ನಿಂತು ನಗುತ್ತಿದ್ದರು. 'ತಕ್ಷಣ ಈ ಇಂಜೆಕ್ಷನ್ ಚುಚ್ಚು', 'ಹೀಗೆ ಮಾಡು', 'ಹಾಗೆ ಮಾಡು' ಎನ್ನುವ ಗಡಿಬಿಡಿಯ ನಿರ್ದೇಶನಗಳನ್ನು ಕೊಡುತ್ತಾ ಮಾಪಕದ ಕಡೆಗೆ ಮತ್ತೆ ಮತ್ತೆ ನೋಡುತ್ತಾ ಕತ್ತನ್ನು ತಿರುಗಿಸಿ ಕೊರಳ ಪಕ್ಕದಿಂದ ಒಳಗಿನ ಯಾವುದೋ ನರವನ್ನೆಳೆದು ಒಂದು ಹಿತ್ತಾಳೆಯ ಬಿಲ್ಲೆಯನ್ನು ಅದಕ್ಕೆ ಸೇರಿಸಿ... ಅದೇನೇನೋ ನನಗರ್ಥವಾಗದ ಭಾಷೆಯಲ್ಲಿ ಮಾತನಾಡುತ್ತಿದ್ದರು. ಯಮಕಿಂಕರರೋ ಖುಷಿಯಿಂದ ಕುಣಿದಾಡುತ್ತಿದ್ದರು.

ಅವರ ಭಯವನ್ನು ನೋಡುತ್ತಾ ನನಗೆ ನನ್ನ ಸಾವು ಸಮೀಪಿಸಿತೇನೋ ಅನ್ನಿಸಿ ಡಾಕ್ಟರನ್ನು ಕೇಳಿದೆ. "ನಾನು ಸಾಯ್ತಿದೀನಾ? ನಿಜ ಹೇಳಿ". "ಇಲ್ಲ, ಇಲ್ಲ ಹಾಗೇನಿಲ್ಲ" ಎನ್ನುತ್ತಾ ಆತಂಕದಿಂದ ಮತ್ತೆ ಮತ್ತೆ ಆ ಮಾಪಕದ ಕಡೆಗೆ ಕಣ್ಣು ಹಾಯಿಸುತ್ತಲೇ ಇದ್ದರು. "ಮೇಡಂಗೆ ಫೋನ್ ಮಾಡೋಣ್ವಾ" ಎಂದರು ಒಬ್ಬರು. ಅವರಿಗೆ ಸಮಾಧಾನವಿರಲಿಲ್ಲ. "ನೋಡೋಣ" ಎಂದರು ಇನ್ನೊಬ್ಬರು. ನಾನು ಮತ್ತೆ ಕೇಳಿದೆ, "ನಾನು ಸಾಯ್ತಿದೀನಾ_? ನಿಜ ಹೇಳಿ. ನಂಗೇನೂ ಭಯವಿಲ್ಲ. ಹೋಗೋಕೆ ಸಿದ್ಧವಾಗೇ ಇದೀನಿ. ನನ್ನ ಎಲ್ಲಾ ಜವಾಬ್ದಾರಿಗಳನ್ನೂ ಮುಗ್ಸಿದೀನಿ. ಹೋಗೋದೇ ಆದ್ರೆ ಒಂದೇ ಬೇಡಿಕೆ ಅಷ್ಟೇ. ಬೆಳಗಿಂದ ನನ್ನ ಗಂಡ, ಮಗಳನ್ನ ಒಳಗೆ ಬಿಟ್ಟಿಲ್ಲ. ಅವ್ರನ್ನೊಂದ್ಸಲ ಕರೆಸ್ಬಿಡಿ. ಮನೆಗೆ ಹೋಗಿರಲ್ಲ. ಕೆಳ್ಗೇ ಇರ್ತಾರೆ. ಇಬ್ರೂ ನನ್ನನ್ನ ತಾಯಿಯ ಹಾಗೆ ನೋಡ್ಕೊಂಡಿದಾರೆ. ಹಾಗ್ನೋಡ್ಕೊಂಡಿದೀರೀಂತ ಒಂದ್ಸಲವಾದ್ರೂ ಬಾಯ್ಬಿಟ್ಟು ಹೇಳಿ, ಒಂದು ನಮಸ್ಕಾರ ಹೇಳ್ಬೇಕು ನಾನು. ನನ್ನ ಕಡೇ ಆಸೆ ಅದು. ಕರೆಸ್ತೀರಾ" ಎಂದೆ. ಡಾಕ್ಟರ್‌ಗೆ ತಬ್ಬಿಬ್ಬಾಗಿ ನನ್ನ ಮುಖವನ್ನೇ ನೋಡತೊಡಗಿದರು. ಸ್ವಲ್ಪ ಹೊತ್ತಿನ ತಡಬಡಾಯಿಕೆಯ ನಂತರ ತಲೆಎತ್ತಿ ಮಾಪಕವನ್ನು ನೋಡುತ್ತಾ "ಇಲ್ಲ; ನೀವು ಗೆದ್ರಿ. ರಕ್ತದೊತ್ತಡ ನಿಧಾನವಾಗಿ ಏರ್ತಿದೆ. ಇನ್ನೇನೂ ಭಯವಿಲ್ಲ" ಎಂದರು. "ನಂಗೆ ಸಮಾಧಾನ ಮಾಡಕ್ಕೆ ಹಾಗೆ ಹೇಳ್ಬೇಡಿ. ನಂಗೇನೂ ಭಯವಿಲ್ಲ; ನಿಜ ಹೇಳಿ" ಎಂದೆ ಮತ್ತೆ. "ಹಾಗೇನಾದ್ರೂ ಆದ್ರೆ ಖಂಡಿತ್ವಾಗೂ ಕರೆಸ್ತೀವಿ. ಈಗ ಅಂಥಾ ಪರಿಸ್ಥಿತಿಯಿಲ್ಲ. ನೀವು ಮಲಗಕ್ಕೆ ಪ್ರಯತ್ನಪಡಿ" ಎನ್ನುತ್ತಾ ತಲೆ ಸವರಿ ನನ್ನ ಪಕ್ಕದ ಕುರ್ಚಿಯಲ್ಲಿ ಕುಳಿತರು... ಯಾವ ಮಾಯದಲ್ಲೋ ಯಮಕಿಂಕರರು ಮಾಯವಾಗಿದ್ದರು.

*

ಯಾವಾಗಲಾದರೊಮ್ಮೆ ನನ್ನವರೊಂದಿಗೆ "ನನಗೆ ಸಾವಿನ ಭಯವಿಲ್ಲ. ಯಾವತ್ತು ಅವ್ನು ಕರೀತಾನೋ ನಿಶ್ಚಿಂತೆಯಿಂದ ಹೊರಟ್ಬಿಡ್ತೀನಿ" ಅನ್ನುತ್ತಿದ್ದೆ. "ಹೇಳೋದು ಸುಲಭ. ಸಾವಿನ ಭಯಾನ ದಾಟೋದು ಅಷ್ಟು ಸುಲಭಾನಾ. ಆ ಘಳಿಗೆ ಬಂದಾಗಲೇ ಅದು ಗೊತ್ತಾಗೋದು" ಎನ್ನುತ್ತಿದ್ದರು ಅವರು. ನಿಜವೇನೋ ಎಂದುಕೊಂಡಿದ್ದೆ.

ಆದರೆ ಆ ಘಳಿಗೆ ಬಂದಾಗಲೂ, ನನ್ನೆದುರು ನಿಂತಾಗಲೂ ಭಯವಾಗಿರಲಿಲ್ಲ; ಆದರೆ ನನ್ನ ಕೃತಜ್ಞತೆಯನ್ನು ತಿಳಿಸಿ "ಹೋಗ್ಬರ್ತೀನಿ" ಎಂದು ಹೇಳಹೋಗಬೇಕು ಎನಿಸಿತ್ತು ಎನ್ನುವುದನ್ನು ನೆನಪಿಸಿಕೊಂಡಾಗ ಆ ಭಯವನ್ನು ಗೆದ್ದಿದ್ದೇನೇನೋ ಎಂದು ನನಗನ್ನಿಸುತ್ತದೆ...

***

ಅಯೋಧ್ಯೆಗೆ ಒಮ್ಮೆ ಹೋಗಿ ಬರಬೇಕು

– ಹು ವಾ ಶ್ರೀ

ಅಯೋಧ್ಯೆಗೆ ಒಮ್ಮೆ ಹೋಗಿ ಬರಬೇಕು
ಭವ್ಯ ರಾಮಮಂದಿರವನ್ನೊಮ್ಮೆ ನೋಡಿ ಬರಬೇಕು

ವನವಾಸ ಮುಗಿಸಿ ಸೀತೆಯೊಡನೆ
ರಾಮ ಬಂದನೋ ಎಂಬಂತೆ
ವಿಶ್ವದೆಲ್ಲೆಡೆ ಎಂತಹ ಸಂಚಲನ ಸಡಗರ.
ಕೋಟಿ ಕೋಟಿ ಹೃದಯಗಳಲ್ಲಿ
ಈಗ ರಾಮನದೇ ಜಪ.

ಕೈ ಕಾಲುಗಳ ಶಕ್ತಿ ಕಳಚುವ ಮುನ್ನ
ಕಣ್ಣು ಮಬ್ಬಾಗುವ ಮುನ್ನ
ಬಾಲ ರಾಮನ ಮುದ್ದುಮುಖವ ಕಂಡು ಬರಬೇಕು.

ಮಂದಿರದೊಳಗೆ ಹೆಜ್ಜೆ ಹೆಜ್ಜೆಯಲಿ
ರಾಮ ಸೀತೆಯರ
ಅರಮನೆಯ ವೈಭವ ಕಾಣುತ್ತ
ಆ ಭಗವಂತನ ಲೀಲೆಯ ನೆನೆಯುತ್ತ
ಆನಂದದಲಿ ಮೈಮರೆಯಬೇಕು

ರಾಮನ ಪಾದ ಸ್ಪರ್ಶಿಸಿದ ನೆಲಕ್ಕೆ
ನಾನು ಹಣೆಯೂರಬೇಕು.
ಅಹಂಕಾರ ಕಳೆಯಬೇಕು

ರಾಮ ರಾಮ ಎಂಬ ಬೀಜ ಮಂತ್ರವ
ನೆನೆಯುತ್ತ ಧ್ಯಾನದಲಿ
ಮನಕ್ಕಂಟಿದ ಪಾಪ ಕಳಚಬೇಕು

ಆ ಸರಯೂ ತಟದಲ್ಲೊಮ್ಮೆ
ನಿಂತು ಸುತ್ತ ನೋಡಬೇಕು
ಶುದ್ಧ ಬ್ರಹ್ಮ ಪರಾತ್ಪರ
ರಾಮನ ಪ್ರಶಾಂತತೆಯನು
ಮೊಗದಲ್ಲಿ ತಂದುಕೊಳ್ಳಬೇಕು

ಅಯೋಧ್ಯೆಗೆ ಹೋಗಿ ಬಂದ
ಮೇಲೆ ಒಂದಿಷ್ಟಾದರೂ
ಅಗಣಿತ ಗುಣಗಣ ಭೂಷಿತ
ರಾಮನ ಗುಣ ನನ್ನೊಳಗೆ ಮೂಡಬೇಕು

ಈ ಜೀವಿತದಲೊಮ್ಮೆ ಭವ್ಯ ಮಂದಿರವ
ಕಾಣುವ ಭಾಗ್ಯ ದೊರೆತಿರುವಾಗ
ಭರತ ಭೂಮಿಯ ಕೊರಳ ಹಾರದಲಿ
ಪದಕದಂತೆ ಕಂಗೊಳಿಸುವ ಅಯೋಧ್ಯೆಯನ್ನು
ಕಂಡು ಕಣ್ತುಂಬಿಕೊಳ್ಳಬೇಕು

ಒಮ್ಮೆ ಅಯೋಧ್ಯೆಗೆ ಹೋಗಿ ಬರಬೇಕು

***

ಇವರೇಕೆ ಹೀಗೆ?

– ಮಾಲತಿ ಶ್ರೀನಿವಾಸನ್

ವೈವಿಧ್ಯತೆ ಪ್ರಕೃತಿಯ ನಿಯಮ. ಎಲ್ಲ ರೀತಿಯ ವೈವಿಧ್ಯತೆಯಲ್ಲೂ ಪ್ರಕೃತಿ ತನ್ನದೇ ಆದ ಸಮತೋಲನ ಕಾಪಾಡಿಕೊಂಡು ಬಂದಿದೆ. ಇದೇ ರೀತಿಯ ವೈವಿಧ್ಯತೆ ಮನುಷ್ಯನ ನಡೆ–ನುಡಿ, ರೀತಿ ರಿವಾಜು ಇರುವ ಜೀವನ ಕ್ರಮವನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಸದಾ ಸಂತಸದಲ್ಲಿ ಸೃಜನಶೀಲರಾಗಿ ಸಕಾರಾತ್ಮಕ ಚಿಂತನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು ಕೆಲವು ಮಂದಿ,

ಇನ್ನು ಕೆಲವರು ಬೇರೊಬ್ಬರ ಜೀವನ ಕ್ರಮ, ವೇಷಭೂಷಣ, ಹಾವಭಾವಗಳ ಬಗ್ಗೆ ಟೀಕಿಸುತ್ತಾ, ತಾವು ಎಲ್ಲದರಲ್ಲೂ ಅತಿ ಬುದ್ಧಿವಂತರು, ತಮ್ಮ ಆಚಾರ–ವಿಚಾರ, ಜೀವನ ಕ್ರಮ, ವೇಷಭೂಷಣವೇ ಸರಿ ಎಂಬ ಧೋರಣೆ, ಮನೋಭಾವ ಹೊಂದಿರುವ ಜನ.

ಸದಾ ಬೇರೊಬ್ಬರನ್ನು ಟೀಕಿಸುತ್ತಾ, ಅದರ ಪರಿಣಾಮದೆಡೆ ಗಮನ ಕೊಡದೆ ತಮ್ಮಲ್ಲಿ ತಾವು ಸುಖಿಸುವ ಇಂತಹ ಜನರನ್ನು ನೋಡಿದಾಗ ಇವರೇಕೆ ಹೀಗೆ? ಅನಿಸುತ್ತೆ ಮನಸ್ಸಿಗೆ. ಇಂತಹ ಜನರಿಗೆ ನಿಯಂತ್ರಣವಿಲ್ಲದ ನಾಲಗೆ, ಕೆಟ್ಟ ಕುತೂಹಲದ ಮನಃಸ್ಥಿತಿಯೇ ಆಯುಧಗಳು. ಸಮಯ ಸಿಕ್ಕಾಗೆಲ್ಲ ವಿಮರ್ಶೆ ಮಾಡುತ್ತಾ, ಬೇಡದಿದ್ದರೂ ತಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರ ಮೇಲೆ ಹೇರುತ್ತಾ, ಎಲ್ಲೆಡೆ ನಕಾರಾತ್ಮಕ ವಾತಾವರಣ ಸೃಷ್ಟಿಸುವುದರಲ್ಲಿ ಇವರು ನಿಪುಣರು, ನಿಸ್ಸೀಮರು.

ಇವರ ಚಟುವಟಿಕೆಗಳು ಬೆಳಗಿನ ಅಹ್ಲಾದಕರ ವಾತಾವರಣದಿಂದಲೇ ಒಮ್ಮೊಮ್ಮೆ ಪ್ರಾರಂಭ. ಪ್ರತಿದಿನ ಪಾರ್ಕಿನಲ್ಲಿ ಒಂಟಿಯಾಗಿ ವಾಯು ವಿಹಾರಕ್ಕೆ ಬರುತ್ತಿದ್ದ ವೃದ್ಧ ಮಹಿಳೆ ಸಾವಿತ್ರಮ್ಮನನ್ನು ಕಂಡಾಗ ನಮ್ಮ ನಾರಾಯಣರಾಯರಿಗೆ ಸುಮ್ಮನಿರಲಾಗುವುದಿಲ್ಲ. ಮಾತನಾಡಿಸೋ ನೆಪದಲ್ಲಿ ಕಾಲು ಎಳೆಯುವುದು ಈ ರೀತಿ "ಏನು ಸಾವಿತ್ರಿಯವರೇ, ಒಬ್ಬರೇ ಹೊರಟ್ರೆ, ಎಲ್ಲಿ ಗೋಪಾಲರಾಯರು?”. ದಶಕಗಳಿಂದ ದಿನಾ ಒಬ್ಬರೇ ವಾಕಿಂಗ್ ಬರುತ್ತಿದ್ದ ಇಳಿ ವಯಸ್ಸಿನ ಸಾವಿತ್ರಮ್ಮನಿಗೆ ಇದು ಮುಜುಗರದ ಪ್ರಶ್ನೆ. ಜಡಭರತ ಗಂಡ ಗೋಪಾಲರಾಯರಿಗೆ ಬೆಳಗಿನ ವಾಯುವಿಹಾರದಲ್ಲಿ ಏನೂ ಆಸಕ್ತಿ ಇಲ್ಲ. ಇಡೀ ದಿನ ತನ್ನ ಭೌತಶಾಸ್ತ್ರದ ಸಿದ್ಧಾಂತಗಳ ಅಧ್ಯಯನದಲ್ಲಿ ಮುಳುಗಿ ಎಷ್ಟು ಸಲ ಕರೆದರೂ ಕೇಳದ ಪತಿ, ರಿಪೇರಿ ಆಗೋ ಗಾಡಿ ಅಲ್ಲ ಅಂತ ಅವರನ್ನು ಬಿಟ್ಟು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ವಾಕಿಂಗ್ ಹೊರಟ್ರೆ ಈ ಪ್ರಾಣಿ ಬಿಡಬೇಕಲ್ಲ. ಆಕೆಯ ತಾಳ್ಮೆ ಸಿಡಿದ ದಿನ ನಾರಾಯಣರಾಯರಿಗೆ ಗ್ರಹಚಾರ, "ಹೌದ್ರೀ, ಒಬ್ಬಳೇ ಹೊರಟಿದ್ದೆ, ನಿಮ್ಮ ಹೆಂಡತಿನ ಬಿಟ್ಟು ಈ ಮುದುಕಿಗೆ ಸಾಥ್ ಕೊಡ್ತಿರೇನು?" ಖಾರವಾಗಿ ಎಸೆದ ಮಾತು ದುರ್ದಾನ ತೆಗೆದುಕೊಂಡವರಂತೆ ನಾರಾಯಣರಾಯರು ಸರಸರನೆ ತಮ್ಮ ಹೆಂಡತಿ ಹಿಂದೆ ಹೊರಟಾಗ ಅಲ್ಲೂ ಛೀಮಾರಿ". “ಆಯ್ತಾ, ಬೆಳಗಾಗೆದ್ದು ಮುಖಕ್ಕೆ ಮಂಗಳಾರತಿ. ನಿಮಗೆ ಯಾಕ್ರೀ ಬೇಕಿತ್ತು ಸುಮ್ಮನೆ ರಾಮ ಕೃಷ್ಣ ಅಂತ ವಾಕಿಂಗ್ ಮಾಡಬಾರದಾ? ಆ ದಂಪತಿ ರೈಲ್ವೆ ಹಳಿಗಳಿದ್ದಂಗೆ ಜೊತೆಯಲ್ಲಿದ್ದರೂ ಸೇರಲ್ಲ, ಆಕೆಯನ್ನು ಯಾಕೆ ಕೆಣಕ್ತೀರ ಪಾಪ"

ಈ ನಾರಾಯಣರಾಯರಿಗೆ ಇಳಿ ವಯಸ್ಸಿನ ಸಾವಿತ್ರಮ್ಮನ ಕೆಣಕು ಬುದ್ಧಿ ಯಾಕೆ? ಹೆಂಡತಿ ಬೈದಾಗ ಎರಡು ದಿನ ಬಾಯಿ ಸುಮ್ಮನೆ. ಮೂರನೇ ದಿನ ಮತ್ತೆ ಅದೇ ಚಾಳಿ. ನಾಯಿ ಹಿಡ್ಕೊಂಡು ವಾಯುವಿಹಾರಕ್ಕೆ ಹೊರಟ ದಂಪತಿಗಳು ಕುಸುಮ ಮತ್ತು ಶ್ರೀನಾಥ್, ಇವರ ಮುಂದಿನ ವಿಕ್ಟಿಮ್‌ಗಳು.

"ಏನ್ ಬಾಬಿ ನಾಯಿ ಹಿಡ್ಕೊಂಡು ಯಜಮಾನ್ರು ನೀವು ಬೆಳಗಾಗೆದ್ದು ಇಷ್ಟೊತ್ತು ಮಜವಾಗಿ ತಿರುಗುತ್ತಾ ಇದ್ದೀರಾ, ಅತ್ತೆಗೆ ಮಕ್ಕಳಗೆ ಮನೆಯಲ್ಲಿ ತಿಂಡಿ ಗತಿ" ಅಂತ ಪೆಕರಾಗಿ ನಕ್ಕಾಗ, ಮಾತು ಕೇಳ ಕುಸುಮಳಗೆ ನಖಶಿಖ ಕೋಪ, "ಹೌದ್ರಿ ನಾರಾಯಣ್, ನಾನ್ ಬೀದಿ ಬಸ್ವಿ, ನೀವೇ ಬಂದು ಊಟ ಉಪಚಾರ ಮಾಡಿ ನಮ್ಮನೇಲಿ ನಮ್ಮತ್ತೆಗೆ". ಈ ಎದುರೇಟು ನಿರೀಕ್ಷಿಸದೆ ಬಾಲ ಸುಟ್ಟ ಬೆಕ್ಕಿನಂತೆ ಮತ್ತೆ ದೂರ ಓಡೋದು ಮಾಮೂಲಿ, ನಮ್ಮ ಈ ನಾರಾಯಣರಾಯರಿಗೆ.

ಬೆಳಗಾಗಿದ್ದು ಶುಭೋದಯ ಕೋರಿ, ಚಿಂತನೆ ಮಾಡಲು ಜನರನ್ನು ಬಿಡದೆ ಈ ರೀತಿ ನಕಾರಾತ್ಮಕ ಭಾಷೆಯಿಂದ ಜನರನ್ನು ಮಾತನಾಡಿಸುವವರನ್ನು ನೋಡಿದಾಗ ಇವರೇಕೆ ಹೀಗೆ? ಅಂತ ಹುಚ್ಚು ನಾಯಿಯಿಂದ ದೂರ ಸರಿಯುವಂತೆ ಜನ ದೂರ ಸರಿದರೆ ತಪ್ಪೇನು ಇಲ್ಲ ಬಿಡಿ.

ಇನ್ನು ಕೆಲವರು ತಮ್ಮ ಜೀವನ ಶೈಲಿ, ಜೀವನ ಕ್ರಮ, ಆಚಾರ ವ್ಯವಹಾರ ಎಂಬುದು ಉನ್ನತ ಹಿರಿಮೆ ಎನ್ನುವ ಮನೋಭಾವ ಹೊಂದಿದವರು. ಅವಕಾಶ ಸಿಕ್ಕಾಗೆಲ್ಲ ಹತ್ತಿರದಲ್ಲಿರುವವರನ್ನು ಹೀಯಾಳಸುವುದರಲ್ಲಿ ಇವರು ನಿಸ್ಸೀಮರು.

"ಏನ್ರೀ ಶಾಂತಮ್ಮ, ಇರೋ ಇಬ್ಬರಿಗೆ ನಾಲ್ಕು ಜನ ಆಳುಗಳು. ಅದಕ್ಕೆ ನೀವು ಮನೆಯಲ್ಲಿ ಸಿಗೋದೇ ಇಲ್ಲ, ಎಲ್ಲಾ ಕೆಲಸ ಆಳುಗಳೇ ಮಾಡುತ್ತಾರೆ". ಇದು ವಯಸ್ಸು 60 ದಾಟಿದ್ದರೂ ಚಟುವಟಿಕೆಯಿಂದ ಓಡಾಡುತ್ತಾ, ಇಳ ವಯಸ್ಸಿನಲ್ಲಿ ಗಂಡನೊಡನೆ ಜೀವನದಲ್ಲಿ ನೆಮ್ಮದಿ ಕಾಣುವ ಪ್ರಯತ್ನದಲ್ಲಿದ್ದ ಶಾಂತಮ್ಮನಿಗೆ ಗೆಳತಿಯ ಮಾತು. ಇಷ್ಟು ಸಾಲದು ಅಂತ ಭಜನೆ, ವಿಷ್ಣು ಸಹಸ್ರನಾಮ, ಕಾರ್ಯಕ್ರಮಗಳಲ್ಲಿ ಶಾಂತಮ್ಮನ ನಗು ಮುಖ ಕೆಲವರಿಗೆ ಕಣ್ಣುರಿ. "ಏನ್ರೀ ಶಾಂತಮ್ಮ, ತಲೆಗೆ ಬಣ್ಣ ಹಚ್ಚಿ, ದಿನಕ್ಕೊಂದು ಸೀರೆ, ಡ್ರೆಸ್ಸು ಟ್ರಿಮ್ಮಾಗಿ ಕಾಣಿಸ್ತೀರಪ್ಪ ಬಿಡಿ, ಮಕ್ಕಳು ಮೊಮ್ಮಕ್ಕಳು ಕಾಟ ಇಲ್ಲ ಸುಖಪುರುಷರಪ್ಪ".

ಸ್ನೇಹಿತೆಯ ಮಾತು ಕೇಳ ಶಾಂತಮ್ಮ ಪೆಚ್ಚು. ಸ್ವಲ್ಪ ದಿನದ ಹಿಂದೆನೇ ಮಕ್ಕಳು, ಮೊಮ್ಮಕ್ಕಳೊಡನೆ ನಾಲ್ಕು ತಿಂಗಳು ವಿದೇಶದಲ್ಲಿ ಸಂತಸದ ಸಮಯ ಕಳೆದು ಮನೆಗೆ ಹಿಂತಿರುಗಿ ಪರಿಸ್ಥಿತಿಗೆ ಹೊಂದಿಕೊಳ್ಳೋ ಪ್ರಯತ್ನದಲ್ಲಿದ್ದವರಿಗೆ, ಗೆಳತಿಗೆ ಈ ರೀತಿ ಹೇಳಬೇಕೆಂದೆನಿಸದೆ, "ನೀವು ನಿಮಗೆ ಬೇಕಾದ್ ಮಾಡ್ರಿ, ನನ್ ಬಗ್ಗೆ ಯಾಕ್ ಮಾತಾಡ್ತೀರಾ? ಜೊತೆಯಲ್ಲಿರುವ ಮಗ ಸೊಸೆ ಮಕ್ಕಳೊಡನೆ ನಿಮ್ಮ ದಿನನಿತ್ಯದ ರಂಪ ರಾಮಾಯಣ ಗೊತ್ತಿಲ್ವೇ? ಎಲ್ಲಾರಿಗೂ. ನಮ್ಮನ್ ಯಾಕ್ ಸುಮ್ಮನೆ ನೋಯಿಸ್ತೀರಿ" ಎಂದು ತಿರುಗೇಟು ಕೊಡಬೇಕೆನಿಸಿದರೂ ಶಾಂತಮ್ಮನದು ಸೌಜನ್ಯತೆಯ ಎಲ್ಲೆ ಮೀರಲಾಗದ ಮನಸ್ಸು, ನೆರೆಹೊರೆಯ ಒಡನಾಟ, ಆಡಬಾರದ ಮಾತುಗಳು ಅವು, ಅನಿಸಿ ದೇಶಾವರಿ ನಗೆ ಬೀರಿ ಮುಂದೆ ಸರಿಯುವುದು ಅನಿವಾರ್ಯ ಅನಿಸಿದ್ದು ಸಹಜ.

ಹತ್ತಿರದವರು, ದಿನನಿತ್ಯ ನೋಡುವವರು, ಸ್ನೇಹಿತರು, ಸಂಬಂಧಿಕರು, ಯಾರೇ ಆಗಲಿ ನೋಯಿಸುವುದೇಕೆ?. ಕಡಿವಾಣವಿಲ್ಲದೆ ನಾಲಿಗೆಯ ಹರಿಬಿಟ್ಟು ಬೇರೊಬ್ಬರ ಮನಸ್ಸಿನ ಮೇಲೆ ತಮ್ಮ ವಾಗ್ಝರಿಯ ಪರಿಣಾಮ ಅರಿಯಲಾರದ ಇವರೇಕೆ ಹೀಗೆ? ಸಮಾಜದಲ್ಲಿ ಮನಸ್ಸಿನ ಆರೋಗ್ಯಕರ ಬೆಳವಣಿಗೆಗೆ ವಾಕ್ ಶುದ್ಧತೆ ಅತಿಮುಖ್ಯ.

'ಮಾತುಮನೆ ಮನಸ್ಸು ಕೆಡಿಸ್ತು, ತೂತು ಒಲೆ ಕೆಡಿಸ್ತು" ಗಾದೆಯ ಈ ಮಾತು ಎಷ್ಟು ಸತ್ಯ. ಆಡುವ ಮಾತಿನ ಮೇಲೆ ನಿಯಂತ್ರಣವಿಲ್ಲದಿದ್ದರೆ ಜೊತೆಯಲ್ಲಿ ಜೀವನ ಮಾಡುವವರಿಗೆ, ಸುತ್ತಲಿನ ಸ್ನೇಹತರಿಗೆ, ಸಂಬಂಧಗಳಿಗೆ ಆಗುವ ಹಾನಿ ಅಪಾರ. ಬುದ್ಧಿಜೀವಿ ಮನುಷ್ಯನಿಗೆ ಯೋಚಿಸುವ ಶಕ್ತಿ ಕೊಟ್ಟ ಭಗವಂತ, ಅದನ್ನು ಸರಿ ಹಾದಿಯಲ್ಲಿ ಕೇಂದ್ರೀಕರಿಸಿ ಸತ್ಪ್ರಜೆಯಾಗಿ ಬಾಳಲಾರದ ಇಂತಹವರನ್ನು ನೋಡಿ ಆ ಭಗವಂತನೂ ಅನ್ನುತ್ತಿರಬಹುದು ಇವರೇಕೆ ಹೀಗೆ?.

***

ಬೆಳ್ಮುಗಿಲ ಹೂರಣ

– ಮಾನಸ ಕೆ.ಕೆ.

ಹಸಿರೊಡೆದ ಹಾಸಿನಲಿ ಎಳೆ ಚಿಗುರು ಹೊಳೆಯುತಲಿ
ನಯವಾಗಿ ಮೆಲ್ಲುಸಿರ ಪಸರಿಸಿ ರವಿಯ ಮುದ್ದಗರೆವ ಮನ ಮೌನ ಮನವಿಲ್ಲಿ..

ಇಳಿ ಸಂಜೆ ಮೊಬ್ಬಿನಲಿ ಕೆಂಗಿರಣ ಹಬ್ಬುತಲಿ
ಜೋಡಿ ಭಾವಕ್ಕೆ
ಗಗನದಾನಂದ ಸೋಚಿಗ
ತೂಗುಯ್ಯಾಲೆಯಿಲ್ಲಿ...

ಹಚ್ಚ ಹಸಿರಿನಲಿ
ತೆರೆ ತೆರೆಯ ಅಲೆಯ ಬನವದು
ಸುಯ್ಯುಗುಟ್ಟುವಾ ಮೆಲು ದನಿಯಾ
ಭಾವವು.. ಸಪ್ತಸ್ವರವಿಲ್ಲಿ..

ಅಂಬರದ ಚಪ್ಪರವು
ಮೋಡದಲಿ ನಲಿಯುತ ತೊಯ್ದಾಟದಲಿ
ಬಿಳಿ ಮೋಡದೂರಣವು ಬೆಳ್ಮುಗಿಲ ದಿಬ್ಬಣದಾ ತೋರಣವಿಲ್ಲಿ

ಕಲೆಯಬೇಕಿದೆ ನಾವು ಚಿಗುರ ಭಾಂಧವ್ಯಕೆ
ಒಲಿಯಬೇಕಿದೆ ನಾವು ಚೆಲ್ಮುಗಿಲ ಭಾವಕ್ಕೆ

***

ಯುಗಾದಿ

– ಡಾ, ಸತ್ಯವತಿ ಮೂರ್ತಿ

ಮಗಳಿಗೆ ಜ್ವರ,
ಔಷಧಿಗಾಗಿ ನಡೆದಿದ್ದೆ ಡಾಕ್ಟರೆಡೆಗೆ
ದಾರಿಯಲ್ಲಿ ಕುಳಿತಿದ್ದ ಹಸ್ತ ಸಾಮುದ್ರಿಕ
ನನಗರಿವಿರದೆಯೆ ಕೈಚಾಚಿದ್ದೆ ಅವನ ಮುಂದೆ
ಭೇಷ್ ಭೇಷ್, ಬಲ್ಲೊಗಸು ಬಲ್ಲೊಗಸು
ಜಬರ್ದಸ್ತ್ ಕೈ ಎಂದ

ಹಸ್ತವನು ಅತ್ತಿತ್ತ ತಿರುಗಿಸಿ
ಭೂತಕನ್ನಡಿ ಹಾಕಿ ಗೆರೆಗಳನ್ನು ಎಣಿಸಿದ
ಈ ಒಂದಾರೆಂಟು ತಿಂಗಳು ಕಷ್ಟಪಟ್ಟುಬಿಡು
ನಂತರ ನೋಡು ನಿನ್ನ ಭವಿಷ್ಯ
ರಾಜ ದರ್ಬಾರು

ಇಲ್ಲಿ ನೋಡು ಈ ಉದ್ದಗೆರೆ
ಹಾದು ಹೋಗಿದೆ ಇಲ್ಲಿ ನಡುವಿನಲ್ಲಿ
ಇದು ತರುವುದು ಸುಖದ ನೆರೆ
ಖುಲಾಯಿಸುತ್ತದೆ ಕಾಲ ನಿನಗೆ ಯುಗಾದಿ ವೇಳೆಗೆ
ನೆಚ್ಚು ನನ್ನ ಮಾತನ್ನು
ನಾ ಹೇಳಿದ್ದೆಲ್ಲ ಸತ್ಯ

ಸುರಿಯುತ್ತದೆ ಹಣದ ಮಳೆ
ಹರಿಯುತ್ತದೆ ಸುಖದ ಹೊಳೆ
ಕೊರತೆ ಕಷ್ಟವೆಂಬುದು ಸುಳಿಯದು
ಎಂದೆಲ್ಲ ಕೊರೆದಾಗ
ಉಬ್ಬಿಹೋದೆ ನಾನು

ಔಷಧಿಯ ಹಣ ಕಾಣಿಕೆಯ ಹುಂಡಿಗೆ ತೆತ್ತು
ಬರಿಗೈಯಲ್ಲಿ ಮನೆ ಸೇರಿದೆ ಬರಲಿರುವ ಸುಖದ ಅಮಲಿನಲ್ಲಿ
ಬಂದುಹೋದವು ಒಂದರ ಮೇಲೊಂದು ಯುಗಾದಿಗಳು!
ತರಲಿಲ್ಲ ಒಂದೂ ಸುಖದ ತುಣುಕು
ಕಾಯುತ್ತಿದ್ದೇನೆ ಆ ಯುಗಾದಿಗೆ

ನನಗೆ ಸುಖ ತರುವ ಯುಗಾದಿಗೆ
ಎಂದು ಬಂದೀತು? ಎಂದು ಬಂದೀತು?
ಎಂದು ಬಂದೀತು? ಎಂದು

***

ಕಣ್ಣಮುಚ್ಚಾಲೆ

– ಡಾ ಸತ್ಯವತಿ ಮೂರ್ತಿ

ಏನು ಮುನಿಸೋ ನಮ್ಮೊಳಗೆ ನಿನಗೆ ಖಗಪೂಷನೆ
ನಮ್ಮನ್ನು ಕರುಣಿಸು ಹೇ ಸೂರ್ಯದೇವನೇ
ಬೆಳಗಾಗ ಏಳುತಲೆ ನಿನ್ನ ನೋಡಿರೆ ನಾವು
ಕುಣಿಯುವೆವು ಹರ್ಷದಲಿ ಮರೆತೆಮ್ಮ ನೋವು

ಅಪರಿಚಿತರ ಕಂಡಾಗ ಮನೆಯಲ್ಲಿ ಹಸುಗೂಸು
ಅಮ್ಮನಾ ಸೆರಗಿನಡಿ ಮಾಡುವುದು ಮುಸುಮುಸು
ನೀನೇಕೆ ಮೋಡಗಳ ನೆರಳಲ್ಲಿ ಅವಿತಿರುವೆ
ನಿನಗೆಂಥ ಸಂಕೋಚ ನಾಚಿಕೆಯು ಪ್ರಭುವೇ

ಚಳಿಗಾಲದಲ್ಲಂತೂ ಹಿಮರಾಜ ಮುಸುಕಿರಲು
ಎಷ್ಟೊಂದು ಮುಜಗರವು ನಿನ್ನಿರವ ನೋಡಲು
ಎಲ್ಲರಿಗು ಬಲಶಾಲಿ ನೀನಯ್ಯ ದೇವಾರ್ಕ
ನಿನ್ನ ಮಹಿಮೆಯ ಪೊಗಳೆ ನಾಚುವದು ತರ್ಕ

ನೀನಿರಲು ಜಗವಹುದು ನೀನಿರಲು ಜನವಹುದು
ನೀನಿಲ್ಲದಿರೆ ಪ್ರಭುವೆ ಲೋಕ ಕುರುಡಹುದು
ಗಿಡ ಗಂಟಿ ಪಶು ಪಕ್ಷಿ ನಿನಗಾಗಿ ಕಾದಿರಲು
ಬಂದೀಗ ಹರಸಯ್ಯ ಕಿರಣಗಳ ಹಸ್ತದೊಳು

ಲೋಕವದು ನಗುತಿಹುದು ನಿನ್ನದೇ ನೆರವಿಂದ
ಆಹಾರ ಬೆಳೆಯುವುದು ನಿನ್ನದೇ ಇರವಿಂದ
ಮುನಿಸಿನಲಿ ನೀನಿರಲು ಬೆಳಕಿಲ್ಲ ಜಗದಲ್ಲಿ
ಕೋಪವನು ದೂರಿಟ್ಟು ಸಲಹೆಮ್ಮ ಮಿತ್ರನೇ

***

ಪುಸ್ತಕ ಪರಿಚಯ

ಬೆಳಕು ಹರಿವ ಮುನ್ನ (ಹತ್ತು ಕಥೆಗಳ ಸಂಕಲನ)

ಲೇಖಕರು ಶ್ರೀಮತಿ. ಟಿ ಎಸ್. ಶ್ರವಣಕುಮಾರಿ

– ಕೆ ಎನ್ ಮಹಾಬಲ



ತಮ್ಮ "ಅಸ್ಪಷ್ಟ ತಲ್ಲಣಗಳು" ಎಂಬ ಕಥಾಸಂಕಲನದ ಮೂಲಕ ಈಗಾಗಲೇ ಕಥಾಜಗತ್ತನ್ನು ಪ್ರವೇಶಿಸಿರುವ ಶ್ರೀಮತಿ ಶ್ರವಣ ಕುಮಾರಿಯವರ ಎರಡನೆಯ ಕಥಾಸಂಕಲನ "ಬೆಳಕು ಹರಿವ ಮುನ್ನ" ಕಳೆದ ವಾರ ಅದ್ದೂರಿಯಾಗಿ ಲೋಕಾರ್ಪಣೆಗೊಂಡಿದೆ.

ತಮ್ಮ ಬ್ಯಾಂಕ್ ವೃತ್ತಿಯಿಂದ ನಿವೃತ್ತಿಯಾದ ನಂತರ ಲೇಖಕಿ ಸಾಹಿತ್ಯಲೋಕಕ್ಕೆ ಮತ್ತು ವಿಶೇಷವಾಗಿ ಕಥಾರಚನೆಗೆ ತೊಡಗಿಸಿಕೊಂಡು ಯಶಸ್ವಿಯಾಗಿರುವುದು ಅವರ ಮೊದಲ ಕಥಾಸಂಕಲನ "ಅಸ್ಪಷ್ಟ ತಲ್ಲಣಗಳು" ಕೃತಿಯಲ್ಲೇ ಪಡಿಮೂಡಿದೆ.

'ಬೆಳಕು ಹರಿವ ಮುನ್ನ' ಸಂಕಲನದ ಹತ್ತೂ ಕಥೆಗಳು ಭಿನ್ನ ಭಿನ್ನವಾದ ವಸ್ತು, ನಿರ್ವಹಣೆ, ಶೈಲಿಗಳನ್ನು ಹೊಂದಿವೆ. ಕಥೆಗಾರ್ತಿ ಯಾವುದೇ ಪಂಥವಾದಕ್ಕೆ ಜೋತುಬೀಳದೆ ಭಿನ್ನ ಭಿನ್ನ ರೀತಿಯ ಸಂವೇದನೆಗಳನ್ನು ತಮ್ಮ ಕಥಾಮಾರ್ಗದಲ್ಲಿ ಅಳವಡಿಸಿಕೊಂಡಿದ್ದಾರೆ.

ಸಂಕಲನಕ್ಕೆ ಶೀರ್ಷಿಕೆ ನೀಡಿರುವ "ಬೆಳಕು ಹರಿವ ಮುನ್ನ" ಕಥೆಯಲ್ಲಿ ತನಗಿಂತ ಕಿರಿಯರಿಗೆ ಪ್ರಮೋಷನ್ ಸಿಕ್ಕಿತೆಂದು ಹತಾಶನಾಗಿ ಕೆಲಸ ಬಿಡುವ ಗಂಡು ಮತ್ತೊಂದು ಸಮರ್ಥ ಕೆಲಸ ಗಿಟ್ಟಿಸಲೂ ಅಸಮರ್ಥನಾಗಿ, ವ್ಯಾಪಾರದಲ್ಲಿ ಗಳಿಸಲು ಹೋಗಿ ಅಲ್ಲೂ ವಿಫಲನಾಗಿ ತನ್ನ ಹೆಂಡತಿಯ ಮೇಲೂ ಕ್ರೂರವಾಗಿ ಕೈ ಮಾಡುವ ಸಂಸಾರವನ್ನು ದುಸ್ಥಿತಿಗೆ ತಳ್ಳುವ ಚಿತ್ರ ಪರಿಮಾಣಕಾರಿಯಾಗಿ ಮೂಡಿ ಬಂದಿದೆ. ಅಂದಿನ ಕಾಲದ ಸ್ತ್ರೀ ಶೋಷಣೆ ಇಂದಿನ ಕಾರ್ಪೋರೇಟ್ ಉದ್ಯೋಗದ ಕಾಲದಲ್ಲೂ ಬೇರೊಂದು ರೀತಿಯಲ್ಲಿ ಮುಂದುವರೆದಿರುವುದು ಸೋಜಿಗವಾಗಿದೆ.

> **'ಬೆಳಕು ಹರಿವ ಮುನ್ನ' - ಸಣ್ಣ ಕಥಾ ಸಂಕಲನ**
> **ಲೇಖಕಿ: ಟಿ.ಎಸ್. ಶ್ರವಣ ಕುಮಾರಿ**
>
> ಪ್ರಕಾಶಕರು:
> ಸ್ನೇಹ ಬುಕ್ ಹೌಸ್, ಶ್ರೀನಗರ, ಬೆಂಗಳೂರು –
> ಮೊಬೈಲ್ 98450531335
> ಪುಟ; 144, ಬೆಲೆ; ರೂ 175.– ಪ್ರಕಟಣೆ: 2023

"ಗಿಣ್ಣಿನ ಪರಿಮಳ" ಕಥೆಯಲ್ಲಿ ನಿರ್ಮೂಲನ ವಾಗಿದೆಯೆಂದೇ ನಾವು ಭಾವಿಸಿರುವ ಜೀತ ಪದ್ಧತಿ ಇಂದೂ ಬೇರೊಂದು ನವಿರಾದ ರೀತಿಯಲ್ಲಿ ಹಾಜರಿರುವುದನ್ನು ವಿಶ್ಲೇಷಿಸುತ್ತದೆ. ಕಥೆಯ ಕೇಂದ್ರ ಪಾತ್ರ ರಾಮ ತನ್ನ ತಾಯಿ ಯಾರ ಹತ್ತಿರವೋ ಮಾಡಿದ್ದ ಸಾಲದ ಬದಲಿಗೆ ಅವರ ಮನೆಗೆ ಚಾಕರಿಗೆ ಹೋಗುವುದು, ಅಲ್ಲಿ ಕಂಡ ಅಹಿತಕರ ವಿದ್ಯಮಾನ ಗಳಿಂದಾಗಿ ವಾಪಸು ಬರಲು ಯತ್ನಿಸುವುದು ಎಲ್ಲ ಮನ ಕರಗಿಸುತ್ತದೆ. ಆದರೆ ಅಂತಿಮವಾಗಿ ಅದೇ ಅಹಿತಕರ ಸ್ಥಿತಿಗೆ ಅವನು ವಾಪಸು ಹೋಗಬೇಕಾಗಿ ಬಂದುದು ಮಾತ್ರ ದುರದೃಷ್ಟಕರ.

"ಯಾರು ಜೀವವೇ... ಯಾರು ಬಂದವರು" ವೃದ್ಧಾಶ್ರಮದ ಜೀವಿಗಳ ಸಂಕಟ, ನಿರೀಕ್ಷೆ ಹಾಗೂ ಬವಣೆಗಳನ್ನು ಹೃದಯಸ್ಪರ್ಶಿಯಾಗಿ ತೆರೆದಿಡುವ ಕಥೆ. ಒಂದು ಕಾಲದಲ್ಲಿ ಮನೆಯ ಯಜಮಾನಿಯಾಗಿ ಮೆರೆದ ವಿಶಾಲಾಕ್ಷಮ್ಮನವರು ಕೂಡುಕುಟುಂಬದಲ್ಲಿ ಇರಲಾರೆ ಎಂದು ತನ್ನ ತಾಯಿಯ ಮನೆಗೆ ಮಕ್ಕಳೊಡನೆ ಹೊರಟುಹೋದ ಸೊಸೆಯ ಕಾರಣದಿಂದ ವೃದ್ಧಾಶ್ರಮ ಸೇರಬೇಕಾದುದು, ಅಲ್ಲಿ ಅವರು ಅನುಭವಿಸುವ ಬವಣೆಗಳು ಸೇರಿಸಿದ ನಂತರ ಅವರನ್ನು ನೋಡಲು ಕುಟುಂಬದವರು ಯಾರೂ ಅಷ್ಟಾಗಿ ಬಾರದಿರುವುದು, ಯಾರಾದರೂ ಪರಿಚಿತರು ತಮ್ಮ ನೋಡಲು ಬಂದಾರೇ ಎಂದು ಆಕೆ ಹಪಹಪಿಸುವುದು ಎಲ್ಲವನ್ನೂ ಕತೆಗಾರ್ತಿ ಮನ ಮಿಡಿಯುವಂತೆ ನಮ್ಮ ಮುಂದಿಟ್ಟಿದ್ದಾರೆ.

"ಹಿತ್ತಲ ಬಾಗಿಲು" ಕಥೆಯಲ್ಲಿ ತನ್ನದೇನೂ ತಪ್ಪಿಲ್ಲದಿದ್ದರೂ ನಿಂತು ಹೋದ ಮದುವೆಯಾದ ಕಾರಣವಾಗಿ ನೆಂಟರ ವಲಯದ ಬಿಟ್ಟಿ ಚಾಕರಿಯ ಜಾಲದಲ್ಲಿ ಸಿಕ್ಕಿಕೊಂಡ ರಾಜಿಯ ಪಾತ್ರ ಹೃದಯಂಗಮವಾಗಿದೆ. ಆದರೆ ಅಂತಿಮವಾಗಿ ಇಂಥ ದಾಸ್ಯವನ್ನು ಪ್ರತಿಭಟಿಸುವ ಅವಳ ದಿಟ್ಟ ನಿರ್ಧಾರ ಕಥೆಯ ಗೆಲುವು ಎಂದೇ ಹೇಳಬಹುದು.

"ಕರೆ" ಕಥೆಯಲ್ಲಿ ಬಾಲ್ಯ ಕಾಲದ ವಿಲಾಸೀ ಸ್ವಭಾವದ ಸ್ನೇಹಿತ ಮದನ್ ಅವನ ಪ್ರೇಮ ವಿವಾಹದ ಸಾಹಸ, ಬದುಕಿನಲ್ಲಿ ಅವನತಿ, ಸಾಲದ ಸುಳಿ, ಆರೋಗ್ಯದ ಅವನತಿ, ಕೊನೆಯ ಬಾರಿಗೆ ಅವನನ್ನು ಕಾಣದ ನಿರಾಸೆ ಎಲ್ಲ ಮನ ಮುಟ್ಟುವಂತೆ ಮೂಡಿದೆ. ಅಂತ್ಯ ತಕ್ಕಮಟ್ಟಿಗೆ ಸರಿಯಾಗೇ ಇದೆ.

"ತಿಥಿ" ಕಥೆಯೂ ಒಂದರ್ಥದಲ್ಲಿ ಸ್ತ್ರೀ ಶೋಷಣೆಯ ಮತ್ತೊಂದು ಮುಖ ಎಂದೇ ಹೇಳಬಹುದು. ಒಂದು ಶುಭ ಸಮಾರಂಭದಲ್ಲಿ ಭಾಗವಹಿಸಬೇಕಾಗಿದ್ದ ನಾಗೂ ತಿಥಿಯೊಂದಕ್ಕೆ ಅಡುಗೆ ಮಾಡಲು ಹೋಗಬೇಕಾದ ಸನ್ನಿವೇಶ ದುರಂತಕರ. ಇಂಥ ಶೋಷಣೆಯ ಕೊನೆ ಹೇಗೆ?

"ಚದುರಂಗದ ಕುದುರೆ" ಈ ಸಂಕಲನದ ಮತ್ತೊಂದು ಗಮನ ಸೆಳೆಯುವ ಕತೆ. ಸಂಪ್ರದಾಯದ ಸಂಕೋಲೆಗಳನ್ನು ಕಳಚಿ ಗೆದ್ದೇಬಿಡುತ್ತೀಬೆಂದು ಹೊರಟ ಚಂದ್ರಲೇಖಾ ತಾನೇ ಇಷ್ಟಪಟ್ಟ ಸಿದ್ಧಾರ್ಥನ ಜತೆಗಿನ ಮದುವೆಯ ನಂತರದ ಸುಳಿಗಾಳಿಗೆ ಸಿಕ್ಕಿ ಬಳಲುವ, ತನ್ನ ನಿರ್ಧಾರದಿಂದ ಸೋಲುವ ಚಿತ್ರವನ್ನು ಕತೆಗಾರ್ತಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ

"ನ್ಯಾಸ" ಒಂದು ರೋಚಕ ಕತೆ. ಗೌರಿ ಪೂಜೆಯ ಕಲಶದ ಸುತ್ತ ಹೆಣೆದ ಸನ್ನಿವೇಶಗಳು ಕುತೂಹಲಕರವಾಗಿ ಮೂಡಿ ಬಂದಿವೆ.

"ಪೋಗದಿರಲೋ ರಂಗ" ಒಂದು ಸಂಕೀರ್ಣ ಸಮಸ್ಯೆಗಳ ಸರಮಾಲೆಯಾದ ಕಥೆ. ಮದುವೆಯಾಗದ ಮಗ, ವಿಧವೆಯಾದ ಮಗಳ ಮರುಮದುವೆಯ ಯತ್ನ, ಇಂಥ ಎಲ್ಲ ಸಮಸ್ಯೆಗಳೂ ಮಧ್ಯಮವರ್ಗದ ಜನರಿಗೇ ಮೀಸಲೋ ಎನ್ನುವಂತಿದೆ.

"ಮುತ್ತಿನ ಓಲೆ", ರುಗ್ಣ ಶಯ್ಯೆಯಲ್ಲಿದ್ದ ಅಜ್ಜಿ ತನ್ನ ಮುರಿದ ಮುತ್ತಿನ ಓಲೆಯ ರಿಪೇರಿಗೆ ಹಂಬಲಿಸುವುದು, ರಿಪೇರಿಯಾಗಿ ಬಂದ ಮೇಲೆ ನಿಶ್ಚಿಂತೆಯಿಂದ ಪ್ರಾಣ ಬಿಡುವುದು. ಎಲ್ಲ ಬಹಳ ಸಹಜವಾಗಿ ಚಿತ್ರಗೊಂಡಿದೆ.

ಕತೆಗಳಲ್ಲಿ ಅರೆ ಪಟ್ಟಣ, ನಗರ, ವಿಶೇಷವಾಗಿ ಹಳೆಮೈಸೂರಿನ ಆಡುಭಾಷೆಯ ಶೈಲಿ ಹಬ್ಬಿದೆ. ಕತೆಗಾರ್ತಿಯನ್ನು ಮಧ್ಯಮವರ್ಗದವರ ಬವಣೆ, ತಲ್ಲಣಗಳೇ ಹೆಚ್ಚು ಕಾಡಿದಂತಿದೆ. ಇವರ ಮುಂದಿನ ಕಥಾರಚನೆಗಳಲ್ಲಿ ಮತ್ತಷ್ಟು ವಸ್ತು ವೈವಿಧ್ಯವನ್ನು ಕಾಣಲೂ ವಿಫುಲ ಸಾಧ್ಯತೆಗಳಿವೆ.

ಕೃತಿಗೆ ಖ್ಯಾತ ಸಾಹಿತಿ ಸಂತೋಷಕುಮಾರ ಮೆಹಂದಳೆ ಅವರ ಸಮರ್ಥ ಮುನ್ನುಡಿ ಇದೆ. ಪ್ರಸಿದ್ಧ ಕತೆಗಾರ, ಅಂಕಣಕಾರ, ಕೆ ಸತ್ಯನಾರಾಯಣ ಅವರ ಬೆನ್ನುಡಿಯ ರಕ್ಷೆಯಿದೆ. ಸಂತೋಷ ಸಸಿಹಿತ್ಲು ಅವರ ಮುಖಪುಟ ಗಮನ ಸೆಳೆಯುವಂತಿದೆ. ಪುಟವಿನ್ಯಾಸ ಗುರುರಾಜ ಶಾಸ್ತ್ರಿಯವರದು. ಪ್ರಕಾಶಕರಾದ ಪರಶಿವಪ್ಪ ಅವರ ಸಾಹಸ ಬಹಳ ದೊಡ್ಡದು. ಮುದ್ರಣವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದವರು ಯಂತ್ರೋದ್ಧಾರಕ ಮುದ್ರಣಾಲಯದ ಅನಿಲ್ ಅವರು.

ಶ್ರವಣಕುಮಾರಿಯವರಿಗೆ ಅಭಿನಂದನೆಗಳು.

***

ಋತ

– ರಾಧಿಕಾ ವಿ ಗುಜ್ಜರ್

ನಾನಾಗ ಅದೇ ಹೂವರಳದ ಹುಡುಗಿ
ದುಂಬಿಯೊಂದು ಸುತ್ತ ಗುಂಯಿಯೆನ್ನುತ್ತಿತ್ತು
ನಾನು ಅದರ ರಾಗಕೆ ಸೋತಿದ್ದೆ
ದುಂಬಿ ಮಕರಂದಕೆ ಸೋತಿರಬಹುದು
ದುಂಬಿಯ ಹೆಸರು ಪರಮಾಪ್ತವಾಗಿತ್ತು
ರಾಗ-ರಸ ಹೊಮ್ಮಿ ಹರಡಿತು ಕೂಡ

ಇಬ್ಬರೂ ಕಾಯಿಚೂರು ಹಂಚಿ ತಿಂದು
ಅದೇ ಕರಟದಿಂದ ಹೆಸರು ಗೀಚಿದ್ದೆವು
ಆಗ ನನ್ನಷ್ಟೆತ್ತರವಿತ್ತೀ ಎಳೆಯ ಮರ
ಎಳೆಯ ತೊಗಟೆಗೆ ಹೆಚ್ಚು ಗೀರಲೂ ಇಲ್ಲ
ನಮ್ಮಿಬ್ಬರ ಹೆಸರು ಹೊತ್ತ ಮರ ಬೆಳೆಯಿತು
ಕರಟಕ್ಕಿಂತ ಕಠಿಣರಿಂದ ನನ್ನ ರಂಗು ಬರಡಾಯಿತು

ಹೆಸರುಗಳು ಎಟುಕದಷ್ಟು ಎತ್ತರವೀಗ
ಗೊತ್ತಿರದ ಅದೆಷ್ಟು ಹೆಸರುಗಳಿವೆಯೋ
ಹೇಳಿಕೊಳ್ಳಲಾಗದ ನನ್ನಂತಹವರಿಗೆ
ಅವಧೂತ ಮರವು ಮೌನಿ, ಮೂಕ ಸಾಕ್ಷಿ
ನೋಡುತ್ತಿರುತ್ತದೆ ಬಂದು ಹೋಗುವವರ
ಹಸಿರಿರುತ್ತದೆ, ವರ್ಷಕ್ಕೊಮ್ಮೆ ಬೋಳು ಖಿನ್ನತೆಗೆ

ಮನೆಗೆ ಹತ್ತಿರವಿರುವ ಈ ಅವಿದಿತ
ಇದೊಂದೇ ಈಗಿನ ನಡಿಗೆಯ ಗಮ್ಯ
ಇದರಿಂದ ಹೆಚ್ಚು ದೂರಕೂ ನಡೆಯಲಾರೆ
ಜೀರ್ಣವಾದ ಕಾಯಕೆ ಖಾರವುಣಿಸಲಾರೆ
ಮರಕ್ಕೂ ತಿಳಿದಿದೆ ಏಕೀ ದಿನಚರಿಯೆಂದು
ಸಂಜೆ ಬಂದಪ್ಪುತ್ತದೆ ತುದಿಯ ಹೂವನುದುರಿಸಿ

ಮತ್ತಾವ ಜೀವಿಗಳಲ್ಲೂ ಕಾಣದಿದು, ಎಂದೂ
ಅಂದಂದಿಗೆ ಪ್ರೀತಿಸಿ ತೆಕ್ಕೆಗೆ ಬಿದ್ದುಬಿಡುತ್ತವೆ
ಪ್ರೀತಿಸಿದರೂ ಇಲ್ಲದಿದ್ದರೂ ತಾವೇ ತಾವಿದ್ದು
ಇರದುದರೆಡೆಗೆ ಎಂಬ ತತ್ವದ ಹೊರತು
ಅವಕ್ಕೂ ಸೋಜಿಗವೇನೋ ಮನುಜರ ನಡೆ
ಹೊತ್ತೇ ಇರುತ್ತೇವೆ ಕಸವ, ಉಗಿಯದೆ ವಿಷವ

ಈಗಲೂ ಮರಗಳೇ ನಮಗಾಶ್ರಯವು
ಬದುಕಿರುವವರೆಗೂ, ಬದುಕಿನಾಚೆಯವರೆಗೂ

***

ಆ ಒಂದು ಕರೆ...

– ರೇಣುಕಾ ದೇಸಾಯಿ

ಮೊಬೈಲ್ ರಿಂಗಣಿಸಿತು. ಅದೇನು ವಿಶೇಷ ಅನ್ನುವಿರಾ?

ಸ್ವಾಮೀ ಜನವರಿ ಒಂದನೇ ತಾರೀಖು, ಸರಿಸುಮಾರು ಹತ್ತು ಗಂಟೆಯ ಸಮಯ.

ಸರಿ, ಅದರಲ್ಲೇನು ವಿಶೇಷಾ? ನನ್ನ ಮೊಬೈಲ್ ಸ್ಕ್ರೀನ್ ಮೇಲೆ ಕಾಣಿಸುತ್ತಿದ್ದ ಹೆಸರು ನೀಳಾದೇವಿ!!

ಹೌದು, ಕನ್ನಡ ಸಾಹಿತ್ಯ ಲೋಕ ಕಂಡ ಹೆಸರಾಂತ ಲೇಖಕಿ ನೀಳಾದೇವಿ. 91 ಸಂವತ್ಸರ ಕಂಡ ನನ್ನ ನೆಚ್ಚಿನ ಲೇಖಕಿ ನೀಳಾದೇವಿ. ಆಗಿನ ದಿನಮಾನಗಳಲ್ಲಿ 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದಾಕೆ. 'ಬೇಡಿ ಬಂದವಳು' ಇವರ ಒಂದು ಜನಪ್ರಿಯ ಕಾದಂಬರಿ, ಇದು ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಚಲನಚಿತ್ರವಾಗಿ ತೆರೆ ಕಂಡು ಅಪಾರ ಜನಮನ್ನಣೆ ಗಳಿಸಿತು. ಜೊತೆಗೆ ಪ್ರಶಸ್ತಿಗಳನ್ನೂ ಪಡೆದುಕೊಂಡಿತು. ನಾವು ಕಾಲೇಜಿನಲ್ಲಿ ಓದುವಾಗ ನೀಳಾದೇವಿ, ವಾಣಿ, ತ್ರಿವೇಣಿ, ಕೆ.ಸರೋಜಾದೇವಿ ಎನ್ನುವ ನಮ್ಮ ನೆಚ್ಚಿನ ಲೇಖಕಿಯರ ಕಾದಂಬರಿ ಓದುತ್ತಾ, ಪೆಪ್ಪರಮೆಂಟು ಸವಿದಂತೆ ಸವಿಯುತ್ತಾ, ಜೀವನದ ಬಗೆಗೆ ಬಗೆಬಗೆಯ ಸುಂದರ ಚಿತ್ರಣ ಕಲ್ಪಿಸಿಕೊಂಡು, ಕನಸಿನ ಲೋಕದಲ್ಲಿ ತೇಲಿ.. ತೇಲಿ.. ಹೋದ ದಿನಗಳು ನನ್ನ ಸ್ಮೃತಿಪಟಲದಲ್ಲಿ. ಆದರೂ ನೀಳಾದೇವಿಯವರೇ ಕರೆ ಮಾಡಿದ್ದು ಏಕಿರಬಹುದು? ಕುತೂಹಲ ಮತ್ತು ಸಂತೋಷ.

"ನಮಸ್ಕಾರಗಳು", ನನ್ನರಿವಿಗೆ ಬರದಂತೆ ಸಂತೋಷದಿಂದ ಚೀರುತ್ತಾ ಹೇಳಿದೆ.

ಹೌದು, ಅದು ನೀಳಾದೇವಿಯವರದೇ ಧ್ವನಿ. ನಿನಗೇನು ಗೊತ್ತು ಅನ್ನುತ್ತೀರಾ? ನಾನು ಅದೃಷ್ಟವಂತೆ. ಕರ್ನಾಟಕ ಲೇಖಕಿಯರ ಸಂಘದಲ್ಲಿ ಎರಡು ವರ್ಷ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದೇನೆ, ಆಗ 'ಹಿರಿಯ ಲೇಖಕಿಯರ ಸಾಹಿತ್ಯ ಮಂಥನ'– ಇದೊಂದು ಜನಮನ್ನಣೆ ಗಳಿಸಿದ ತಿಂಗಳ ಕಾರ್ಯಕ್ರಮ. ಹೆಸರಾಂತ ಲೇಖಕಿಯರನ್ನು ಹತ್ತಿರದಿಂದ ಕಂಡಿದ್ದೇನೆ, ಮಾತನಾಡಿಸಿದ್ದೇನೆ, ಅವರ ಕೃತಿಗಳನ್ನು ಓದಿ ಪ್ರಬಂಧ ಮಂಡಿಸುವ ಸದವಕಾಶವೂ ದೊರೆತಿತ್ತು. ಹೀಗೆ ಒಂದು ದಿನ ಇಂತಹದೇ ಕಾರ್ಯಕ್ರಮದಲ್ಲಿ ಆನ್‌ಲೈನ್‌ನಲ್ಲಿ ಭಾಗವಹಿಸಲಿರುವ ನೀಳಾದೇವಿಯವರಿಗೆ ತಾಂತ್ರಿಕ ನೆರವು ನೀಡಲು ಅವರ ಮನೆಗೆ ಹೋಗಿದ್ದೆ. ನಾನೇ ಹೋಗಲು ಕೆಲವು ಕಾರಣಗಳಿದ್ದವು, ಒಂದು, ನೀಳಾದೇವಿ ಯವರಿಗೆ ಆನ್‌ಲೈನ್ ಪ್ರೋಗ್ರಾಂನಲ್ಲಿ ಭಾಗವಹಿಸುವುದು ಆಗ ಗೊತ್ತಿರಲಿಲ್ಲ, ಅವರ ಸಹಾಯಕ್ಕೆಂದು ಲ್ಯಾಪ್‌ಟಾಪ್ ತೆಗೆದುಕೊಂಡು ಅವರ ಮನೆಗೆ ಹೋಗಿ ಅಲ್ಲಿಂದಲೇ ಕಾರ್ಯಕ್ರಮದ ಆತಿಥ್ಯ ನಿರ್ವಹಿಸಿದೆ. ಎರಡನೆಯದು ಅವರ ಮನೆಯಿಂದ ಸ್ವಲ್ಪವೇ ದೂರದಲ್ಲಿ ಮಲ್ಲೇಶ್ವರದಲ್ಲಿಯೇ ನನ್ನ ವಾಸ. ಮೂರು, ಕರ್ನಾಟಕ ಲೇಖಕಿಯರ ಸಂಘದ ಪದಾಧಿಕಾರಿಗಳಲ್ಲಿ ನಾನೊಬ್ಬಳೇ ತಾಂತ್ರಿಕ ನೆರವು ನೀಡುವ ಪರಿಣತಿ ಹೊಂದಿದ್ದೆ. ಏನಪ್ಪಾ.... ಎಷ್ಟೊಂದು ಹೇಳಿಕೊಳ್ಳುತ್ತಿದ್ದಾಳೆ ಎಂದು ಮೂಗು ಮುರಿಯುತ್ತಿರುವಿರಾ? ಬೇಕೋ, ಬೇಡವೋ... .ನೀಳಾದೇವಿಯವರ ನಂಬರ್ ನನ್ನ ಹತ್ತಿರ ಯಾಕಿತ್ತು ಎಂದು ಹೇಳಬೇಕಾದರೆ ಇದೆಲ್ಲ ಹೇಳಲೇಬೇಕಲ್ಲ? ನನ್ನದು ತಪ್ಪಲ್ಲ ಸ್ವಾಮೀ, ಹಾ.. ಹಾ.. ಇರಿ.. ಇರಿ... ನೀಳಾದೇವಿಯವರ ಕರೆ ಸ್ವೀಕರಿಸುತ್ತಿನಿ.

"ಹೇಳಿ ಮೇಡಂ, ನಮಸ್ಕಾರ"

“ಅಲ್ಲ... ನಿನ್ನ ಗಂಡನಿಗೆ ಸ್ವಲ್ಪ ಬುದ್ಧಿ ಹೇಳು, ಅಲ್ಲಿ ನಿಂತು ಅವನು ಆ ತರಹ ಮಾತನಾಡುವುದು ಸರಿಯಲ್ಲ“. ಈಗ ಸುಸ್ತಾಗುವುದು ನನ್ನ ಸರದಿ.

“ನನ್ನ ಗಂಡ!! ರಮೇಶ್ ಅಲ್ಲಿಗೆ ಯಾಕೆ ಹೋದರು? ವಾಕಿಂಗ್ ಅಂತ ಆಕಡೆ ಹೋಗಿದ್ದರೂ, ನೀಳಾದೇವಿಯವರಿಗೆ ಏನು ಮಾತನಾಡಿದರು? ಯಾಕೆ ಮಾತನಾಡಿದರು? ನನಗೆ ಗಲಿಬಿಲಿ!! ಏನೂ ತಿಳಿಯದವಳಾದೆ, ಆಗ ನನ್ನ ಸಹಾಯಕ್ಕೆ ಬಂದಿದ್ದು ಮತ್ತೆ ನೀಳಾದೇವಿಯವರ ಮಾತೇ.

“ಅಷ್ಟು ಕೈ ತುಂಬಾ ಹಣ ಕೊಡ್ತೀನಿ, ಸಾಲದು ಅಂತಾನೆ..” ಸದ್ಯ!! ಅರ್ಥವಾಯಿತು, ಯಾರಿಗೋ ಮನೆ ಕೆಲಸದವರಿಗೆ ಫೋನು ಮಾಡುವ ಬದಲು ನನಗೆ ಕರೆ ಮಾಡಿದ್ದಾರೆ. ಆದರೆ ತಕ್ಷಣ ಅವರಿಗೆ ಹೇಳುವ ಧಾವಂತ ತೋರಲಿಲ್ಲ. ಕಾರಣ 91–92ರ ಆಸುಪಾಸಿನಲ್ಲಿರುವ ಲೇಖಕಿ, ಗಲಿಬಿಲಿಗೊಂಡಾರು ಎನ್ನುವ ಕಾಳಜಿ. ತಪ್ಪಿ ಯಾರಿಗೋ ಕರೆ ಮಾಡಿದ್ದೀರಿ ಎಂದು ಹೇಳುವುದು ಹೇಗೆ? ಅವರ ಮಾತು ಮುಗಿದ ಮೇಲೆ ನಾನೇ ನಿಧಾನವಾಗಿ “ನಾನು ರೇಣುಕಾ ಅಂತ, ಕರ್ನಾಟಕ ಲೇಖಕಿಯರ ಸಂಘದ ಪರವಾಗಿ ನಿಮ್ಮ ಮನೆಗೆ ಬಂದಿದ್ದೆ” ಅನ್ನುವಷ್ಟರಲ್ಲಿ,

“ನೀವು ರೇಣುಕಾ ದೇಸಾಯಿ ಅಲ್ವೇ?” ಅನ್ನುವದೇ!! ಅದೆಂತಹ ನೆನಪಿನ ಶಕ್ತಿ!! ಅವರು ನನ್ನ ಹೆಸರನ್ನು ಕರಾರುವಕ್ಕಾಗಿ ನೆನಪಿಟ್ಟುಕೊಂಡಿದ್ದರು!!

“ಹೌದು”, ನಾನಂದೆ.

“ಕ್ಷಮಿಸಿಯಮ್ಮ, ನಮ್ಮ ಮನೆಗೆಲಸದವಳ ಹೆಸರೂ ರೇಣುಕಾ, ಅವಳಿಗೆ ಕರೆ ಮಾಡಲು ಹೋಗಿ ನಿಮಗೆ ಬಂದಿದೆ.”

“ಇರಲಿ ಬಿಡಿ ಮೇಡಂ, ನನ್ನದು ಅದೃಷ್ಟ, ನಿಮ್ಮಂಥ ಪ್ರಸಿದ್ಧರು ಅದೂ ಜನೇವರಿ ಒಂದರಂದು ನನಗೆ ಕರೆ ಮಾಡಿ ಮಾತನಾಡಿದಂತಾಯ್ತು. ಹೇಗಿದ್ದೀರಿ?”

“ಚೆನ್ನಾಗಿ ಇರುವೆಯಮ್ಮ”

“ಮೊನ್ನೆ ನುಗ್ಗೆಹಳ್ಳಿ ಪಂಕಜಾ ಅವರನ್ನು ಕಾಣಲು ಹೋಗಿದ್ದೆ. ಇಲ್ಲೇ ವೈಷ್ಣವಿ ಮೆಡಿಕೇರ್ ಟ್ರಸ್ಟ್‌ನಲ್ಲಿದ್ದಾರೆ. ಆಗ ನಿಮ್ಮ ಮಾತು ಬಂತು, ಅವರದ್ದು ಹಿರಿಯ ಲೇಖಕಿಯರ ಸಾಹಿತ್ಯ ಮಂಥನ ಕಾರ್ಯಕ್ರಮ ಮಾಡಿದ್ದೆವು. ಅದನ್ನೂ, ನಿಮ್ಮದನ್ನೂ ನೆನಪಿಸಿಕೊಂಡೆವು.”

“ಹೌದು, ಅವಳ ಕಾರ್ಯಕ್ರಮ ಶೇಷಾದ್ರಿಪುರಂ ಕಾಲೇಜಿನಲ್ಲಾಯಿತು, ನನ್ನ ಸರದಿ ಬರುವಷ್ಟರಲ್ಲಿ ಕೋವಿಡ್ ಬಂದು ವೆಬಿನಾರ್‌ನಲ್ಲಿ ಮಾಡಬೇಕಾಯಿತು. ಅಬ್ಬಾ!! ಎಷ್ಟು ಕರಾರುವಕ್ಕಾಗಿ ನೆನಪಿಟ್ಟುಕೊಂಡಿದ್ದಾರೆ!

“ಒಂದೆರಡು ತಿಂಗಳ ಹಿಂದೆ ಕುಲಶೇಖರಿ (ಇವರು ಹೆಸರು ಮಾಡಿದ ಲೇಖಕಿ) ತನ್ನ ಮಗನ ಜೊತೆ ಕಾರಲ್ಲಿ ಬಂದಿದ್ದು, ನನ್ನನ್ನು ಕರೆದುಕೊಂಡು ಪಂಕಜಾಳನ್ನು ನೋಡಲು ಹೋದೆವು. ಇಲ್ಲೇ ಸಮೀಪವಿದ್ದರೂ ನಾನೇ ನಾನು ಹೋಗಲಾರೆ, ವಾಹನಗಳ ದಟ್ಟಣೆ ಬಹಳ, ರಸ್ತೆಯ ಮೇಲೆ ಹೋಗಲು ಭಯ ಬರುತ್ತೆ ರೇಣುಕಾ, ಆಗಲೇ 92

ವರ್ಷ ಆಯ್ತು, ನಾವಾಗ 14 ಜನ ಗೆಳತಿಯರ ಗುಂಪು ಬೆಂಗಳೂರಿನಲ್ಲಿ ಇತ್ತು, ಎಲ್ಲರೂ 'ಫೇಮಸ್ ಫೋರ್ಟೀನ್' ಎಂದು ಕರೆಯುತ್ತಿದ್ದರು. ಅದರಲ್ಲಿ ಸುಮಾರು ಎಂಟು ಜನ ಮಲ್ಲೇಶ್ವರಂನಲ್ಲಿಯೇ ಇದ್ದೆವು, ಎಲ್ಲಿಗೇ ಹೋದರೂ ಒಟ್ಟಿಗೇ ಹೋಗುತ್ತಿದ್ದೆವು. ಸುನಂದಮ್ಮ, ಶಾಂತ ನಾಗರಾಜ್, ಕುಲಶೇಖರಿ, ನೀಳಾದೇವಿ, ನಿರುಪಮಾ, ಹೇಮಲತಾ... ಈಗ ನೋಡಿದರೆ ನಾವು ಒಂದೆರಡು ಜನ ಉಳಿದುಕೊಂಡಿದ್ದೇವೆ." ಅವರ ಮಾತಲ್ಲಿ ವಿಷಾದವೇನೂ ಇರಲಿಲ್ಲ, ಸಹಜವಾಗಿಯೇ ಹೇಳಿದರು. ಆದರೆ ನನಗೇ ಒಂದು ತರಹವಾಗಿ ಮಾತಿನ ಜಾಡು ಬದಲಿಸಿದೆ.

"ಮೇಡಂ, ಲೇಖಕಿಯರ ಸಂಘದ ಚುನಾವಣೆ ಇದ್ದಾಗ ನಾನು ಮತ್ತು ಅಂದಿನ ಅಧ್ಯಕ್ಷರಾದ ವನಮಾಲ ಸಂಪನ್ನ ಕುಮಾರ್ ಅವರೊಂದಿಗೆ ನಿಮ್ಮ ಮನೆಗೆ ಬಂದಿದ್ದಾಗ ನೀವು ಹಾಸನದ ರಾಜಾರಾವ್ ಅವರ ಇಂಗ್ಲಿಷ್ ಪುಸ್ತಕ ತುರ್ಜಮೆ ಮಾಡುತ್ತಿರುವ ವಿಷಯ ಹೇಳಿದ್ದಿರಿ, ಎಲ್ಲಿಗೆ ಬಂದಿದೆ?" ತಕ್ಷಣ ಲೇಖಕಿ ಉತ್ಸಾಹಭರಿತರಾದರು.

"ಹೂ ಕಣಮ್ಮ ರೇಣುಕಾ, ಭಾವಾನುವಾದ ಮಾಡಿ ರೆಡಿ ಇಟ್ಟಿದ್ದೇನೆ. ನನ್ನ ಎಲ್ಲಾ ಕಾದಂಬರಿ ಪ್ರಕಾಶನ ಮಾಡಿದ ನನ್ನ ಪ್ರಕಾಶಕರು ಈ ಪುಸ್ತಕ ಹೊರತರಲು ಮತ್ತು ಲೇಖಕರ ಒಪ್ಪಿಗೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ನಾಳೆ ಯಾವುದೇ ಕಾನೂನು ತೊಡಕು ಬರಬಾರದಲ್ಲ."

"ಆ ಪುಸ್ತಕದ ಬಗೆಗೆ ಸ್ವಲ್ಪ ಹೇಳಿ ಮೇಡಂ". 92 ವರ್ಷ ಹರೆಯದ ಲೇಖಕಿ ಪಟಪಟ ಅಂತ ಹೇಳತೊಡಗಿದರು. ಹಾಸನದ ರಾಜಾರಾವ್ ಅಂತ ಲೇಖಕರ ಹೆಸರು. ಅವರ ಪುಸ್ತಕ ಇಂಗ್ಲೀಷಿನಲ್ಲಿದೆ ಮತ್ತು ಜಗತ್ಪ್ರಸಿದ್ಧಿ ಪಡೆದಿದೆ. ಅದರ ಹೆಸರು 'ಕಾಂತಪುರ'"

"ಅವರು ಕನ್ನಡದವರೇ?" ನನಗೆ ಜಗತ್ಪ್ರಸಿದ್ಧಿ ಪಡೆದಿದೆ 'ಕಾಂತಾಪುರ' ಕೃತಿ ಎಂದುದಕ್ಕೆ ಸಂತೋಷ, ಹೆಮ್ಮೆ, ಜೊತೆಗೆ ಆಶ್ಚರ್ಯ.

"ಹೌದು, ಅದು ಸುಮಾರು 80 ವರ್ಷದಷ್ಟು ಹಳೆಯದಾದ ಕೃತಿ. ಸುಮಾರು 40 ವರ್ಷಗಳ ಹಿಂದೆ ಇಂಟರ್ ಮಿಡಿಯೆಟ್‌ಗೆ ಟೆಕ್ಸ್ಟ್ ಬುಕ್ ಆಗಿತ್ತು. ಅವರ ಇನ್ನೊಂದು ಕೃತಿ, 'ಸರ್ಪೆಂಟ್ ಅಂಡ್ ದ ರೋಪ್'. ಅದು ಕೂಡ ಜಗತ್ಪ್ರಸಿದ್ಧವಾಗಿತ್ತು. ಅವರು ಕನ್ನಡದಲ್ಲಿ ಬರೆಯಲೇ ಇಲ್ಲ, ಬರೀ ಇಂಗ್ಲೀಷಿನಲ್ಲಿ ಬರೆದರು. ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಇಂಡಿಯನ್ ಫಿಲಾಸಫಿ ಪ್ರೊಫೆಸರ್ ಆಗಿದ್ದರು. ಇಂಡಿಯಾಕ್ಕೆ ಮರಳಿ ಬರಲೇ ಇಲ್ಲ. ಅಲ್ಲೇ ಫ್ರೆಂಚ್ ಮಹಿಳೆಯನ್ನು ಮದುವೆಯಾದರು, ಅವರು ಅಲ್ಲಿಯೇ ಕಳೆದು ಹೋದರು. ಇನ್ನು ಅವರ ಮಕ್ಕಳೂ ಅಷ್ಟೇ".

"ಅವರು ನಮ್ಮ ನೆಲದ ಮಣ್ಣಿನ ಬಗೆಗೆ ಬರೆದಿದ್ದಾರೆ, ಅದೇ ನೋಡಿ ಮಾತೃಭೂಮಿಯ ಮಮಕಾರ", ನನ್ನ ಅಭಿಮಾನ ನಾನು ವ್ಯಕ್ತಪಡಿಸಿದೆ.

"ನೀನು ಹೇಳುವುದು ನಿಜ, ಅವರು ಅಲ್ಲೇ ನೆಲೆಸಿದರೂ ನಮ್ಮ ದೇಶದ ಸರ್ಕಾರ ಅವರಿಗೆ 'ಪದ್ಮ ವಿಭೂಷಣ' ಪ್ರಶಸ್ತಿ ಕೊಟ್ಟು ಗೌರವಿಸಿತು".

"ಹಾಗಾದರೆ ನೀವು ತುರ್ಜುಮೆ ಮಾಡಿರುವ ಕೃತಿಗೆ ಹೆಸರೇನು ಇಟ್ಟಿರುವಿರಿ? ಯಾಕೆ ಆ ಕೃತಿಯನ್ನೇ ಆರಿಸಿಕೊಂಡಿರಿ?" ನಾನು ಒಂದೂವರೆ ವರ್ಷದ ಹಿಂದೆನೇ ಆ ಪುಸ್ತಕದ ವಿಶೇಷತೆ ಅವರ ಬಾಯಲ್ಲಿ ಕೇಳಿದ್ದೆ ಆದರೂ ಮತ್ತೊಮ್ಮೆ ಕೇಳಿ ಸಂತಸ ಪಡುವ ಆಸೆ.

"ನಾನು ಆ ಪುಸ್ತಕ ಅನುವಾದ ಮಾಡಿಲ್ಲ, ಭಾವಾನುವಾದ ಮಾಡಿರುವೆ. ಹೀಗಾಗಿ ನನ್ನ ಪುಸ್ತಕಕ್ಕೆ 'ಮರೆಯದಿರು ಕಾಂತಪುರ' ಎಂದು ಹೆಸರು ಇಟ್ಟಿರುವೆ. ಅದರಲ್ಲಿ ರಾಜಾರಾವ್ ಕರ್ನಾಟಕದ ಒಂದು ಹಳ್ಳಿಯ ಹೆಸರನ್ನು ಇಟ್ಟು ಸಮಗ್ರ ಸ್ವಾತಂತ್ರ್ಯ ಹೋರಾಟದ ಚಿತ್ರಣ ಕೊಟ್ಟಿದ್ದಾರೆ. ಅನೇಕ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಣ ಕೊಡುತ್ತಾ ಇಡೀ ಕರ್ನಾಟಕದ ಚಿತ್ರಣ ಕೊಟ್ಟಿದ್ದಾರೆ. ಕರ್ನಾಟಕದ ಜನತೆಗೆ ಕರ್ನಾಟಕದ ಬಗೆಗೆ ಅರಿಯಲು ತುಂಬಾ ವಿಶೇಷ ವಿವರಗಳಿವೆ. ಅದನ್ನು ಕರ್ನಾಟಕದ ಜನತೆ ಅರಿಯಲೇಬೇಕು. ಆದರೆ ಕೃತಿ ಇಂಗ್ಲೀಷ್‌ನಲ್ಲಿ ಇರುವುದರಿಂದ ಅದು ಕನ್ನಡಿಗರಿಗೆ ತಲುಪಿಲ್ಲ, ಹೀಗಾಗಿ ಕನ್ನಡಕ್ಕೆ ಅನುವಾದ ಮಾಡಿ, ಆಗಿನ ಕನ್ನಡ ನಾಡಿನ ವರ್ಣನೆ ಕನ್ನಡಿಗರಿಗೆ ತಿಳಿಸಬೇಕು ಎನ್ನುವ ಆಸೆ ಇತ್ತಿತ್ತಲಾಗಿ ಬಹಳ ಕಾಡಿತು, ಅದಕ್ಕೆ ಈ ಕೆಲಸ ತೆಗೆದುಕೊಂಡೆ."

"ಎಲ್ಲಾ ಕೆಲಸ ಮುಗಿದಿದ್ದರೆ ಬೇಗನೆ ಕೃತಿ ಲೋಕಾರ್ಪಣೆಯಾಗಲಿ, ತಡವೇಕೆ?"

"ಅಯ್ಯೋ!! ರಾಜಾರಾವ್ ತಮ್ಮ ಕೃತಿಗಳ ಕಾಪಿರೈಟ್ ಆಕ್ಸ್‌ಫರ್ಡ್ ಯೂನಿವರ್ಸಿಟಿಗೆ ಕೊಟ್ಟಿದ್ದಾರೆ. ಅವರ ಮಕ್ಕಳ್ಯಾರೂ ನಮ್ಮವರಾಗಿ ಉಳಿದಿಲ್ಲ. ನಮ್ಮ ನೆಲದ ಅಭಿಮಾನ ಇಲ್ಲವೇ ಇಲ್ಲ, ಹೀಗಾಗಿ ಅಲ್ಲಿಂದ ಕಾನೂನಿನ ಯಾವ ತೊಡಕು ಇರದಂತೆ ಒಪ್ಪಿಗೆ ಪಡೆಯಲು ನಮ್ಮ ಪ್ರಕಾಶಕರೇ ಪ್ರಯತ್ನ ಪಡುತ್ತಿದ್ದಾರೆ."

"ನಿಮಗೆ ಬೇಗನೆ ಪರವಾನಿಗೆ ಸಿಗಲಿ, ಬೇಗ ಪುಸ್ತಕ ಹೊರಬರಲಿ." ಅವರಿಗೆ ಸ್ವಲ್ಪ ವಿರಾಮ ಕೊಡಲು ಅವರ ಮಾತು ತುಂಡರಿಸಿದೆ.

"ರೇಣುಕಾ, ಊಟಕ್ಕೆ ಮಗಳು ಕರೆಯುತ್ತಿರುವಳು ಬರ್ತೀನಮ್ಮ, ನಿನಗೆ ಗೊತ್ತಲ್ಲ ಅವಳ ಸ್ವಭಾವ, ಅವಳು ಸಿಡಿಮಿಡಿ ಗೊಳ್ಳುತ್ತಿದ್ದಾಳೆ. ಯಾರೊಂದಿಗೂ ತುಂಬಾ ಹೊತ್ತು ನಾನು ಮಾತನಾಡಿ ಆಯಾಸ ಮಾಡಿಕೊಳ್ಳಬಾರದು ಎನ್ನುವ ಕಾಳಜಿ ಅವಳಿಗೆ".

"ಸರಿ, ಊಟಕ್ಕೆ ಹೋಗಿ ಮೇಡಂ" ಎಂದು ತಕ್ಷಣ ಕರೆಯನ್ನು ತುಂಡರಿಸಿದೆ.

ಅವರ ಮನೆಗೆ ಹೋದಾಗ ಅದು ಕೋವಿಡ್ ಉಚ್ಛ್ರಾಯ ಸ್ಥಿತಿ ಇದ್ದ ಕಾಲ, ಅವರ ಮಗಳು ಅವರ 'ಮೂಕ ರಾಗ' 'ಅನುರಾಧ' ಕಾದಂಬರಿಗಳ ನಾಯಕಿ, ಪ್ರೇರಕಿ ಕೂಡ, ಮೂಕರಾಗಿದ್ದುದರಿಂದ ತಾಯಿಯೊಂದಿಗೆ ಬಾಂಧವ್ಯ ಬಹಳ. ಹೀಗಾಗಿ ಯಾರಾದರೂ ಬಂದು ತಾಯಿಯೊಂದಿಗೆ ಇದ್ದರೆ ಅವರಿಗೆ ಕೋವಿಡ್ ಬಂದರೆ ಎನ್ನುವ ಕಾಳಜಿಯಿಂದ ನನ್ನೊಂದಿಗೆ ತುಂಬಾ ಕಠೋರವಾಗಿ ನಡೆದುಕೊಂಡರು. ಸರಿಸುಮಾರು ಎರಡೂವರೆ ತಾಸಿನ ಕಾರ್ಯಕ್ರಮ. ಅಮ್ಮನಿಗೆ ಈ ಹೊಸ ವೇದಿಕೆಯಲ್ಲಿ ತನ್ನದೆಲ್ಲ ಕೃತಿಗಳ ಸಾಹಿತ್ಯ ಮಂಥನ ನಡೆಯುವುದನ್ನು ಗಮನವಿಟ್ಟು ಆಲಿಸುವ ಆಸೆ. ನಾನು ಸಹಾಯ ಮಾಡಲು ಲ್ಯಾಪ್‌ಟಾಪ್ ತೆಗೆದುಕೊಂಡು ಅವರ ಅಮ್ಮನ ಹತ್ತಿರ ಹೋದರೆ ಮಗಳು ಸಿಡಿದು ಬೀಳುವುದು. ಅಂದು ಅಲ್ಲಿ ಆದ ಘಟನೆ ವಿವರವಾಗಿ ಬರೆದರೆ ಅದೇ ಒಂದು ದೊಡ್ಡ ಕಥೆ ಆಗುತ್ತದೆ. ಆದರೆ ಒಂದು ವಿಶೇಷ, ಮಾತು ಬಾರದ ಮಗಳನ್ನು ತುಂಬಾ ಕಾಳಜಿಯಿಂದ ಬೆಳೆಸಿದ ಲೇಖಕಿ, ಅವಳಿಗೆ ವಿದ್ಯೆ ಕಲಿಸಿ ಕೆನರಾ ಬ್ಯಾಂಕಿನಲ್ಲಿ ಅಧಿಕಾರಿ ಆಗುವಂತೆ ಮಾಡಿ ಸಾಧನೆಗೈದ ನಮ್ಮ ಹೆಮ್ಮೆಯ ಲೇಖಕಿ ನೀಳಾದೇವಿಗೆ ನನ್ನ ನಮನಗಳು.

***

ಅಭಿನಾ ಜಾವೋ ಛೋಡಕರ - ಹೋಗದಿರೀಗಲೇ ನೀ ಬಿಟ್ಟೆನ್ನನು

– ವೆಂಕಟೇಶ ಕಾಮತ್

ಅಭಿನಾಜಾವೋ ಚೋಡಕೆ ಏ ದಿಲ್ ಅಭಿ ಭರಾ ನಹಿ...
ಚಲನಚಿತ್ರ ಹಮ್ ದೋನೋ.. 1961 – ಗೀತರಚನೆ: ಸಾಹಿರ್ ಲುಧಿಯಾನ್ವಿ ಸಂಗೀತ: ಜಯದೇವ
ಹಾಡಿದವರು: ಮೊಹಮ್ಮದ್ ರಫಿ ಹಾಗು ಆಶಾ ಭೋಸ್ಲೇ – ರಾಗ: ಯಮನ್
ಚಿತ್ರೀಕರಣ ಕಲಾವಿದರು: ದೇವ್ ಆನಂದ್ ಹಾಗೂ ಸಾಧನ

ಈ ಹಾಡು ಸಾಹಿರ್ ಬರೆದ ಒಂದು ಮಧುರ ಅಮರ ಪ್ರೇಮಗೀತೆ – ಒಂದು ಸನ್ನಿವೇಶದಲ್ಲಿ ಚಿತ್ರದ ನಾಯಕ ನಾಯಕಿಯ ಭೇಟಿ ಮುಗಿದು, ನಾಯಕಿ ಹೋಗುವೆ ಹೋಗುವೆ ಎಂದಾಗ ನಾಯಕ ಅವಳ ಹೋಗಬಿಡದೆ ಇನ್ನೂ ಇನ್ನೂ ಸ್ವಲ್ಪ ಸಮಯ ಇರು ಎಂದು..., ಏತಕ್ಕಾಗಿ ನೀನಿರಬೇಕು ಎಂಬ ಕಾರಣಗಳನ್ನು ಕೊಡುವುದೇ ಗೀತೆಯ ಸಾರಾಂಶ.

ಪ್ರೀತಿ, ಒಲವು, ಪ್ರೇಮ, ಗೆಳೆತನ, ಬಂಧನ, ಒಟ್ಟಿಗೆ ಕಳೆದ ಸಮಯ, ಮಾತೋ, ಅಪ್ಪುಗೆಯೋ, ಮೌನವೋ ಒಟ್ಟಿಗೆ ಕಳೆದದ್ದೇ ಉಳದದ್ದು ನೆನಪಲ್ಲಿ ... ಹೋಗುವಾಗ ಇನ್ನೊಂದೈದು ನಿಮಿಷ ಇರು ಎಂದೇ ಹೊರಬರುವುದು ಮಾತು.. ನಾಯಕ ಹೇಳುತ್ತಾನೆ:
ಅಭಿನಾ ಜಾವೋ ಛೋಡಕರ್ ಏ ದಿಲ್ ಅಭೀ ಭರಾ ನಹೀ..
ಹೋಗದಿರೀಗಲೇ ನೀ ಬಿಟ್ಟೆನ್ನನು.. ಹೇಳಲು.. ಕೇಳಲು ಉಳದಿದೆ..

ನಾಯಕಿ ಉತ್ತರಿಸುತ್ತಾಳೆ:
ಯಹಿ ಕಹೋಗೆ ತುಮ್ ಸದಾ ಕೆ ದಿಲ್ ಅಭೀ ನಹೀ ಭರಾ_
ಹೇಳುವೆ ನೀನು ಪದೇ ಪದೇ, ಮಾತು ಬಹಳ ಉಳದಿದೆ..

ಹೇಳಲಿದೇ ಕೇಳಲಿದೇ ಮಾತು ಬಹಳ ಉಳದಿದೆ
ಹೋಗದಿರು ನೀನೀಗಲೆ ಹೇಳಲು ಕೇಳಲು ಇನ್ನೂ ಇದೆ_

ನಾವು ಎಲ್ಲರೂ ಬೇರೆ ಬೇರೆ ಸ್ಥಳ, ಸಮಯ, ಕುಟುಂಬ ಪರಿಸರಗಳಲ್ಲಿ ಹುಟ್ಟಿ ಬೆಳೆಯುತ್ತಿದಂತೆ ವಿಧಿ ನಮ್ಮನ್ನು ಒಂದಾಗಿಸುತ್ತದೆ. ಗಂಡ, ಹೆಂಡತಿ, ಮಕ್ಕಳು, ಗೆಳೆಯರು–ಹೀಗೆ ಸಂಬಂಧಗಳು ರೂಪುಗೊಳ್ಳುತ್ತವೆ. ಸಂಬಂಧಗಳೊಡನೆ ಜವಾಬ್ದಾರಿಗಳು, ಅವಲಂಬನೆ, ಅನ್ಯೋನ್ಯತೆ, ಕಾಳಜಿ ಒಂದೊಂದೇ ಕೂಡಿಕೊಂಡು ಸಂಸಾರವನ್ನು ರಸಮಯವಾಗಿಸುತ್ತವೆ. ಹುಟ್ಟುಹಬ್ಬಗಳು, ವಾರ್ಷಿಕೋತ್ಸವಗಳು, ಮದುವೆ, ಮುಂಜಿಗಳು ವರ್ಷವಿಡೀ ಒಂದಾದರೊಂದು ಕಾರ್ಯಕ್ರಮಗಳು. ವರುಷಗಳು ನಿಮಿಷಗಳಂತೆ ಕಳೆದು ಬೇಡದ ವೃದ್ಧಾಪ್ಯ ಬಾಗಿಲು ತಟ್ಟದೇ ಒಳಬಂದದ್ದು ತಿಳಿಯುವುದೇ ಇಲ್ಲ. ಇನ್ನು ಬಂತು ಎಲ್ಲರನ್ನೂ ಎಲ್ಲವನ್ನೂ ತೊರೆದು ಹೋಗಲೇಬೇಕಾದ ಸಮಯ. ಪುಟ್ಟ ಮಕ್ಕಳು ಅಜ್ಜಿಯ ಸೀರೆ, ಅಜ್ಜನ ಪ್ಯಾಂಟ್, ಪಂಚೆ ಗಟ್ಟಿ ಹಿಡಿದು 'ಹೋಗಬೇಡ ಅಜ್ಜಿ, ಹೋಗಬೇಡಾ ತಾತಾ..' ಎಂದು ಅಳುವಾಗ ಹಿಂದೆ ರೇಡಿಯೋದಲ್ಲಿ ಹಾಡು ಕೇಳಬರಬಹುದು

ಅಭಿನಾ ಜಾವೋ ಛೋಡಕರ್... ಹೇಳಲು ಕೇಳಲು ಉಳಿದಿದೆ...

ಶಾಲೆಗೆ ಹೋಗುವಾಗ ಏಳನೇ ತರಗತಿಯಲ್ಲಿ ಇದ್ದ ಒಂದು ಪಾಠ ಎಂದೂ ಮರೆಯದಂತದ್ದು. ಅದು ಗದ್ಯ ಪದ್ಯ ಮಿಶ್ರಿತ. ಹೆಸರು "ಸತಿಯೊಡನೆ ಸಹಗಮನ". ಮರೆಯದ ರೇಖಾಚಿತ್ರ ಪಠ್ಯ ಪುಸ್ತಕದ್ದು. ಪತಿ ಮಹದೇವರಾಯ ಕಟ್ಟೆಯ ಮೇಲಿಂದ ಉಕ್ಕಿ ಹರಿಯುತ್ತಿರುವ ಕೆರೆಗೆ ಜಿಗಿದಿದ್ದಾನೆ, ಸತ್ತ ತನ್ನ ಕಿರಿಯ ಪತ್ನಿ ಭಾಗೀರತಿಯನ್ನು ಸೇರಲು.. ಮರೆಯದು ಆತನ ಆ ಕೊನೆಯ ಸಾಲುಗಳು–

‘ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು;
ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು..
ಸಿಗಲಾರದ ಸತಿ ನೀನು.. ನನ ಬಿಟ್ಟು ಎಲ್ಲಿ ಹೋದೆ?,
ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟ್ಟುಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ"
ಇಟ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು, ಬಿಟ್ಟಾನು ಕಣ್ಣೀರು ಹಾರಿದ ಕೆರೆ ನೀರಾಗ...

ಈ ಜಾನಪದ ಗೀತೆ ಆಡು ನಾಟಕವಾಗಿದೆ, ಬೆಟಗೇರಿ ಕೃಷ್ಣಶರ್ಮರ ಸಂಗ್ರಹದಿಂದ. ತಾನು ಕಂಡ ಕೋಲಾಟದಿಂದ ಆಡುಭಾಷೆಯ ಹಾಡನ್ನು ಜನತೆಗೆ ಇತ್ತ ಶ್ರೇಯ ಶರ್ಮರದ್ದು.

ವರ್ಷ ವರುಷ ವೊಟ್ಟಿಗೆ ಬಾಳಬಹುದು ಆದರೆ ಅಗಲುವಿಕೆ ಅನಿವಾರ್ಯ, ಒಬ್ಬರು ಮುಂದೆ ಒಬ್ಬರು ಹಿಂದೆ ಇದು ಪ್ರಪಂಚದ ನಿಯಮ.. ಹೋಗುವ ಸುಳಿವು ಸಿಕ್ಕಾಗ ಮನಸ್ಸು ಹೃದಯ ಹಾಡುತ್ತದೆ.

"ಅಭಿನಾ ಜಾವೋ ಛೋಡಕರ್ ಏ ದಿಲ್ ಅಭೀ ಭರಾ ನಹೀ..
ಹೋಗದಿರೀಗಲೇ ನೀ ಬಿಟ್ಟೆನ್ನನು.. ಹೇಳಲಿದೆ... ಕೇಳಲಿದೆ..

ಹೇಳುವೆ ನೀನು ಪದೇ ಪದೇ ಮಾತು ಬಹಳ ಉಳಿದಿದೆ...

ಹೋದವರೆಲ್ಲಾ ಎಲ್ಲಿ ಹೋಗುತ್ತಾರೆ. ಅಲ್ಲಲ್ಲಿ ನಿರ್ಜೀವ ವಸ್ತುಗಳಲ್ಲಿ, ಪ್ರತಿ ಮೂಲೆಮೂಲೆಯಲ್ಲಿ ಅವರ ನೆನಪು ಜೀವಂತವಿರುತ್ತದೆ. ಅತ್ತು ಕರೆದರೂ ಮರಳಿಬಾರರು

ಪರಮಹಂಸ ಯೋಗಾನಂದ ತಮ್ಮ ಲಘು ಪುಸ್ತಿಕೆ "ವೇರ್ ಆರ್ ಅವರ್ ಡಿಪಾರ್ಟಡ್ ಲವ್ಡ್ ವನ್ಸ್" ನಲ್ಲಿ ಹೀಗೆ ಉಪದೇಶಿಸುತ್ತಾರೆ.

"ನಿಮ್ಮನ್ನಗಲಿದ ಪ್ರೀತಿಪಾತ್ರರಿಗಾಗಿ ಅವರ ತುಂಬಲಾರದ ನಷ್ಟಕ್ಕೆ ಮರುಗುವುದು, ಕಣ್ಣೀರ ಕೋಡಿ ಹರಿಸುವುದರ ಬದಲು ನಿಮ್ಮ ಪ್ರೀತಿಯನ್ನು ಅವರಿಗೆ ತಲುಪಿಸಿ. ಇದರಿಂದ ಅವರ ಆತ್ಮದ ಮುಂದಿನ ಪಯಣಕ್ಕೆ ನೀವು ಅನವುಮಾಡಿದಂತೆ ಮತ್ತು ಇದರಿಂದ ಮುಂದೆ ಅವರು ನಿಮಗೆ ಸಹಾಯಮಾಡಲು ಆಗಬಹುದು. ನಿಮ್ಮ

ಸ್ವಾರ್ಥಪೂರ್ಣ ಆಕರ್ಷಣೆ ಮತ್ತು ದುಃಖದ ಭಾರಗಳಿಂದ ಮೇಲೆ ಮೇಲೆ ದಿಗಂತದತ್ತ ಹಾರುತ್ತಿರುವ ಅವರ ದಿವ್ಯಾತ್ಮವನ್ನು ಜಗ್ಗದಿರಿ.."

ಅಗಲಿದ ಅವನು ಯಾ ಅವಳು ಜೀವಮಾನ ಪೂರ್ತಿ ತನ್ನ ಸಂಗಾತಿಯ ಒಂದು ಮುಗುಳ್ನಗೆ. ಒಂದು ಮಂದಹಾಸ, ಬೆಳಗಿನ ಒಂದು ಬಿಸಿ ಕಾಫಿ, ಮಾತ್ರೆ ಔಷಧಿಗಳು, ಊಟ ತಿಂಡಿ, ರಾತ್ರಿಯ ಒಂದು ಲೋಟ ಹಾಲಿನವರೆಗೆ ಕಾಳಜಿ ವಹಿಸಿ ಗಂಡ ಹೆಂಡತಿ ತಮ್ಮ ಸಹಚರಿ ನಿತ್ಯ ಗೊರಕೆ ಹೊಡೆಯುತ್ತಾ ಮಲಗುವವರಾದರೆ ಒಂದೆರಡು ದಿನ ಗೊರಕೆ ಹೊಡೆಯದಿದ್ದರೆ, ಆರಾಮಾಯಿತು ನಾ ಚೆನ್ನಾಗಿ ನಿದ್ದೆ ಮಾಡ್ತೇನೆ ಅನ್ನುವವರಿಗಿಂತ, ಛೆ! ದಿನಾ ಹಿಡಿ ಕೆಲಸಮಾಡಿ ಅದು ಇದು ಅಂತಾ ಶ್ರಮಪಡ್ತಾರೆ. ಸರಿ ನಿದ್ದೆ ಬರಲಿಲ್ಲವೋ ಏನೋ ಎಂದು ಸಂಗಾತಿ ಬಗ್ಗೆ ಕಾಳಜಿ ಇರುವವರು ಬಹಳ.

ಇಂತಹ ಸದಾ ಪ್ರೀತಿಸುವವರ ಬಗ್ಗೆ ಕಾಳಜಿ ಇರುವ ಒಂದು ಜೀವ ಮನಸ್ಸಿಲ್ಲದೆ ವಿಧಿವಶಾತ್ ಬಿಟ್ಟು ಹೋದಾಗ ಅವರ ಆತ್ಮ ಅತೃಪ್ತವಾಗಿ ನಮ್ಮ ಸುತ್ತಲೇ ಎಲ್ಲೊ ಇರಬಹುದು, ಇಲ್ಲವೇ ಮೇಲಿಂದ ನಮ್ಮನ್ನೆಲ್ಲಾ ನೋಡುತ್ತಿರಬಹುದು. ಅವರ ಸಾವು ನೋವು, ಕೆಲದಿನಗಳು ನಾವು ಕಂಗೆಟ್ಟು ವೈರಾಗ್ಯದಿಂದ ಎಲ್ಲ ತ್ಯಜಿಸಿ ಕುಳಿತರೆ ಅವರ ಆತ್ಮಕ್ಕೆ ಶಾಂತಿ ಖಂಡಿತ ಸಿಗದು. ಅವರ ಯಾವುದೇ ತೀರದ ಆಸೆ ಇದ್ದಲ್ಲಿ ಅವರಿಗಾಗಿ ಅದನ್ನು ಮಾಡಿ ಆನಂದಿಸಿ. ಮಕ್ಕಳಿಗೆ ಅನಿವಾರ್ಯ ಪರಿಸ್ಥಿತಿಯ ಅತೀವ ದುಃಖವನ್ನು ದ್ವಿಗುಣ ಪ್ರೀತಿಯಿಂದ ನಾನು ಇನ್ನೂ ಇದ್ದೇನೆ, ಅವರ ಪಾಲಿನ ಪ್ರೀತಿಯನ್ನು ನಾ ನಿಮಗೆ ಕೊಡುವೆ.. ಅತ್ತು ಕರೆದು ಅತ್ತ ಹೋದವರ ಆತ್ಮಕ್ಕೆ ದುಃಖ ಕೊಡುವುದು ಸರಿಯಲ್ಲ.. ಎಂದು ಸಮಾಧಾನ ಮಾಡುವುದು ಅಗತ್ಯ.

ಕಾಲ ಬಹಳ.. ಬಹಳ ಬದಲಾಗಿದೆ. ಇಂದು ಸೀನಿಯರ್ ಸಿಟಿಜನ್ ಜೀವನ ಕಷ್ಟ ಪೂರ್ಣ. ಬಹಳ ಜನರ ಮಕ್ಕಳು ವಿದೇಶಗಳಲ್ಲಿ ಇಲ್ಲವೇ ದೇಶದಲ್ಲೇ ದೂರದ ಊರುಗಳಲ್ಲಿ ಅಥವಾ ಅದೇ ಊರಿನಲ್ಲೇ ಇದ್ದರೂ ದೂರದ ಬೇರೊಂದು ಬಡಾವಣೆಯಲ್ಲಿರುವುದು ಸರ್ವೇ ಸಾಮಾನ್ಯ. ಜನರು 'ಸ್ಪೇಸ್' ಎಂಬ ಶಬ್ದವನ್ನು ಬಹಳ ಉಪಯೋಗಿಸುತ್ತಾರೆ. "ಐ ವಾಂಟ್ ಮೈ ಓನ್ ಸ್ಪೇಸ್" ಇಂದಿನ ಮಂತ್ರ.

ಹೆಂಡತಿ ಗಂಡನಿಗೆ, ಗಂಡ ಹೆಂಡತಿಗೆ, 'ನಿಮಗೆ ಯಾರ್ ಜೊತೆನೂ ಆಗೋಲ್ಲ.. ನಾನು ಕಟ್ಟಿಕೊಂಡ ಕರ್ಮಕ್ಕೆ ನಿಭಾಯಿಸ್ತೀನಿ' ಅಂದು ಗೊಣಗುತ್ತಿರುವುದು ಎಲ್ಲೆಡೆ ಕೇಳಬರುತ್ತದೆ.

ಹಿಂದೆ ಗಂಡನ ದೀರ್ಘಾಯಸ್ಸು, ಸುಮಂಗಲಿ ಸಾವನ್ನು ಬಯಸುತ್ತಿದ್ದ, ಬೇಡುತ್ತಿದ್ದ ಹೆಂಗಸು ಈಗ ತಾನೇನಾದರೂ ವಿಧಿವಶಾತ್ ಹೋದಲ್ಲಿ ಒಂಟಿ ಆಗುವ ಪಾಪದ ತನ್ನ ಗಂಡನ ಸೇವೆ ಕೊನೆಯವರೆಗೂ ಮಾಡಲು ನನಗಿಂತ ಮೊದಲು ಇವರೇ ಹೋಗಲಿ, ಇವರಿಗೆ ಯಾರೊಡನೆಯೂ ಆಗಿಬರೋದಿಲ್ಲಾ ಎಂದು ಮನಸ್ಸಲ್ಲೇ ಬೇಡುವ ಬಹಳ ಹೆಂಗಸರನ್ನು ನಾ ಕಂಡಿದ್ದೇನೆ. ಹಾಗೆಯೇ ಕೆಲವೆಡೆ ಕಾಯಿಲೆಯಿಂದ ಬಳಲಿ ತಡೆಯಲಾರದ ನೋವಿನಿಂದ ನರಳುವ ಸಂಗಾತಿಯ ಸಾವಿಗೆ ಪ್ರಾರ್ಥಿಸುವವರು ಬಹಳ.

ಜವಾಬ್ದಾರಿಗಳ ಹೊತ್ತ ಗಂಡಸು, ತಾನು ಮಾಡಿರುವುದು ಕಡಿಮೆ, ಮಾಡಲಿರುವುದು ಇನ್ನೂ ಬಹಳ ಇದೆ ಎಂದು ಸಮಯಕ್ಕಾಗಿ ತಡಕಾಡುವ ಕೆಲ ಮುದುಕರಿಗೆ ಸಂಗಾತಿಯ ಮದ್ದಿಲ್ಲದ, ಗುಣವಾಗದ ಕಾಯಿಲೆಗಳು ಒಂದು ಅಡಚಣೆ. ಒಮ್ಮೆ ಸಂಗಾತಿ ಹೋದೊಡನೆ ಎಲ್ಲಿಲ್ಲದ ಶಾಂತಿ.

ಅಭಿ ನಾ ಜಾವೋ ಛೋಡಕರ್ ಎನ್ನುತಿದ್ದವನು ಈಗ ಸ್ವಲ್ಪ ದಿನ ನನ್ನ ಕಾಟ ಇಲ್ಲದೆ ನೆಮ್ಮದಿ ಇಂದ ಇರು ನೀ ಅಲ್ಲಿ, ಬರುವೆ ನಾನು ಬೇಗನೆ ಅಲ್ಲಿಗೆ, ಒಂದಿನಿತು ಕೆಲಸಗಳ ಮುಗಿಸಿ... ಅನ್ನುತ್ತಾನೆ.

ಸಂಗಾತಿಯೊಂದಿಗೆ ಕಳೆಯುವ ಸಮಯ ಸ್ವರ್ಗಸುಖಕ್ಕೆ ಕಡಿಮೆ ಇಲ್ಲಾ. ಜೊತೆಯಿದ್ದಾಗ 'ಹಾಲು ಜೇನು' ಚಿತ್ರದ ಚಿ. ಉದಯಶಂಕರ್ ಬರೆದಿರುವ, ಜಿ.ಕೆ.ವೆಂಕಟೇಶ್ ಸಂಗೀತಕ್ಕೆ ಡಾ.ರಾಜಕುಮಾರ್ ಅವರು ಅತಿ ಸುಂದರವಾಗಿ ಹಾಡಿದ ಹಾಲು ಜೇನು.. ಹಾಡಿನ ನಾಲ್ಕು ಪಂಕ್ತಿಗಳೊಂದಿಗೆ, ಮೆಚ್ಚಿನ ಸಂಗಾತಿಯನ್ನು ಹೇಗೆ ನೋಡಿಕೊಳ್ಳಬೇಕು ಎಂಬ ಮಾತಿನೊಂದಿಗೆ ಎಲ್ಲರೂ ಜೊತೆ ಜೊತೆಯಲಿ ಸಂತೋಷದಿಂದ ಇರುವಂತೆ ಆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿ ಹಾಡಿನ ಸಾಲಿನೊಂದಿಗೆ ಮುಗಿಸುತ್ತಿದ್ದೇನೆ.

ಬಿಸಿಲಾಗಲಿ, ಮಳೆಯಾಗಲಿ, ನೆರಳಾಗಿ ನಾನು ಬರುವೆನು ಜೊತೆಗೆ
ಸವಿಮಾತಲಿ ಸುಖನೀಡುವೆ, ಎಂದೆಂದಿಗೂ ಹೀಗೆ
ಹೂವಾಗಲಿ ಈ ಮೊಗವರಳಿ, ಸಂತೋಷದ ಪರಿಮಳ ಚೆಲ್ಲಿ
ಹಾಯಾಗಿರೂ...

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: ಛಿಧಿಛಿ954@ಡಚಿಟ.ಛಿಡ

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 220 ನಡೆದ ದಿನಾಂಕ: 16 ಡಿಸೆಂಬರ್ 2023
ಸಂಚಿಕೆಯ ಬಿಡುಗಡೆ ದಿನಾಂಕ: 10 ಫೆಬ್ರವರಿ 2024 – ಶನಿವಾರ

ಸಾಹಿತ್ಯ ದಾಸೋಹ 221

ಅಧ್ಯಕ್ಷೀಯ ನುಡಿಗಳು

– ಶೀಲಾ ಅರಕಲಗೂಡು

ಎಲ್ಲರಿಗೂ ನಮಸ್ಕಾರ. ಸಮನ್ವಯ ಸಮಿತಿ ಕನ್ನಡವೇ ಸತ್ಯ ಎನ್ನುವ ನನ್ನ ಅತ್ಯಂತ ಪ್ರೀತಿಯ ಈ ವೇದಿಕೆಗೆ ನಮೋ ನಮಃ.

ಬಹುಶಃ ನಾನು ಎಂದೆಂದೂ ನಿರೀಕ್ಷಿಸಿರದ ಹಾಗೂ ಅದಕ್ಕೆ ತಕ್ಕವಳು ಎಂದು ಭಾವಿಸದ, ಸಾಹಿತ್ಯ ದಾಸೋಹದ ಅಧ್ಯಕ್ಷ ಸ್ಥಾನದಲ್ಲಿ ನಾನಿಂದು ಕುಳಿತಿರುವುದು ನನಗೇ ಆಶ್ಚರ್ಯವೆನಿಸುತ್ತಿದೆ. ಇದಕ್ಕೆ ಕಾರಣ, ನನ್ನ ಅರ್ಹತೆಗಿಂತಲೂ, ಸದಸ್ಯರ, ಅದರಲ್ಲೂ ಮುಖ್ಯವಾಗಿ ಸಂಚಾಲಕ ಸಮಿತಿ ಸದಸ್ಯರ ಪ್ರೇರಣೆ, ಪ್ರೋತ್ಸಾಹವೇ ಕಾರಣ ಎನ್ನುವುದು ಎಲ್ಲರಿಗೂ ಗೊತ್ತೇ ಇದೆ. ಈ ಅಧ್ಯಕ್ಷ ಸ್ಥಾನಕ್ಕಾಗಿ ನನ್ನನ್ನು ಮುಂಚೆಯೇ ಕೇಳಿಕೊಂಡಿದ್ದರೂ ನಾನು ಒಪ್ಪಿರಲಿಲ್ಲ. ಹಲವಾರು ಬಾರಿ ನಿರಾಕರಣೆ ಮಾಡಿದರೂ ಕೋಪಗೊಳ್ಳದೆ, ಬೇಸರಿಸದೆ ನನ್ನನ್ನು ಮೊದಲಿನಷ್ಟೇ ಪ್ರೀತಿಯಿಂದ ಕೇಳಿಕೊಂಡದ್ದು ಶ್ರೀಯುತ ಮಹಾಬಲ ಸರ್ ಅವರು. ಈ ಬಾರಿ, ಈ ಅವಕಾಶದಿಂದ ನಾನು ಕಲಿಯಬಹುದಾದ ಪಾಠವನ್ನು ಕಲಿಯಲಾಗದೆ ವಂಚಿತಳಾಗಬಹುದು ಎಂದುಕೊಂಡು ಒಪ್ಪಿಕೊಂಡೇಬಿಟ್ಟೆ. ನಿಜಕ್ಕೂ ಈ ಅನುಭವ ನನಗೆ ಆನಂದವನ್ನೇ ಕೊಟ್ಟಿದೆ. ಯಾವ ಒತ್ತಡವೂ ಆಗಲಿಲ್ಲ, ಕಷ್ಟ ತಿಳಿಯಲಿಲ್ಲ. ಇದಕ್ಕೆ ನಿಮ್ಮೆಲ್ಲರ ಹಾರೈಕೆಗಳೇ ಕಾರಣ ಎಂದು ತಿಳಿದಿದ್ದೇನೆ. ಮತ್ತೊಮ್ಮೆ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸುತ್ತಾ, ನನ್ನ ಮನಸ್ಸಿನ ಭಾವನೆಯನ್ನು ತೋರುವ ಒಂದು ಕವನದ ಮೂಲಕ ನನ್ನ ಕೃತಜ್ಞತಾ ಕಾಣಿಕೆಯನ್ನು ಸಲ್ಲಿಸುತ್ತೇನೆ.

ಕವನದ ಶೀರ್ಷಿಕೆ 'ಸಸಕಸವೆಂಬ ಬೆರಗಿನೇಣಿ'. ಕವನದ ವಾಚನದ ನಂತರ (ಕವನ ಮುಂದಿನ ಪುಟದಲ್ಲಿದೆ) ಎಲ್ಲರ ಪ್ರಸ್ತುತಿಗಳ ಬಗ್ಗೆ ನನಗೆ ತೋಚಿದ ಕೆಲ ಮಾತುಗಳನ್ನು ತಿಳಿಸುತ್ತೇನೆ. ಅದು ವಿಮರ್ಶೆ ಖಂಡಿತ ಅಲ್ಲ, ಅದು ನನ್ನ ಶಕ್ತಿಗೆ ಮೀರಿದ ವಿಷಯವೂ ಹೌದು. ಏನಾದರೂ ತಪ್ಪಾಗಿದ್ದಲ್ಲಿ ದಯವಿಟ್ಟು ಕ್ಷಮಿಸಿಬಿಡಿ. ನಿಮ್ಮೆಲ್ಲರ ಪ್ರಸ್ತುತಿಗಳು ನನಗೆ ಪಾಠ ಎಂದೇ ಎನಿಸಿತು. ಹಾಗಾಗಿ ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಸ್ವಾಗತ ಭಾಷಣದಲ್ಲಿ ನನ್ನ ಪರಿಚಯ ಮಾಡಿಕೊಟ್ಟ ಸುವರ್ಣಲಕ್ಷ್ಮಿಯವರಿಗೆ ಹಾಗೂ ಕಡೆಯಲ್ಲಿ ವಂದನಾರ್ಪಣೆ ಮಾಡಿದ ರೇಣುಕಾರವರಿಗೂ ಧನ್ಯವಾದಗಳು.

221 ನೇ ಸಾಹಿತ್ಯ ದಾಸೋಹದ ಪ್ರಸ್ತುತಿಗಳ ಬಗ್ಗೆ ನನ್ನ ಅನಿಸಿಕೆಗಳು:

ಇಂದಿನ ಸಾಹಿತ್ಯ ದಾಸೋಹದಲ್ಲಿ ಒಟ್ಟು 26 ಪ್ರಸ್ತುತಿಗಳಾಗಿದ್ದು, ಕವನಗಳು ಹಾಗೂ ಲೇಖನಗಳು ಸರಿ ಸುಮಾರು ಸಮಪಾಲು ಹಂಚಿಕೊಂಡಿವೆ. ಎಲ್ಲ ಪ್ರಸ್ತುತಿಗಳೂ ವೈವಿಧ್ಯಮಯವಾಗಿದ್ದು, ಗುಣಮಟ್ಟವನ್ನು ಕಾಯ್ದುಕೊಂಡಿವೆ. ಹಾಗಾಗಿ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಸಕಸವೆಂಬ ಬೆರಗಿನೇಣಿ

- -ಶೀಲಾ ಅರಕಲಗೂಡು

ಮಗುವನೆತ್ತಿ ಮೇಲೆ ತೂರಿ
ಹಿಡಿವರದನು ತಬ್ಬುತ
ಗಗನದೆತ್ತರಕ್ಕೆ ಏರಿ
ಬೆಳೆಯಲೆಂದು ಹರಸುತ

ಎಷ್ಟು ಪ್ರೀತಿ ಎಷ್ಟು ಮಮತೆ
ತೋರ್ವರಲ್ಲ ಹಿರಿಯರು
ಅವರ ಹರಕೆ ಪಡೆದು ಬೆಳೆದು
ಮರವಾಗಲಿ ಕಿರಿಯರು

ಅಡಿಪಾಯವು ಭದ್ರವಿರಲು
ಕಟ್ಟುವ ಮನೆ ಸುಂದರ
ಮುಸಲಧಾರೆ ಸುರಿದರಿಳೆಗೆ
ಪ್ರಕೃತಿಯದೋ ಬಂಧುರ

ಅಂತೆ ನನಗೆ ತೋರುತಿಹುದು
ಹಿರಿಯರಿಟ್ಟ ನಂಬಿಕೆ
ಸಾಹಿತ್ಯದ ಹರಕೆ ಇತ್ತು
ನಡೆಸುತಿಹರು ಮುಂದಕೆ

ಪಿಳ ಪಿಳ ಪಿಳ ಕಣ್ಣು ಬಿಟ್ಟು
ನೋಡುತಿರುವೆ ಬೆರಗಲಿ
ಕಾಣಬಹುದೆ ನಿತ್ಯ ಸತ್ಯ
ನನಗು ಒಮ್ಮೆ ಬಾಳಲಿ

ಆಳವುಂಟು ಅಗಲ ಉಂಟು
ಸಾಹಿತ್ಯದ ಮಹಿಮೆಗೆ
ಕಾಣಲದನು ಕಾಲವನ್ನು
ನೀಡಬೇಕು ತಿಳಿವಿಗೆ

ಏಣಿಯಂತೆ ತಾವು ನಿಂತು
ಹತ್ತಿಸಿಹರು ಮೇಲಕೆ
ಅಧ್ಯಕ್ಷತೆ ಪಟ್ಟ ಕಟ್ಟಿ
ಕೂರಿಸಿಹರು ಪೀಠಕೆ

ಸಾಹಿತ್ಯದ ಅರಿವು ಬಿತ್ತಿ
ಬೆಳೆಸುತಿಹುದು ವೇದಿಕೆ
ನಮನವಿದೋ ಸರ್ವರಿಗುಂ
ಇದುವೆ ನನ್ನ ಕಾಣಿಕೆ

***

1. ಕೋರಿಕೆ – ಸರಸ್ವತಿ ನಟರಾಜ್

'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು' ಎನ್ನುವ ಬಿ. ಎಂ. ಶ್ರೀ ಯವರ ಕವನದ ಧಾಟಿಯಲ್ಲಿ ಸಾಗುತ್ತದೆ. ಶ್ರೀಮತಿ ಸರಸ್ವತಿ ನಟರಾಜ್ ಅವರ ಕವನ 'ಕೋರಿಕೆ'.

ಕೈ ಹಿಡಿದು ಬರೆಸು ಎಂದು ಬೇಡುವ ಈ ಕವಿತೆಯಲ್ಲಿ ಭಾವ ಅದೆಷ್ಟು ಉತ್ಕಟತೆಯನ್ನು ಹೊಂದಿದೆ ಎಂದರೆ ಅದು ನಮ್ಮ ಮನದ ಮಾತು ಕೂಡ ಆಗಿಬಿಡುತ್ತದೆ. ಕವಿ ಹೃದಯ ಇಲ್ಲಿ ದ್ರವಿಸಿ ಶಾರದಾಂಬೆಯನ್ನು, ನನಗೆ ಐಶ್ವರ್ಯ ಬೇಡ, ಜ್ಞಾನ ಧಾರೆಯನ್ನು ಹರಿಸಿ ಕರುಣಿಸು ಎಂದು ಬೇಡುತ್ತಿದೆ. ನನ್ನದೇ ಭಾವಗಳನ್ನು ಸರಸ್ವತಿಯವರು ಕದ್ದು, ತಮ್ಮ ಕವನದ ಮೂಲಕ ಹೊರ ಸೂಸಿದ್ದಾರೆ ಎನಿಸಿತು ನನಗೆ. ತುಂಬಾ ಚೆನ್ನಾಗಿ ಕವನ ಬರೆದಿದ್ದೀರಿ ಸರಸ್ವತಿಯವರೇ. ಖಂಡಿತ ಶಾರದಾಂಬೆ ಹರಸುತ್ತಾಳೆ. ನಿಮ್ಮ ಕೋರಿಕೆ ಪೂರೈಸುತ್ತದೆ. ಇನ್ನಷ್ಟು ಉತ್ತಮ ಕವನಗಳು ಮುಂಬರುವ ದಿನಗಳಲ್ಲಿ ನಿಮ್ಮಿಂದ ನಮಗೆ ಸಿಗುತ್ತವೆ ಎಂಬ ಭರವಸೆ ನನಗೆ. ಅಭಿನಂದನೆಗಳು ನಿಮಗೆ.

2. ಒತ್ತೆ ಪುರಾಣ – ಕಮಲಾಕ್ಷಿ ಸಿ.ಆರ್.

ಶ್ರೀಮತಿ ಕಮಲಾಕ್ಷಿಯವರು ಒಂದು ಅಪರೂಪವೆನಿಸುವ ವಸ್ತುವಿನ ಬಗ್ಗೆ ಲೇಖನ ಬರೆದಿದ್ದಾರೆ. ಒತ್ತೆ ಇಡುವುದು ಇಂದು ಜನರಿಗೆ ಸಾಮಾನ್ಯ ವಿಷಯವೆನಿಸಿದೆ. ಆದರೆ ಈ ಒತ್ತೆ ಇಡುವ ಪದ್ಧತಿ ಬಹಳ ಹಿಂದಿನಿಂದಲೂ ಇತ್ತೆಂಬುದನ್ನು ಸಾಕ್ಷ್ಯಾಧಾರವಾಗಿ ತಿಳಿಸುತ್ತಾರೆ. ನೇಮಿಚಂದ್ರನ ನೇಮಿನಾಥ ಪುರಾಣ, ಪುಲಿಗೆರೆ ಸೋಮನಾಥನ ಸೋಮೇಶ್ವರ ಶತಕ ಇವುಗಳನ್ನು ಕೂಡ ಆಧರಿಸಿ ಒತ್ತೆ ಇಡುವ ಪದ್ಧತಿ ಇರುವುದನ್ನು ತಿಳಿಸುತ್ತಾರೆ. ಮನೆ ಕಟ್ಟುವಾಗ, ಆರ್ಥಿಕ ಪರಿಸ್ಥಿತಿ ಕೆಟ್ಟಾಗ, ಅಷ್ಟೇ ಏಕೆ, ಹೆರಿಗೆ ಸಮಯದಲ್ಲಿ ಮಹಿಳೆಯರು ತಮ್ಮ ಪ್ರಾಣವನ್ನು ಒತ್ತೆ ಇಡುವುದು ಅನಿವಾರ್ಯ ಎನ್ನುವುದನ್ನು ಬಹಳ ಸೊಗಸಾಗಿ ವಿವರಿಸಿದ್ದಾರೆ. ಡಾ. ರಾಜ್‌ಕುಮಾರ್ ಪ್ರಕರಣವೂ ಉಲ್ಲೇಖವಾಗಿದೆ. ಇಂದಂತೂ ಬಿಡಿ, ಬ್ಯಾಂಕುಗಳು ನಮ್ಮ ಮೌಲ್ಯಯುತ ವಸ್ತುಗಳನ್ನು ಒತ್ತೆಯಾಗಿಟ್ಟುಕೊಂಡು ಹಣ ನೀಡಲು ದುಂಬಾಲು ಬೀಳುತ್ತಾರೆ. ಒಟ್ಟಾರೆ, ಚೆಂದದ ಲೇಖನ. ಅಭಿನಂದನೆಗಳು ಕಮಲಾಕ್ಷಿಯವರಿಗೆ.

3. ಶಿಶಿರ ವಸಂತ – ಪೂರ್ಣಿಮಾ ಭಗವಾನ್

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಬರೆದಿರುವ 'ಶಿಶಿರ ವಸಂತ' ಎಂಬ ಈ ಕಥೆಯಲ್ಲಿ ಒಂದು ಪ್ರವಾಸ ಕಥನದ ಒಳಗಡೆ ಸಣ್ಣ ಕಥೆ ಅರಳುವ ಬಗೆ ಸೊಗಸಾಗಿದೆ. ಬದುಕಿನಲ್ಲಿ ಯಾವುದೋ ತಿರುವಿನಲ್ಲಿ ಯಾರದೋ ಮಾತು ಕಥೆಗೊಂದು ಕಾರಣವಾಗಬಹುದು ಎಂದು ಸೂಚಿಸುತ್ತದೆ ಈ ಸಣ್ಣ ಕಥೆ. ಕಥೆಯ ಆರಂಭದಂತೆ ತೋರುವ ಕಥನ ಮುಂದೆ ಬೆಳೆಸಿದ್ದರೆ ಕಥೆಯ ಚೌಕಟ್ಟಿಗೆ ಹೊಂದುತ್ತಿತ್ತು ಎನಿಸಿತು. ಸಮಯದ ಮಿತಿ ಇದ್ದುದರಿಂದ ಇದು ಸಾಧ್ಯವಾಗದೇ ಹೋಗಿರಬಹುದು. ಮುಂದಿನ ನಿಮ್ಮ ಕಥೆಗಳಗಾಗಿ ನಿರೀಕ್ಷೆ ಮಾಡುವೆ. ಪೂರ್ಣಿಮಾ ಅವರಿಗೆ ಅಭಿನಂದನೆಗಳು.

4. ತಿಂಡಿ ತೀರ್ಥ – ಸುವರ್ಣಲಕ್ಷ್ಮಿ

ಶ್ರೀಮತಿ ಸುವರ್ಣಲಕ್ಷ್ಮಿ ಅವರದ್ದು ಒಂದೊಳ್ಳೆಯ ಅಣಕು ಕವನ. ಅದರ ಬಗ್ಗೆ ಪ್ರತಿಕ್ರಿಯೆ ಬರೆಯೋಣ/ಹೇಳೋಣ ಅಂದ್ರೆ ಬಾಯಲ್ಲೆಲ್ಲ ನೀರು, ತಲೆಯಲ್ಲೆಲ್ಲ ಬಗೆ ಬಗೆಯ ರುಚಿಯಾದ ತಿಂಡಿ ತಿನಿಸುಗಳ ದೊಂಬರಾಟ. ಯಾವುದು ಹೆಚ್ಚು ರುಚಿ? ಯಾವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ? ನಾನಂತೂ ಹೇಳೋಲ್ಲ ಬಿಡಿ. ತಮ್ಮ ತಮ್ಮ ನಾಲಗೆಯ ಭಾವಕ್ಕೆ ತಕ್ಕಂತೆ ಕೇಳುಗರೇ/ಓದುಗರೇ ನಿರ್ಧರಿಸಲಿ. 'ಹೂವು, ಚೆಲುವೆಲ್ಲಾ ತಂದೆಂದಿತು' ಹಾಡಿನ ಅಣಕು ಕವನ ರಚಿಸಿದ ಶ್ರೀಮತಿ ಸುವರ್ಣಲಕ್ಷ್ಮಿ ಅವರಿಗೆ ಅಭಿನಂದನೆಗಳು.

5. ಅಜ್ಜಿಯ ನೆನಪು ಬಿಸಿ ಬಜ್ಜಿಯಂತಿದೆ – ಗೌರಿ ಭಟ್ಟ

ಕಾವ್ಯಮಯವಾದ ಲೇಖನ ಶ್ರೀಮತಿ ಗೌರಿ ಭಟ್ಟರ ಈ 'ಅಜ್ಜಿಯ ನೆನಪು ಬಿಸಿ ಬಜ್ಜಿಯಂತಿದೆ' ಎಂಬುದು. ಶೀರ್ಷಿಕೆಯೇ ಎಷ್ಟೊಂದು ಘಮಘಮಿಸುತ್ತಿದೆ ಅಲ್ಲವೇ? ಜೊತೆಗೆ ಆಪ್ತ ಭಾವವೂ ಎದ್ದು ಕಾಣುತ್ತದೆ. ತಮ್ಮ ಹಾಗೂ ತಮ್ಮ ಅಜ್ಜಿಯ ನಡುವಿನ ಮಧುರ ಬಾಂಧವ್ಯದ ನೆನಪುಗಳ ಬಗ್ಗೆ ಬರೆಯುತ್ತಲೇ, ಅಜ್ಜಿ ತಮ್ಮಿಂದ ದೂರವಾದ ಸನ್ನಿವೇಶವನ್ನು ಕೂಡ ಮನ ಕಲಕುವ ಹಾಗೆ ಬರದಿದ್ದಾರೆ. ಅಜ್ಜಿಯ ಗಾಢ ಪ್ರಭಾವ ಇವರ ಮೇಲಾಗಿರುವುದು ಕಂಡುಬರುತ್ತದೆ. ಪ್ರೀತಿಯಲ್ಲದ್ದಿ ಬರೆದ ಲೇಖನವಿದು. ಬಹುಶಃ ಇನ್ನು ಮುಂದೆ ಬಿಸಿ ಬಜ್ಜಿಯನ್ನು ತಿನ್ನುವಾಗ, ನಮಗೂ ಗೌರಿ ಭಟ್ಟರ ಅಜ್ಜಿಯ ನೆನಪು ಬಂದರೆ ಆಶ್ಚರ್ಯವಿಲ್ಲ. ಅಭಿನಂದನೆಗಳು ಗೌರಿ ಭಟ್ಟ ತಮಗೆ.

6. ಅಯೋಧ್ಯೆಗೆ ಒಮ್ಮೆ ಹೋಗಿ ಬರಬೇಕು – ಶ್ರೀಪ್ರಕಾಶ್

ಶ್ರೀಯುತ ಹು.ವಾ. ಶ್ರೀಪ್ರಕಾಶ್ ಅವರು ತುಂಬಾ ಉತ್ಕಟ ಭಾವದಿಂದ 'ಅಯೋಧ್ಯೆಗೆ ಒಮ್ಮೆ ಹೋಗಿ ಬರಬೇಕು' ಎಂಬ ಸುಂದರವಾದ ಕವನ ರಚಿಸಿದ್ದಾರೆ. ಆಯಸ್ಸು ಮುಗಿಯುವದರೊಳಗೊಮ್ಮೆ, ಆರೋಗ್ಯವಿರುವಾಗ ಅಯೋಧ್ಯೆಗೆ ಹೋಗಿ ಬರಲೇಬೇಕು ಎಂಬ ಆಸೆ ವ್ಯಕ್ತಪಡಿಸಿದ್ದಾರೆ. ತುಂಬಾ ಇಷ್ಟವಾಗಿದ್ದು ಅವರು ಅಯೋಧ್ಯೆಯನ್ನು ಭರತಭೂಮಿಯ ಹಾರಕ್ಕಿರುವ ಪದಕ ಎಂದದ್ದು. ಎಂಥ ಸುಂದರ ಕಲ್ಪನೆಯಲ್ಲವೇ? ಸರಯೂ ನದಿಯ ದಡದಲ್ಲಿ ನಿಂತು ಸುತ್ತ ನೋಡಬೇಕು, ರಾಮನ ಗುಣಗಳಲ್ಲೊಂದಷ್ಟನ್ನಾದರೂ ಮೈಗೂಡಿಸಿಕೊಂಡು ಬಾಳಬೇಕೆಂದು ಬಯಸುತ್ತಾರೆ. ಶ್ರೀಪ್ರಕಾಶ್ ಅವರು. ಬಹುಶಃ ರಾಮ ಮಂದಿರವನ್ನು ನೋಡಿ, ರಾಮಪದತಲ ಸ್ಪರ್ಶ ಮಾಡಿ ಧನ್ಯರಾಗುವ ಎಲ್ಲರ ಬಯಕೆಯನ್ನು ಪ್ರತಿನಿಧಿಸುತ್ತದೆ ಶ್ರೀಪ್ರಕಾಶ್‌ರವರ ಈ ಕವನ. ಅವರ ಆಸೆ ಪೂರೈಸಲೆಂದು ನಾನು ಮನಸಾರೆ ಹಾರೈಸುವೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

7. ಡಾಲಿಯ ಪ್ರೇಮ ಪ್ರಕರಣ – ಎಲ್. ಗಿರಿಜಾ ರಾಜ್

ಶ್ರೀಮತಿ ಗಿರಿಜಾ ರಾಜ್ ಅವರು ಬರೆದಿರುವ 'ಡಾಲಿಯ ಪ್ರೇಮ ಪ್ರಕರಣ' ಎಂಬ ಈ ಲೇಖನ ಮನಸ್ಸಿಗೆ ಮುದ ನೀಡುವುದರ ಜೊತೆಗೆ ಕಿರುನಗೆಯನ್ನೂ ಮೂಡಿಸುತ್ತದೆ. ಪ್ರೇಮ ಪ್ರಕರಣ ಅನ್ನುತ್ತಿದ್ದ ಹಾಗೆ, ನಮ್ಮ ಕಣ್ಮುಂದೆ ಬರುವುದು ಯುವಕ ಯುವತಿಯರ ನಡುವಿನ ಪ್ರೇಮ ಪ್ರಕರಣಗಳು. ಆದರೆ ಇಲ್ಲಿ ಬರೋದು ಎಲ್ಲರ ಕಣ್ ತಪ್ಪಿಸಿ ಕದ್ದು ಪ್ರೇಮ ನಡೆಸಿದ ಹಾಗೂ ತತ್ಪರಿಣಾಮವಾಗಿ ಗರ್ಭ ಧರಿಸಿದ ಡಾಲಿ ಎಂಬ ನಾಯಿಯ ಪ್ರೇಮ ಪ್ರಕರಣ. ಪ್ರಾಣಿಗಳು ಪ್ರಾಣಿಗಳೇ. ಅವುಗಳ ಸಹಜ ನಡವಳಿಕೆಯನ್ನು ನಿರ್ಬಂಧಿಸ ಹೊರಟ ಹುಡುಗರು ಸೋಲುವುದು ಸರಿಯಾಗಿಯೇ ಇದೆ. ಇತ್ತೀಚಿನ ದಿನಗಳಲ್ಲಿ ಮನುಷ್ಯರು ನಾಯಿಗಳನ್ನು ತಮ್ಮಂತೆ ಎಂದು ಭಾವಿಸಿ ವರ್ತಿಸುತ್ತಿರುವುದು ಕೆಲವೊಮ್ಮೆ ಅತಿರೇಕ ಎಂದು ಎನಿಸುತ್ತದೆ. ಇಲ್ಲಿಯೂ ಡಾಲಿ ಗರ್ಭಿಣಿ ಆಗಿದ್ದಕ್ಕೆ ತಮ್ಮ ಮನೆ ಮರ್ಯಾದೆ ಹೋದಂತೆ ಭಾವಿಸುವುದು ಕಂಡುಬರುತ್ತದೆ. ಒಟ್ಟಾರೆ ಲೇಖನ ಸ್ವಾರಸ್ಯಕರವಾಗಿದೆ. ಗಿರಿಜಾ ರಾಜ್ ಅವರು ನವಿರು ಹಾಸ್ಯದೊಂದಿಗೆ ಬರೆಯುವುದರಲ್ಲಿ ಸಮರ್ಥರು. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

8. ಕಾರ್ಮೋಡದಲ್ಲೊಂದು ಸೂರ್ಯ ಕಿರಣ – ಶ್ರೀಮತಿ ನಾಗರತ್ನ ಚಂದ್ರಶೇಖರ್

ಕೊರೋನಾ ಸಂದರ್ಭದಲ್ಲಾದ ಒಂದು ಘಟನೆಯನ್ನು ಸುಂದರ ಕಥೆಯನ್ನಾಗಿ ಹೆಣೆದಿದ್ದಾರೆ ನಾಗರತ್ನ ಚಂದ್ರಶೇಖರ್ ಅವರು. ಕೊರೊನಾ ನಮ್ಮೆಲ್ಲರನ್ನು ಅನೇಕ ಆಘಾತಕಾರಿ ಘಟನೆಗಳಿಗೆ ಸಾಕ್ಷಿಗಳನ್ನಾಗಿ ಮಾಡಿದರೂ ಅಲ್ಲಲ್ಲಿ ಒಳ್ಳೆಯ ಕ್ಷಣಗಳನ್ನೂ ಕೊಟ್ಟಿದೆ ಎನ್ನುವುದನ್ನು ಈ ಕಥೆ ಹೇಳುತ್ತದೆ. ಗರ್ಭಿಣಿಯಾದ ಮಾಧುರಿ, ಪಾಪ, ಕೊರೋನಾದಿಂದಾಗಿ ಮನೆಯಲ್ಲೇ ಬಂಧಿತಳಾಗಿ ಅನೇಕ ಒಳ್ಳೆಯ ಅನುಭವಗಳನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಅವಳ ಅದೃಷ್ಟವೆಂದರೆ, ತಾಯಿಗಿಂತ ಹೆಚ್ಚಿನ ಮಮತೆ ತೋರಿದ ಅವಳ ಅತ್ತೆ ಹಾಗೂ ಮನೆ ಮಂದಿಯ ಕಳಕಳಿ. ಅವರುಗಳ ಉಪಚಾರದಿಂದ ಹೆಚ್ಚಿನ ತೊಂದರೆ ಅನುಭವಿಸದೆ ತನ್ನ ಅವಳ ಮಕ್ಕಳ ಹೆಸರಿನ ಬಗ್ಗೆ ಆಲೋಚಿಸುತ್ತಾ ಸಮಯ ಕಳೆಯುತ್ತಾಳೆ. ಹೆರಿಗೆ ಆದಾಗ, ಮಕ್ಕಳ ಮುಖ ನೋಡಿದಾಗ ಕೊರೋನಾ ಕಾರ್ಮೋಡದಲ್ಲಿ ಸೂರ್ಯ ಕಿರಣ ಬಂದಂತೆ ಅವಳಿಗೆ ಅನಿಸುತ್ತದೆ. ಚಂದದ ಕಥೆ ಹಾಗೂ ಅಷ್ಟೇ ಸುಂದರ ನಿರೂಪಣೆ. ಅಭಿನಂದನೆಗಳು ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರಿಗೆ.

9. ಇಜೇರಿಯ ಮರ್ಮ ತಿಳಿಯಿತು – ವಿಠಲ್ ಇಜೇರಿ

ಈಗ ಇರ್ಝರಿಯವರ, ಅಲ್ಲಲ್ಲ, ಇಜೇರಿಯವರ ಲೇಖನದ ಬಗ್ಗೆ ಒಂದೆರಡು ಮಾತು. ಬೆಂಗಳೂರಿನ ಸ್ಟೇಟ್ ಬ್ಯಾಂಕಿನ ಪ್ರಧಾನ ಕಚೇರಿಯಿಂದ ದೂರದ ಬಿಸಿಲಿನ ಪ್ರದೇಶವಾದ ಗುಲ್ಬರ್ಗದ ಕೃಷ್ಣ ಗ್ರಾಮೀಣ ಬ್ಯಾಂಕಿಗೆ ವರ್ಗವಾಗಿ ಹೋದ ಇಜೇರಿಯವರು, ಅಲ್ಲಿ ತಮ್ಮ ಹೆಸರಿನ ಮೂಲ ಕಂಡುಕೊಳ್ಳುವುದು ಒಂದು ರೋಚಕ ಘಟನೆಯೇ ಸರಿ. ಸುರಪುರ ಸಮೀಪದ ಗ್ರಾಮಕ್ಕೆ ಹೋಗಲು ಮೆಣಸಿನಕಾಯಿ ಮೂಟೆಯ ಮೇಲೆ ಕುಳಿತು ಟೆಂಪೋದಲ್ಲಿ ಹೋಗಬೇಕಾದ ಪರಿಸ್ಥಿತಿ ಬಗ್ಗೆ ಓದುವಾಗ ನಗೆ ಬಂತು. 79 ಶಾಖೆಗಳ ಲೆಕ್ಕಪತ್ರ ಪರಿಶೀಲನೆಯ ನಂತರ ತಾವೇ ಕೇಳಿಕೊಂಡು ಇಜೇರಿಯ ಗ್ರಾಮೀಣ ಬ್ಯಾಂಕ್ ಶಾಖೆಗೆಂದು ಹೋದಾಗ ಇಜೇರಿ ಶಬ್ದದ ಮೂಲದ ಬಗ್ಗೆ ಆಲೋಚನೆ ಮೂಡುತ್ತದೆ. ಇದೇ ವೇದಿಕೆಯ ಗೆಳೆಯ ಜನಾರ್ದನ ತುಂಗಾ ಅವರು ಇಜೇರಿಯ ಮೂಲ ಇರ್ಝರಿ, ಅಂದರೆ, ಎರಡು ಝರಿ ಎಂದುದನ್ನು ನೆನಪಿಸಿಕೊಂಡು ಸಂಭ್ರಮಿಸುತ್ತಾರೆ. ಲೇಖನ ಬಹಳ ಚೆನ್ನಾಗಿದೆ. ತಮ್ಮ ಅನುಭವವನ್ನು ಕಾಲ್ಪನಿಕವಾಗಿ ನಮಗೂ ಮಾಡಿಸುತ್ತಾ, ತಮ್ಮ ಹೆಸರಿನ ಬಗೆಗಿನ ತಿಳುವು ಮೂಡಿಸಿದ್ದಕ್ಕಾಗಿ ಶ್ರೀಯುತ ಇಜೇರಿಯವರಿಗೆ ಹೃತ್ಪೂರ್ವಕ ಅಭಿನಂದನೆಗಳು.

10. 'ಕಾಯ' ಬೇಕು – ಭ.ರಾ.ವಿ.

ಶ್ರೀಯುತ ಭ.ರಾ. ವಿಜಯಕುಮಾರ್ ಅವರು ಪದಗಳೊಂದಿಗೆ ಆಟವಾಡುತ್ತಾ, ಅವುಗಳ ಭಾವವನ್ನು ಹೆಕ್ಕಿ ತೆಗೆಯುವುದರಲ್ಲಿ ನಿಸ್ಸೀಮರು. ಪ್ರಸ್ತುತ ಕವನದಲ್ಲಿ 'ಕಾಯ' ಎನ್ನುವ ಶಬ್ದಕ್ಕೆ ಹಲವಾರು ಅರ್ಥಗಳನ್ನು ಸೂಚಿಸುತ್ತ, ಒಂದೊಂದು ಅರ್ಥಕ್ಕೂ ಒಂದೊಂದು ಚರಣವನ್ನು ರಚಿಸಿದ್ದಾರೆ. ಮೊದಲನೆಯ ಚರಣದಲ್ಲಿ 'ಕಾಯ' ಅಂದರೆ ಕಾಯುವುದು, ಬಿಸಿಯಾಗುವುದು ಎನ್ನುವ ಅರ್ಥದಲ್ಲಿ, ಎರಡನೆಯ ಚರಣದಲ್ಲಿ 'ಕಾಯ' ಎಂದರೆ ದೇಹ ಎಂಬರ್ಥದಲ್ಲಿ, ಮೂರನೆಯ ಚರಣದಲ್ಲಿ ಕಾಯುವುದು ಅಂದರೆ ನಿರೀಕ್ಷಿಸುವುದು ಎಂಬರ್ಥದಲ್ಲಿ, ಹಾಗೂ ನಾಲ್ಕನೆಯ ಚರಣದಲ್ಲೂ ಕಾಯುವುದು ಎಂದರೆ ರಕ್ಷಿಸುವುದು ಎನ್ನುವ ಅರ್ಥದಲ್ಲಿ ಬಳಕೆ ಮಾಡುತ್ತಾ ಪ್ರತಿ ಚರಣದಲ್ಲೂ ಒಂದು ವಿಶಿಷ್ಟ ಭಾವವನ್ನು ಹೆಕ್ಕಿ ಹೊರ ತೆಗೆದಿದ್ದಾರೆ. ಪದಗಳು ಕೂಡ ಮನಸ್ಸಿನ ತಾಪದಲ್ಲಿ ಹದಗೊಂಡು ಹೊರಬರಬೇಕು ಎನ್ನುತ್ತಾರೆ. ಬಾಳನಲ್ಲಿ ಸಾಗಲು ಸಾರ್ಥಕ ಬದುಕಿಗೆ ಕಾಯಬೇಕು ಎನ್ನುತ್ತಾರೆ. ಯಾವುದೇ ಫಲಕ್ಕಾಗಿ ನಾವು ಕಾಯಬೇಕು ಎನ್ನುತ್ತಾರೆ. ಹಾಗೆಯೇ ಕಾಯುವವ(ದೈವ) ನಮ್ಮನ್ನು ಕಾಯುತ್ತಾನೆ ಎಂದು ಹೇಳುತ್ತಾರೆ. ಅರ್ಥಗರ್ಭಿತ ಹಾಗೂ ಆಧ್ಯಾತ್ಮಿಕ ಭಾವವನ್ನೂ ಹೊಂದಿರುವ ಕವನವನ್ನು ರಚಿಸಿದ ಭ. ರಾ. ವಿಜಯಕುಮಾರ್ ಅವರಿಗೆ ಅಭಿನಂದನೆಗಳು ಹಾಗೂ ನಮನಗಳು.

11. ಮಾವನೂರಿಗೆ ಮೊದಲ ದಿನ – ಕೆ. ಎನ್. ಭಗವಾನ್

ಶ್ರೀಯುತ ಕೆ. ಎನ್. ಭಗವಾನ್ ಅವರು ಬಾಲ್ಯದಲ್ಲಿ ತಮ್ಮ ಅಣ್ಣ, ತಂಗಿ ಹಾಗೂ ತಾಯಿಯರೊಡನೆ ಸೋದರ ಮಾವನ ಊರಿಗೆ ಹೋದ ಪರಿಯನ್ನು ಕವನದ ಮೂಲಕ ಬಹಳ ಸೊಗಸಾಗಿ ರಚಿಸಿದ್ದಾರೆ. ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರು ಬರೆದಿರುವ 'ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು' ಎನ್ನುವ ಕವನವನ್ನು ನೆನಪಿಸುವ, ಆದರೆ ಬೇರೆ ರೀತಿಯದೇ ಆದ ಕವನ ಇದು. ತಾವು ಸೇರಬೇಕಾದ ಗಮ್ಯವನ್ನು ತಲುಪಲು ಪಟ್ಟ ಫಜೀತಿ ಕವನದಲ್ಲಿ ಸುಂದರವಾಗಿ ಮೂಡಿದೆ. ಅವರು ತಮ್ಮ ಕಾಲುಗಳನ್ನು 'ನಮ್ಮೊತ್ತೆಯಾಳು' ಎಂದು ಕರೆದಿರುವುದು ವಿಶೇಷವೆನಿಸಿತು, ಇಷ್ಟವಾಯ್ತು. ಶಾಲಾ ಬಾಲಕನಾಗಿಯೂ, ಆ ವಯಸ್ಸಿನಲ್ಲಿಯೇ ತಮ್ಮ ರಸಿಕತೆಯನ್ನು ತೋರುತ್ತ, ಮನೆಗೆ ಹೋದಾಗ ತನ್ನ ಮಾವನ ಮಗಳು ಮಲಗಿಬಿಟ್ಟಿದ್ದನ್ನು ನೆನೆಸಿಕೊಳ್ಳುತ್ತಾರೆ ಭಗವಾನ್ ಅವರು. ಚಂದದ ಕವನ. ಒಂದು ರೀತಿಯ ದೃಶ್ಯಕಾವ್ಯ ಎಂದರೂ ಸರಿಯೇ. ಅಭಿನಂದನೆಗಳು ಭಗವಾನ್ ಸರ್ ಅವರಿಗೆ.

12. ಟ್ರಯಲ್ ಅಂಡ್ ಎರರ್ಸ್ – ಮಾಧುರಿ ಕೃಷ್ಣ

'ಟ್ರಯಲ್ ಅಂಡ್ ಎರರ್ಸ್ – ಯತ್ನ ಮತ್ತು ವಿಫಲತೆ', ಶ್ರೀಮತಿ ಮಾಧುರಿ ಕೃಷ್ಣ ಅವರು ಬರೆದಿರುವ ಒಂದು ಸಣ್ಣ ಪ್ರಸಂಗ. ಮದುವೆ ವಯಸ್ಸಿನ ಸೋದರಳಿಯನಿಗೆ ಗಂಡು ಹುಡುಕುವ ಪ್ರಸಂಗವಿದು. ಹುಡುಗಿಯ ಫೋಟೋ ನೋಡಿ ಬಹುವಾಗಿ ಮೆಚ್ಚಿದ ಹುಡುಗ, ಹುಡುಗಿಯನ್ನು ನೋಡಲು ಬಹಳ ಉತ್ಸಾಹದಿಂದ ಹೋದರೂ ಹಿಂದಿರುಗಿ ಬರುವಾಗ ಪೆಚ್ಚಾಗಿಬಿಡುತ್ತಾನೆ. ಕಾರಣ, ಹುಡುಗಿ ತನಗಿಂತ ಹೆಚ್ಚು ಓದಿದ್ದು, ಹೆಚ್ಚು ಸಂಪಾದಿಸುತ್ತಿದ್ದುದಷ್ಟೇ ಅಲ್ಲದೆ ತನಗಿಂತ ಮೂರಿಂಚು ಎತ್ತರವಾಗಿದ್ದುದು. ಸಣ್ಣ ಪ್ರಸಂಗವೇ ಆದರೂ ಸಾಕಷ್ಟು ಆಲೋಚನೆಯತ್ತ ನಮ್ಮನ್ನು ದೂಡುವ ಪ್ರಸಂಗವಿದು. ಇದನ್ನು ಹಲವಾರು ಆಯಾಮಗಳ ಮೂಲಕ ಚಿಂತನೆ ಮಾಡಬಹುದು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಕುತೂಹಲ ಮೂಡಿಸುವ ಹಾಗೆ ಬಹಳ ಚೆನ್ನಾಗಿ ಬರೆದಿದ್ದಾರೆ ಮಾಧುರಿ ಕೃಷ್ಣಮೂರ್ತಿಯವರು. ಅವರಿಗೆ ಅಭಿನಂದನೆಗಳು.

13. ಲಬ್ ಡಬ್ ಎನ್ನುವ ಹೃದಯದಲ್ಲಿಣುಕಿದಾಗ – ಟಿ.ಎಸ್. ಶ್ರವಣ ಕುಮಾರಿ

ಶ್ರೀಮತಿ ಶ್ರವಣ ಕುಮಾರಿಯವರ ಈ ಲೇಖನವನ್ನು ಓದಿದಾಗ, 'ಅಬ್ಬಾ ಆಸ್ಪತ್ರೆ ಅನುಭವ ಹೀಗೂ ಇರಬಹುದೇ?' ಎನಿಸಿತು. ನಿಜವಾದ ಆಧ್ಯಾತ್ಮಿಕ ಎತ್ತರಕ್ಕೆ ಏರಿದ ವ್ಯಕ್ತಿ ಮಾತ್ರ ಈ ರೀತಿ ತಮ್ಮ ಅನುಭವವನ್ನು ಅನುಭವಿಸಬಹುದೋ ಏನೋ. 'ನನ್ನ ದೇಹ ನಾನಲ್ಲ' ಎನ್ನುವಂತೆ ದೇಹದಿಂದಾಚೆ ನಿಂತು ಎಲ್ಲವನ್ನೂ ಗಮನಿಸುವ, ಅರ್ಥೈಸುವ ಇವರ ಮನೋಧಾರ್ಢ್ಯಕ್ಕೊಂದು ಸೆಲ್ಯೂಟ್ ಕೊಡಲೇಬೇಕು. ಸಾವು ತೀರ ಸನಿಹಕ್ಕೆ ಬಂದಿದೆ ಎನ್ನಿಸಿದಾಗಲೂ, ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳದೆ ಗಂಡ, ಮಗಳಿಗೆ ಕೃತಜ್ಞತೆ ಸಲ್ಲಿಸುವ ಆಲೋಚನೆ ಅತ್ಯಪೂರ್ವ ಎನಿಸಿತು. ಕಣ್ಣೆದುರೇ ಎಲ್ಲವೂ ನಡೆಯುತ್ತಿರುವ ಹಾಗೆ ಬರೆಯುವ ಇವರ ಬರೆವಣಿಗೆ ಎಲ್ಲರಿಗೂ ಆಪ್ಯಾಯಮಾನವಾಗುವಂತಹುದು. ಇವರ ಈ ಅನುಭವ ಕಥನವನ್ನು ಓದಿದ ಯಾವುದೇ ರೋಗಿಗೂ ಹೆಚ್ಚಿನ ಧೈರ್ಯ ಬಂದು ಆತ್ಮವಿಶ್ವಾಸ ಚಿಗುರೀತು. ದೇವರು ಶ್ರವಣ ಕುಮಾರಿಯವರಿಗೆ ನೂರು ವರ್ಷ ಆಯಸ್ಸನ್ನು ಆರೋಗ್ಯದೊಂದಿಗೆ ಕೊಡಲಿ ಎಂದು ಹಾರೈಸುತ್ತೇನೆ.

14. ಇವರೇಕೆ ಹೀಗೆ? – ಮಾಲತಿ ಶ್ರೀನಿವಾಸನ್

ಪ್ರಕೃತಿಯಲ್ಲಿ ವೈವಿಧ್ಯತೆ ಸಹಜ. ಆದರೆ ಆ ವೈವಿಧ್ಯತೆ ಯಾವತ್ತಿಗೂ ಧನಾತ್ಮಕತೆಯನ್ನು ಸೂಚಿಸುತ್ತಿರುತ್ತದೆ. ಪ್ರಕೃತಿಯ ಭಾಗವಾದ ಮನುಷ್ಯರಲ್ಲಿ ಮಾತ್ರ ಈ ವೈವಿಧ್ಯತೆ ಯಾವಾಗಲೂ ಖುಷಿ ಕೊಡುವುದಿಲ್ಲ ಎಂದು ಗಮನಿಸುತ್ತಾ, 'ಇವರೇಕೆ ಹೀಗೆ?' ಎಂಬ ಲೇಖನವನ್ನು ಬರೆದಿದ್ದಾರೆ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು. ನಿಜ, ನಾವೆಲ್ಲ ಗಮನಿಸಿರುವ ಹಾಗೆ ಹಲವಾರು ಜನ ಇತರರನ್ನು ಹೀಗಳೆಯುತ್ತಾ, ಬೇಡದ ಟೀಕೆಗಳನ್ನು ಮಾಡುತ್ತಾ, ಅವರನ್ನು ಕುಗ್ಗಿಸುವ, ಕುಗ್ಗಿಸಿ ಸಂತೋಷಪಡುವ ಮನೋಭಾವದವರಾಗಿರುತ್ತಾರೆ. ಅದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಟ್ಟು, 'ಇವರೇಕೆ ಹೀಗೆ?' ಎಂದು ಪ್ರಶ್ನಿಸುತ್ತಾರೆ ಮಾಲತಿಯವರು. ಮಾತನಾಡುವುದು ಸುಲಭ. ಆದರೆ, ಸರಿಯಾಗಿ ಮಾತನಾಡುವುದು ಸುಲಭವಲ್ಲ. ಅದಕ್ಕೇ ಅಲ್ಲವೇ ಬಸವಣ್ಣನವರು ಹೇಳಿದ್ದು, 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದು. ನಮಗೂ ಈ ಲೇಖನ ಎಚ್ಚರಿಕೆಯ ಘಂಟೆಯೇ. ಮಾಲತಿ ಶ್ರೀನಿವಾಸನ್ ಅವರ ಬರಹ ಚಿಂತನಾರ್ಹ ಹಾಗೂ ಮನನೀಯ. ಅವರಿಗೆ ಅಭಿನಂದನೆಗಳು.

15. ಸಂಕ್ರಾಂತಿ ಸಡಗರ – ಕೆ. ಆರ್. ವೆಂಕಟೇಶ್ (ಮನೋಹಂಸ)

ಬರಲಿರುವ ಸಂಕ್ರಾಂತಿ ಹಬ್ಬಕ್ಕೆ ಉತ್ಸಾಹ ತುಂಬುವಂತೆ ತಾವೇ ಒಂದು ಕವನವನ್ನು ರಚಿಸಿ ಅಭೇರಿ ರಾಗದಲ್ಲಿ ಸುಶ್ರಾವ್ಯವಾಗಿ ಹಾಡಿದ್ದಾರೆ, 'ಮನೋಹಂಸ' ಕಾವ್ಯನಾಮದ ಕೆ. ಆರ್. ವೆಂಕಟೇಶ್ ಅವರು. 'ಸಂಕ್ರಾಂತಿ ಸಡಗರ' ಎಂಬ ಈ ಗೀತೆ ನಿಜಕ್ಕೂ ನಮ್ಮಲ್ಲಿ ಸಡಗರದ ಅಲೆಯನ್ನು ಎಬ್ಬಿಸಿದೆ. ಇನ್ನೂ ಒಂದು ಚರಣವಿರಬೇಕಿತ್ತು ಎನಿಸಿತು. ಸುಂದರವಾಗಿ ರಚಿಸಿ ಮಧುರವಾಗಿ ಹಾಡಿದ ವೆಂಕಟೇಶ್ ಅವರಿಗೆ ಅಭಿನಂದನೆಗಳು.

16. ಯುಗಾದಿ ಮತ್ತು ಕಣ್ಣ ಮುಚ್ಚಾಲೆ (ಎರಡು ಕವನಗಳು) – ಡಾ. ಸತ್ಯವತಿ ಮೂರ್ತಿ

ಡಾ. ಸತ್ಯವತಿ ಮೂರ್ತಿಯವರು ವಿಭಿನ್ನ ಶೈಲಿಯ ಹಾಗೂ ವಿಭಿನ್ನ ವಸ್ತುಗಳ ಕುರಿತು ಎರಡು ಕವನಗಳ ಪ್ರಸ್ತುತಿಯನ್ನು ಮಾಡಿದ್ದಾರೆ. 'ಯುಗಾದಿ' ಕವನದಲ್ಲಿ ಜ್ಯೋತಿಷಿ ಹತ್ತಿರ ಹೋಗಿ ಕೈ ತೋರಿಸಿ, ಯುಗಾದಿಯ ಹೊತ್ತಿಗೆ ಸುಖದ ಹೊಳೆ, ಹಣದ ಹೊಳೆ ಹರಿದು ಬರುವುದರ ಬಗ್ಗೆ ಭವಿಷ್ಯ ಕೇಳಿಸಿಕೊಂಡು ಸಂತೋಷಚಿತ್ತರಾಗಿ

ಮನೆಗೆ ಬರುವ ಹಾಗೂ ಹಲವು ಯುಗಾದಿಗಳು ಕಳೆದರೂ ಜ್ಯೋತಿಷಿ ಹೇಳಿದಂತಹ ಭಾಗ್ಯ ಸಿಗದೇ ಇರುವುದರ ಬಗ್ಗೆ ನವಿರಾದ ಹಾಸ್ಯದೊಂದಿಗೆ ಸುಂದರ ಕವನವನ್ನು ರಚಿಸಿದ್ದಾರೆ.

ಇನ್ನು, 'ಕಣ್ಣ ಮುಚ್ಚಾಲೆ' ಎಂಬ ಕವನದಲ್ಲಿ ಸೂರ್ಯನೊಂದಿಗೆ ನೇರವಾಗಿ ಸಂಭಾಷಿಸುತ್ತಾ, ಆತನ ಗುಣಗಳನ್ನು ವಿವಿಧ ರೂಪದಲ್ಲಿ ಲಯಬದ್ಧವಾಗಿ ವರ್ಣಿಸಿದ್ದಾರೆ. ಕೆಲ ವಿಶೇಷ ಶಬ್ದಗಳನ್ನೂ ಬಳಸಿದ್ದಾರೆ. ಭಾಷೆಯ ಮೇಲೆ ಪ್ರಭುತ್ವವುಳ್ಳ ಇವರ ಕಾವ್ಯ ರಚನಾ ಶೈಲಿ ಹಾಗೂ ವಾಚನ ಶೈಲಿ ವಿಶಿಷ್ಟ. ಎರಡೂ ಕವನಗಳು ಬಹಳ ಆಪ್ತವೆನಿಸುತ್ತವೆ. ಡಾ. ಸತ್ಯವತಿ ಮೂರ್ತಿಯವರಿಗೆ ಹೃತ್ಪೂರ್ವಕ ಅಭಿನಂದನೆಗಳು.

17. ವ್ಯಾಕರಣದ ಪ್ರಯೋಜನಗಳು – ಗಣಪತಿ ಹೆಗಡೆ

ಶ್ರೀಯುತ ಗಣಪತಿ ಹೆಗಡೆಯವರು ಪ್ರಸ್ತುತ ಲೇಖನದಲ್ಲಿ ಭಾಷೆಯಲ್ಲಿ ಇರಬೇಕಾದ ವ್ಯಾಕರಣದ ಪ್ರಾಮುಖ್ಯತೆಯ ಬಗ್ಗೆ ತುಂಬಾ ಚೆನ್ನಾಗಿ ಸೋದಾಹರಣೆಯ ಮೂಲಕ ವಿವರಿಸಿದ್ದಾರೆ. ವ್ಯಾಕರಣದ ಪ್ರಯೋಜನಗಳು ಎನ್ನುವುದಕ್ಕಿಂತ ವ್ಯಾಕರಣ ಎಷ್ಟು ಅನಿವಾರ್ಯ ಒಳ್ಳೆಯ ಭಾಷಾ ಪ್ರಸ್ತುತಿಗೆ ಎಂಬುದನ್ನು ಈ ಲೇಖನ ಓದಿದ ಯಾರಿಗಾದರೂ ತಿಳಿಯುತ್ತದೆ. ಯಾವುದೇ ಭಾಷೆಯ ಅಡಿಪಾಯ ವ್ಯಾಕರಣವೇ ಸರಿ. ಮೇಲ್ನೋಟಕ್ಕೆ ತಿಳಿಯದಿದ್ದರೂ ಅದು ಭಾಷೆಯಲ್ಲಿ ಅಂತರ್ಗತವಾಗಿರುವುದನ್ನು ನಾವು ಗಮನಿಸಿ ಕಲಿತು ಬಳಸಿದರೆ ಭಾಷೆಯ ಸೊಗಡು ಹೆಚ್ಚಾಗುತ್ತದೆ ಎಂದು ಈ ಲೇಖನ ತಿಳಿಸುತ್ತದೆ. ವ್ಯಾಕರಣ ಅಂದ್ರೆ ಕ್ಯಾ ಕರನಾ? ಎನ್ನುವ ಜನಗಳಿಗೆ ಈ ಲೇಖನ ಓದಿದಾಗ ವ್ಯಾಕರಣದ ಪ್ರಾಮುಖ್ಯತೆ ತಿಳಿಯುತ್ತದೆ. ಭಾಷೆಯನ್ನು ಬೇಕಾಬಿಟ್ಟಿ ಬಳಸುವುದಕ್ಕಿಂತ ಅರಿತು ಬಳಸಿದರೆ ಅದರ ಮೌಲ್ಯ ಹೆಚ್ಚುತ್ತದೆ. ಈ ಪ್ರಸ್ತುತಿಗಾಗಿ ಗಣಪತಿ ಹೆಗಡೆ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

18. ಸವಿ ಬೆಲ್ಲ–ಸಿಹಿಗಲ್ಲ – ಎಂ. ಎಸ್. ಎನ್.

ಶ್ರೀಯುತ ಎಂ. ಎಸ್. ಎನ್. ರವರ ಇಂದಿನ ಪ್ರಸ್ತುತಿ ಈಗಾಗಲೇ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಮೊದಲ ಅಂಕಣ ಬರಹವಾಗಿ ಪ್ರಕಟವಾಗಿದ್ದು, ಆ ಲೇಖನದ ಮೊದಲ ಓದುಗಳು ನಾನಾಗಿದ್ದು ತುಂಬಾ ಸಂತೋಷವೆನ್ನಿಸಿತು. ಎಂ ಎಸ್ ಎನ್ ಅಂದ್ರೆ ಹಾಸ್ಯ ಸಾಹಿತಿ. ಅವರ ಹೆಸರು ನೆನಪಿಸಿಕೊಂಡಾಕ್ಷಣ ನಮಗೇ ತಿಳಿಯದಂತೆ ನಮ್ಮ ಮುಖದಲ್ಲಿ ನಸುನಗು ಮೂಡುತ್ತದೆ. ನವರಸಗಳಲ್ಲಿ ಹಾಸ್ಯರಸ ಬಲು ಮುಖ್ಯ. ಜೀವನದಲ್ಲಿ ಅದು ದುಗುಡ ದುಮ್ಮಾನಗಳನ್ನು ಸ್ವಲ್ಪ ಮಟ್ಟಿಗೆ ಮರೆಸುತ್ತದೆ. ಜೊತೆಗೆ ಹಾಸ್ಯದ ಅಂತರಾಳದಲ್ಲಿ ಚಿಂತನೆಯ ವಿಷಯ ಇರುವುದನ್ನು ನಾವು ಗಮನಿಸಬಹುದು.

ಪ್ರಸ್ತುತ 'ಸವಿಬೆಲ್ಲ ಸಿಹಿಗಲ್ಲ' ಶೀರ್ಷಿಕೆಯೇ ಶ್ಲೇಷಾರ್ಥ ಹೊಂದಿದೆ ಅಂತ ಅನ್ಸುತ್ತೆ. ಬೇರೆ ಬೇರೆ ಅರ್ಥಗಳನ್ನು ಧ್ವನಿಸುವ ಶೀರ್ಷಿಕೆಯೇ ತುಂಬಾ ಅರ್ಥಪೂರ್ಣ ಅನ್ನಿಸಿತು. ವಿಶ್ವ ವಿಶಾಲು ಜೋಡಿಯ ಸಂಸಾರದ ರೋಚಕವಾದ ಸನ್ನಿವೇಶಗಳನ್ನು ಕಟ್ಟಿಕೊಡುವುದರಲ್ಲಿ ಎಂಎಸ್ಎನ್ ಸಿದ್ಧಹಸ್ತರು. ಸಾಮಾನ್ಯವಾಗಿ ಸಂಸಾರಗಳಲ್ಲಿ ಗಂಡಂದಿರು, ಹೆಂಡತಿಯರಿಗೆ ಏನೂ ತಿಳಿಯೋದಿಲ್ಲ, ಸುಲಭವಾಗಿ ಏಮಾರಿಸಬಹುದು ಅಂದ್ಕೊಂಡು ಚಾಪೆ ಕೆಳಗೆ ತೂರೋದಕ್ಕೆ ನೋಡ್ತಾರೆ. ಆದರೆ ಹೆಂಡ್ತಿಯರೇನೂ ಕಮ್ಮಿ ಇರೋಲ್ಲ ಬಿಡಿ. ಅವರು ರಂಗೋಲಿ ಕೆಳಗೇ ನುಸುಳ್ತಾರೆ ಅನ್ನೋದನ್ನ ಒಂದು ಸನ್ನಿವೇಶ ಸೃಷ್ಟಿಸಿ ಸುಂದರವಾದಂತಹ ಪ್ರಸಂಗವನ್ನು ಸಂಭಾಷಣೆಯ ಮೂಲಕ ಕಟ್ಟಿಕೊಟ್ಟಿದ್ದಾರೆ ಮಾನ್ಯ

ಎಂಎಸ್ಎನ್‌ರವರು. ಇವರಂತಹವರ ಪ್ರಬುದ್ಧ ಲೇಖನಕ್ಕೆ ನಾನು ನನ್ನ ಒಂದೆರಡು ಮಾತುಗಳನ್ನು ಹೇಳಲು ಅವಕಾಶ ಸಿಕ್ಕಿದ್ದು ತುಂಬಾ ಸಂತಸದ ವಿಷಯ. ಅಭಿನಂದನೆಗಳು ಹಾಗೂ ವಂದನೆಗಳು ಎಂ.ಎಸ್.ಎನ್. ಸರ್ ಗೆ.

19. 'ಬೆಳಕು ಹರಿವ ಮುನ್ನ' ಪುಸ್ತಕ ಪರಿಚಯ – ಕೆ. ಎನ್. ಮಹಾಬಲ

ಶ್ರೀಯುತ ಕೆ. ಎನ್. ಮಹಾಬಲ ಅವರು ಶ್ರೀಮತಿ ಶ್ರವಣ ಕುಮಾರಿಯವರ ಎರಡನೆಯ ಕಥಾ ಸಂಕಲನವಾದ 'ಬೆಳಕು ಹರಿವ ಮುನ್ನ' ಎಂಬ ಪುಸ್ತಕ ಪರಿಚಯವನ್ನು ತುಂಬಾ ಚೆನ್ನಾಗಿ ಈ ಲೇಖನದಲ್ಲಿ ಮಾಡಿಕೊಟ್ಟಿದ್ದಾರೆ. ಹತ್ತು ವೈವಿಧ್ಯಮಯ ಕಥೆಗಳ ಸಾರವನ್ನು ಪುಟ್ಟ ಪುಟ್ಟ ಪ್ಯಾರಾಗಳಲ್ಲಿ ಬರೆದು, ನಮ್ಮಲ್ಲಿ ಪುಸ್ತಕ ಓದಲೇಬೇಕು ಎನ್ನುವ ಆಸಕ್ತಿ, ಕುತೂಹಲ ಮೂಡಿಸುವಂತೆ ಮಾಡಿದ್ದಾರೆ ಮಹಾಬಲ ಸರ್‌ರವರು. ಈಗಾಗಲೇ 'ಅಸ್ಪಷ್ಟ ತಲ್ಲಣಗಳು' ಎಂಬ ಕಥಾ ಸಂಕಲನವನ್ನು ಬರೆದು ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿರುವ ಶ್ರೀಮತಿ ಶ್ರವಣ ಕುಮಾರಿಯವರಿಗೆ ಈ ಕಥಾ ಸಂಕಲನ ಮತ್ತಷ್ಟು ಹೆಸರು ತರಲಿ ಎಂದು ಎಲ್ಲರ ಪರವಾಗಿ ಹಾಗೂ ವೈಯಕ್ತಿಕವಾಗಿ ಹಾರೈಸುವೆ. ಅವರಿಗೂ, ಶ್ರೀಯುತ ಮಹಾಬಲರವರಿಗೂ ಹೃತ್ಪೂರ್ವಕ ಅಭಿನಂದನೆಗಳು.

20. ಅಭಿ ನ ಜಾವೋ ಛೋಡಕರ್– ಹೋಗದಿರೀಗಲೇ ನೀ ಬಿಟ್ಟೆನ್ನನು – ವೆಂಕಟೇಶ್ ಕಾಮತ

'ಹಮ್ ದೋನೋ' ಎಂಬ 1961ರ ಹಿಂದಿ ಚಿತ್ರದ ಒಂದು ಹಾಡಿನ ಸಾಲನ್ನು ಹಿಡಿದು ಒಂದು ಸುಂದರ ಪ್ರಬಂಧವನ್ನು ಕಟ್ಟಿಕೊಟ್ಟಿದ್ದಾರೆ ಶ್ರೀ ವೆಂಕಟೇಶ್ ಕಾಮತ ಅವರು. ಪ್ರೀತಿಸಿದ ಗೆಳೆಯ ಅಥವಾ ಗೆಳತಿ, ಪತಿ ಅಥವಾ ಪತ್ನಿ ಅಥವಾ ಯಾವುದೇ ರೀತಿಯ ಸುಂದರ ಬಾಂಧವ್ಯ ಹೊಂದಿರುವ ವ್ಯಕ್ತಿ ತಮ್ಮನ್ನು ಬಿಟ್ಟು ಹೋದಾಗ ಅಥವಾ ಹೊರಡುವಾಗ ಮನಸ್ಸು ಚಡಪಡಿಸುತ್ತದೆ. ಬಿಡಲಾರದ ಬಾಂಧವ್ಯ ನಿರಂತರವಾಗಿ ಹಾಗೆಯೇ ಸಾಗುತ್ತಿರಲಿ ಎಂದು ಮನಸ್ಸು ಬಯಸುತ್ತದೆ. ಇದೇ ಚಿಂತನೆಯ ಜಾಡನ್ನು ಹಿಡಿದು ಅನೇಕ ದಿಕ್ಕುಗಳಿಂದ ಆಲೋಚಿಸಿ ಗಾಢ ಪ್ರಭಾವ ಬೀರುವ ಲೇಖನವನ್ನು ಬರೆದಿದ್ದಾರೆ ವೆಂಕಟೇಶ್ ಕಾಮತ್ ಅವರು. ಇದರ ಬಗ್ಗೆ ನಾನು ಹೆಚ್ಚು ಬರೆಯುವುದಿಲ್ಲ. ಎಲ್ಲರೂ ಓದಿ ಆರ್ದ್ರಗೊಳ್ಳಿ. ಅಭಿನಂದನೆಗಳು ವೆಂಕಟೇಶ ಕಾಮತ್ ಅವರಿಗೆ.

21. ಬೆಳ್ಮುಗಿಲ ಹೂರಣ – ಮಾನಸ ಕೆ. ಕೆ.

ಸೂರ್ಯನ ಹೊಂಗಿರಣ, ಗಗನದ ಮೋಡಗಳು, ಭೂಮಿಯ ಹಸಿರು ಹಾಸು... ಇವುಗಳ ಬಾಂಧವ್ಯ ಎಲ್ಲ ಕವಿ ಮನಸುಗಳನ್ನು ಆಕರ್ಷಿಸುತ್ತದೆ. ಅಂತೆಯೇ ಶ್ರೀಮತಿ ಮಾನಸ ಕೆ.ಕೆ. ಅವರು ರಚಿಸಿರುವ 'ಬೆಳ್ಮುಗಿಲ ಹೂರಣ' ಎಂಬ ಕವನದಲ್ಲಿಯೂ ಮುದಗೊಳಿಸುವ ಸುಂದರ ಸಾಲುಗಳಿವೆ. 'ಬೆಳ್ಮುಗಿಲ ಹೂರಣ' ಎನ್ನುವ ಪದಯುಗ್ಮವೇ ಬಹು ಸುಂದರವೆನಿಸಿತು. ಸಂಜೆಗೆಂಪಿನ ಸಮಯದಲ್ಲಿ ಕಂಗೊಳಿಸುವ ಪ್ರಕೃತಿ ಸೌಂದರ್ಯದ ವರ್ಣನೆ ಈ ಕವನದಲ್ಲಿ ಬಹಳ ಮನೋಜ್ಞವಾಗಿ ಮೂಡಿದೆ. ಕವಯಿತ್ರಿ ಮಾನಸ ಅವರಿಗೆ ಅಭಿನಂದನೆಗಳು.

22. ಆ ಒಂದು ಕರೆ – ರೇಣುಕಾ ದೇಸಾಯಿ

ಶ್ರೀಮತಿ ರೇಣುಕಾ ದೇಸಾಯಿ ಅವರು ಬರೆದಿರುವ 'ಆ ಒಂದು ಕರೆ' ಎಂಬ ಲೇಖನ ಅತ್ಯಂತ ಮನಮುಟ್ಟುವ ಅನುಭವವನ್ನು ಹೇಳುವ ಕಥನ. ಕಾದಂಬರಿಗಾರ್ತಿ ನೀಳಾದೇವಿಯವರೊಂದಿಗಿನ ಅವರ ಸಂಪರ್ಕ, ಫೋನಿನಲ್ಲಿ ಅವರು ಕರೆ ಮಾಡಿ ತಿಳಿಸಿದಂತಹ ವಿಷಯಗಳು, ಇವನ್ನೆಲ್ಲ ಅತ್ಯಂತ ಮನಮುಟ್ಟುವ ಹಾಗೆ ಬರೆದಿದ್ದಾರೆ ರೇಣುಕಾ ಅವರು. ಇವರ ಬರಹದ ಶೈಲಿ ಬಹಳ ಚಂದ. ನಾವೇ ಅವರ ಕರೆಯ ಮೂಲಕ ನೀಳಾದೇವಿಯವರ ಮಾತುಗಳನ್ನು

ಕೇಳಿಸಿಕೊಳ್ಳುತ್ತಿದ್ದೇವೇನೋ ಎನ್ನುವ ಭಾವ. ಜೊತೆಗೆ ನೀಳಾದೇವಿಯವರ ಪರಿಚಯ ಕೂಡ ನಮಗೆ ಈ ಲೇಖನದ ಮೂಲಕ ತಿಳಿಯುತ್ತದೆ. ಅವರ ಕಾದಂಬರಿಗಳನ್ನು ಓದದವರು ಬಹುಶಃ ನಮ್ಮಲ್ಲಿ ಯಾರೂ ಇರಲಾರರು. ಆದರೆ 92ರ ಈ ಇಳಿ ವಯಸ್ಸಿನಲ್ಲಿಯೂ ಅವರ ಚಿಮ್ಮುವ ಉತ್ಸಾಹ, ಆಲೋಚನೆಗಳು, ಬರಹ ಇತ್ಯಾದಿಗಳು ನಮ್ಮನ್ನು ಅಚ್ಚರಿಪಡಿಸುತ್ತವೆ. ಬಹಳಷ್ಟು ಕಾಲ ಲೇಖಕಿಯರ ಸಂಘದಲ್ಲಿ ತೊಡಗಿಕೊಂಡು ಕೆಲಸ ಮಾಡುತ್ತಿರುವುದರಿಂದ ರೇಣುಕಾರ ಅನುಭವ ಬಹಳ ವಿಸ್ತಾರವಾದದ್ದು. ಹೀಗೆ ನಿಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿರಿ ರೇಣುಕಾ ಅವರೇ, ನಿಮಗೆ ಅಭಿನಂದನೆಗಳು.

23. ಖುತ – ರಾಧಿಕಾ ಗುಜ್ಜರ್

ಶ್ರೀಮತಿ ರಾಧಿಕಾ ಗುಜ್ಜರ್ ಅವರು ವಿಶಿಷ್ಟ ಪ್ರತಿಮೆಗಳನ್ನು ಇಟ್ಟುಕೊಂಡು ಮನಮುಟ್ಟುವಂತೆ, ಭಾವನೆಗಳು ಅರಳುವಂತೆ ಕವನ ಕಟ್ಟಿಕೊಡುವುದರಲ್ಲಿ ಸಿದ್ಧಹಸ್ತರು. ಪ್ರಸ್ತುತ 'ಖುತ' ಎಂಬ ಕವನ ಕೂಡ ಅದೇ ಸಾಲಿಗೆ ಸೇರುತ್ತದೆ. ಬಾಲ್ಯದಲ್ಲಿನ ಪ್ರೀತಿ ಪ್ರೇಮಗಳು, ಎಳೆಯ ಮರದಲ್ಲಿ ಗೀರು ಸುಲಭವಾಗಿ ಮೂಡುವಂತೆ ಆಳವಾಗಿ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಜೀವನದುದ್ದಕ್ಕೂ ಅದು ತನ್ನ ಗುರುತನ್ನು ಗಟ್ಟಿಗೊಳಿಸುತ್ತಾ ಹೋಗುತ್ತದೆ. ಪ್ರಾಣಿಗಳಿಗೆ ಹಾಗಲ್ಲ. ಅವುಗಳ ರೀತಿ ನೀತಿಯೇ ಬೇರೆ, ಮನುಷ್ಯರ ರೀತಿ ನೀತಿಯೇ ಬೇರೆ. ಒಂದು ಮರದ ಪ್ರತಿಮೆಯನ್ನು ಇಟ್ಟುಕೊಂಡು ಹೆಣ್ಣು ಗಂಡಿನ ಪ್ರೀತಿಯ ರೀತಿಯನ್ನು ಬಹಳ ಸುಂದರವಾಗಿ ಈ ಕವನದ ಮೂಲಕ ಚಿತ್ರಿಸಿದ್ದಾರೆ ರಾಧಿಕಾ ಗುಜ್ಜರ್. 'ಖುತ' ಅನ್ನುವ ಶೀರ್ಷಿಕೆಯೇ ತುಂಬಾ ಇಷ್ಟವಾಯಿತು. ಮನದಾಳದಲ್ಲಿ ಮೊತ್ತ ಮೊದಲು ಮೂಡುವ, ಸತ್ಯಕ್ಕೆಡೆ ಮಾಡಿ ಕೊಡುವ ಭಾವವೇ ಖುತ. ಅದರ ಸೂಕ್ಷ್ಮತೆಯನ್ನು ಈ ಸುಂದರ ಕವನದಲ್ಲಿ ನಾವು ಕಾಣಬಹುದು. ರಾಧಿಕಾ ಗುಜ್ಜರರಿಗೆ ಹೃತ್ಪೂರ್ವಕ ಅಭಿನಂದನೆಗಳು.

24. ಹೇಳಿ ಹೋಗಬಾರದೇ? – ಶಾಂತಿ ವಾಸು

ವಿರಹ ವೇದನೆಯನ್ನು ಒಂದು ಕಾವ್ಯವನ್ನಾಗಿ ರಚಿಸಿದ ಕಾಳಿದಾಸ ಅಂದಿಗೂ ಇಂದಿಗೂ ಮಾನ್ಯ. ಹಲವಾರು ವರ್ಷಗಳ ಕಾಲ ಜೊತೆ ಜೊತೆಗೆ ಸಾಂಗತ್ಯದಲ್ಲಿ ಬದುಕನ್ನು ನಡೆಸಿ ಮಧ್ಯದಲ್ಲಿ ಕೈಬಿಟ್ಟು ಮರೆಯಾದಾಗ ಆಗುವ ವೇದನೆ ಸಹಿಸಲಸಾಧ್ಯ, ಆದರೂ ಅನಿವಾರ್ಯ. ಎದೆಯೊಳಗಿನ ನೋವನ್ನು ಹೇಗಾದರೂ ಸರಿ, ಹೊರಗೆ ಹರಿಯ ಬಿಡಬೇಕು, ಹಗುರಾಗಬೇಕು. ಮಾತೋ, ಕಾವ್ಯವೋ, ಕವನವೋ ಕಥೆಯೋ, ಹಾಡೋ, ಯಾವುದಾದರೊಂದು ರೂಪದಲ್ಲಿ ಹೊರ ಹಾಕಿದಾಗ ಮನಸ್ಸು ಸ್ವಲ್ಪ ಸಮಾಧಾನಗೊಳ್ಳುತ್ತದೆ. ಈ ರೀತಿಯಾಗಿ ವೇದನೆಯ ಭಾವನೆಗಳನ್ನು ಹೊರ ಹಾಕಿ ಸುಂದರ ಕವನವನ್ನು ರಚಿಸಿರುವುದು ಶ್ರೀಮತಿ ಶಾಂತಿ ವಾಸು ಅವರು. ಮನ ಕಲಕುವ ಹಾಗೆ, ಹೇಳಿ ಹೋಗಬಾರದೇ? ಹೇಳಿ ಹೋಗಬಾರದೇ? ಹೇಳಿ ಹೋಗಬಾರದೇ? ಎಂದು ಪ್ರತಿ ಚರಣದಲ್ಲೂ ಅವರು ಕೇಳುವ ರೀತಿ ನಮ್ಮ ಎದೆಯಲ್ಲಿಯೂ ನೋವಿನ ತರಂಗಗಳನ್ನೆಬ್ಬಿಸುತ್ತವೆ. ನಿಮ್ಮ ನೋವಿನೊಂದಿಗೆ ನಾವೆಲ್ಲರೂ ಇದ್ದೇವೆ ಶಾಂತಿಯವರೇ. ನೋವಿನ ಸ್ಥಿತಿಯಲ್ಲಿಯೂ, ನೋವ ಮರೆಯುವ ಪ್ರಯತ್ನದಂತೆ ಕವನ ರಚಿಸಿದ್ದಕ್ಕಾಗಿ ಅಭಿನಂದನೆಗಳು.

ಎಲ್ಲರಿಗೂ ಮತ್ತೊಮ್ಮೆ ಹೃತ್ಪೂರ್ವಕ ಧನ್ಯವಾದಗಳು.

***